ಸಂಪುಟ 20 ಸಂಚಿಕೆ 31 ಜುಲೈ 26-ಆಗಸ್ಟ್ 1, 1999 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ಜನತಾದಳ ಒಡಕಿನ ಬಗ್ಗೆ
ಕಾಂ. ಸುರ್ಜಿತ್

ರೈತ ಬಂಡಾಯದ ನೆನಪು



ಕುಂಬ್ಳೆ ವೆಂಕಿಯ ದಿಟ್ಟತನ





ಪಟೇಲ್ ಸರ್ಕಾರವೂ ವಿಸರ್ಜನೆಯಾಗಲಿ

ಕರ್ನಾಟಕದ ವಿಧಾನಸಭೆ ವಿಸರ್ಜನೆಗೊಂಡಿದೆ ಆದರೆ ಪಟೇಲರ ಸರ್ಕಾರವನ್ನು ಉಳಿಸಿಕೊಳ್ಳಲಾಗಿದೆ. ವಿಧಾನಸಭೆಯಲ್ಲಿ ಶಾಸಕರ ಬಹುಮತದ ಬೆಂಬಲ ತಮಗೇ ಇದೆ ವಿಧಾನಸಭೆ ವಿಸರ್ಜನೆಗೆ ಕೋರಲಾಗುವುದಿಲ್ಲ ಎಂದೆಲ್ಲಾ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಪಟೇಲರು ತಮಗೆ ಬೆಂಬಲ ಪಕ್ಷದಲ್ಲಿಯೂ, ಚುನಾಯಿತ ಜನಪ್ರತಿನಿಧಿಗಳ ನಡುವೆಯೂ ಇಲ್ಲವೆಂಬುದು ಅರಿವಾಗತೊಡಗುತ್ತಿದಂತೆ ದಿಢೀರನೇ ತಮ್ಮ ಮಂತ್ರಿಮಂಡಲದ ಎಂಟು ಸಚಿವರನ್ನು ವಜಾಗೊಳಿಸಿ, ನಂತರ ವಿಧಾನಸಭೆ ವಿಸರ್ಜಿಸಲು ರಾಜ್ಯಪಾಲರನ್ನು ಕೋರಿದ್ದರು. ಅದರಂತೆ ರಾಜ್ಯಪಾಲರು ಆ ಕೋರಿಕೆಯನ್ನು ಅಂಗೀಕರಿಸಿದರು. ಇದು ಕೆಲವೇ ನಿಮಿಷಗಳಲ್ಲಿ ನಡೆದ ವಿದ್ಯಮಾನ.

ಆದರೆ ದೇವೇಗೌಡ, ಸಿದ್ದರಾಮಯ್ಯನವರ ಬಣದ ಆಹವಾಲುಗಳನ್ನು ಕೇಳದೆ ಒಟ್ಟು ರಾಜಕೀಯ ಪರಿಸ್ಥಿತಿಯ ತುಲನೆ ಹಾಗೂ ವಿಚಾರವಿನಿಮಯ ಮಾಡದೆ ಪಟೇಲರ ಶಿಫಾರಸ್ಸನ್ನು ಕೂಡಲೇ ಒಪ್ಪಿ ಆಜ್ಞೆ ಹೊರಡಿಸಿದ ರಾಜ್ಯಪಾಲರ 'ಮಿಂಚಿನ ಕಾರ್ಯ'ದ ಬಗ್ಗೆ ಎಲ್ಲರಿಗೂ ಅನುಮಾನ. ಅದರ ಹಿಂದೆ ಏನೆಲ್ಲಾ ನಡೆದಿರಬಹುದೆಂಬುದು ಸದ್ಯಕ್ಕೆ ನಿಗೂಢ. ಪ್ರತೀ ರಾಜಕೀಯ ಬಿಕ್ಕಟ್ಟಿನ ಸಂದರ್ಭದಲ್ಲಿಯೂ 'ಅದೃಷ್ಟ' ಖುಲಾಯಿಸಿಕೊಂಡ ಅನೇಕ ಉದಾಹರಣೆ ಕಣ್ಣೆದುರೇ ಇವೆ. ಹಿಂಬಾಗಿಲ ಅಧಿಕಾರ ನಡೆಸುವ ಬಿಜೆಪಿ ನಡೆಸುತ್ತಿರುವ ಕುಯುಕ್ತಿಗಳ ಬಗ್ಗೆ ಎಚ್ಚರವೂ ಅಗತ್ಯ.


ಬಹುಮತ ತಮಗಿಲ್ಲ ಎಂದು ಖಾತ್ರಿಯಾದ ಕೂಡಲೇ ಪಟೇಲರು ಮಾಡಬೇಕಿದ್ದ ಮೊದಲ ಕೆಲಸವೆಂದರೆ ಸರ್ಕಾರ ರಾಜಿನಾಮೆ ನೀಡಬೇಕಾಗಿತ್ತು. ಆದರೆ ಅವರು ಹಾಗೇ ಮಾಡಲಿಲ್ಲ. ಎಲ್ಲಾ ಮೌಲ್ಯ, ಹೊಣೆಗಳನ್ನು ಗಾಳಿಗೆ ತೂರಿರುವ ಪಟೇಲರು ಮುಖ ಉಳಿಸಿಕೊಳ್ಳಲು ಸರ್ಕಾರ ಉಳಿಸಿಕೊಂಡು, ವಿಧಾನ ಸಭೆ ವಿಸರ್ಜನೆಗೆ ಶಿಫಾರಸು ಮಾಡಿರುದು ರಾಜಕೀಯವಾಗಿ ಅತ್ಯಂತ ಅನೈತಿಕವಾದದ್ದು, ಖಂಡನೀಯವಾದದ್ದು. ಈ ಕೂಡಲೇ ಸರಕಾರದ ವಿಸರ್ಜನೆ ಆಗಲೇಬೇಕು.

ಸಂಪಾದಕೀಯ

ಬಿಜೆಪಿಯನ್ನು ಕ್ಯಾನ್ಸರ್ ಎಂದು ಕರೆದು ಉಗ್ರವಾಗಿ ಮಾತನಾಡಿದ್ದ ಪಟೇಲರು, ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಬದಲಿಸಿ ಹೋರಾಡಲು ರಾಜ್ಯ ಜನತಾದಳದ ಸಭೆಯಲ್ಲಿ ತೀರ್ಮಾನ ಕೈಗೊಂಡ ಮರುದಿನವೇ ಬಣ್ಣ ಬದಲಾಯಿಸಿದರು. ವಾಜಪೇಯಿಯವರ ಉಪದೇಶಕ್ಕೆ ಮನಸೋತು ಮಿತ್ರಕೂಟದ (NDA) ಭಾಗವಾಗಿ ಜನತಾದಳ ಇರಬೇಕೆಂದು ವಿತಂಡವಾಗಿ ವಾದಿಸತೊಡಗಿದರು. ಇವರ ಬಣದ ವಾದಗಳನ್ನು ರಾಷ್ಟ್ರೀಯ ಜನತಾದಳ 'ರಾಜಕೀಯ ವ್ಯವಹಾರ ಸಮಿತಿ'ಯು ಸ್ಪಷ್ಟವಾಗಿ ತಿರಸ್ಕರಿಸಿತು. ನಂತರ ತಮ್ಮ ಕೆಲವು ಬೆಂಬಲಿಗರೊಂದಿಗೆ ತಮ್ಮಾ ಸಿದ್ಧಾಂತ ಮತ್ತು ಜನತೆಯಿಟ್ಟಿದ್ದ ನಂಬುಗೆಯನ್ನು ಗಾಳಿಗೆ ತೂರಿ ವಿನಾಶಕಾರಿ, ಕೋಮುವಾದಿ ಬಿಜೆಪಿ ಮಿತ್ರ ಕೂಟದ ಭಾಗಿದಾರರಾಗಿದ್ದಾರೆ. ಇದು ಜನತೆಯ ವಿಶ್ವಾಸಕ್ಕೆ ಹಾಗೂ ಧರ್ಮನಿರಪೇಕ್ಷತೆಗೆ ಬಗೆದ ಮಹಾ ದ್ರೋಹ.

ಆದರೆ ಪಟೇಲರ ನಿಲುವನ್ನು ತಿರಸ್ಕರಿಸಿ, ಅಖಿಲ ಭಾರತ ರಾಜಕೀಯ ವ್ಯವಹಾರ ಸಮಿತಿಯ ಬಹುತೇಕ ಇತರೆ ಸದಸ್ಯರು ದೇವೇಗೌಡರನ್ನು ಪಕ್ಷದ ಅಧ್ಯಕ್ಷರನ್ನಾಗಿ ಆಯ್ಕೆಮಾಡಿದ್ದಾರೆ. ಧರ್ಮನಿರಪೇಕ್ಷತೆಯ ನಿಲುಮೆಯನ್ನು ಎತ್ತಿ ಹಿಡಿಯಲು ಅವರೆಲ್ಲಾ ತೀರ್ಮಾನಿಸಿರುವುದು ಸ್ವಾಗತಾರ್ಹ. ಹಾಗೇ ನೋಡಿದರೆ ಜನತಾದಳ ಆರಂಭದಿಂದಲೂ ಹಲವಾರು ನಿರ್ಣಾಯಕ ಸಂದರ್ಭಗಳಲ್ಲಿಯೇ ಬಿಜೆಪಿಯ ವಿರುದ್ಧ ಹೋರಾಡುತ್ತಾ ಬಂದಿದೆ. ದೇವೇಗೌಡರ ಬಣದ ಈಗಿನ ನಿಲುವು ಕೂಡ ದೇಶದಲ್ಲಿ, ಮುಖ್ಯವಾಗಿ ಕರ್ನಾಟಕದಲ್ಲಿ ಸೆಕ್ಯುಲರ್ ಶಕ್ತಿಗಳ ಬೆಳವಣಿಗೆಗೆ ಪ್ರಮುಖ ಕಾಣಿಕೆ ನೀಡುತ್ತದೆ.

ದೇವೇಗೌಡರ ಜೊತೆ ಹಲವು ಕಾರಣಗಳಿಗೆ ಭಿನ್ನಾಭಿಪ್ರಾಯ ಹೊಂದಿ, ಪಟೇಲರ ಜೊತೆಗಿರುವ ಮುಖಂಡರು, ಕಾರ್ಯಕರ್ತರು ಬಿಜೆಪಿಯ ಘಾತಕತೆ, ಇದಕ್ಕೆ ಬೆಂಬಲಗಳಿಸಲು ಹಲವಾರು ಪಿತೂರಿಗಳನ್ನು ಹೊಸೆಯುತ್ತಿರುವ ರಾಮಕೃಷ್ಣ ಹೆಗಡೆ, ಜಾರ್ಜ್ ಫರ್ನಾಂಡೀಸ್‌ರಂತಹ ಪಾತ್ರಗಳನ್ನು ಮನಗಂಡು ದೇಶದ ಹಿತಕ್ಕಾಗಿ, ರಾಜ್ಯದ ಜನತೆಯ ಹಿತಕ್ಕಾಗಿ ತಮ್ಮ ಬಣದ ಹಿತವನ್ನು ಬದಿಗೊತ್ತಿ ಧರ್ಮನಿರಪೇಕ್ಷತೆಯನ್ನು ಎತ್ತಿ ಹಿಡಿಯಲು ಮುಂದಾಗಬೇಕು. ರಾಜ್ಯದಲ್ಲಿ ಬಿಜೆಪಿ ಕಾಂಗ್ರೆಸ್‌ಗಳ ಎದುರು ಹೋರಾಡುವ ಶಕ್ತಿಯಾಗಿ ಮೂಡಿಬರಬೇಕು. ಕೋಮುವಾದಿಗಳನ್ನು, ಅದರ ಸಮರ್ಥಕರನ್ನು ಮೂಲೆ ಗುಂಪು ಮಾಡಬೇಕು. ಅಂತಹ ಅವಕಾಶಗಳು ಇಂದು ವಿಫಲವಾಗಿದೆ. ಇದಕ್ಕೆ ರಾಜ್ಯದ ಜನತೆ ಸದಾ ಸ್ಪಂದಿಸುತ್ತಾ ಬಂದಿದ್ದಾರೆ. ಈ ದಿಕ್ಕಿನಲ್ಲಿ ರಾಜಕೀಯ ಪ್ರಕ್ರಿಯೆಗಳು ಸಾಗಬೇಕು.



ಕೃಪೆ: 'ದಿ ಹಿಂದು'ನಲ್ಲಿ ಸುರೇಂದ್ರನ್

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಜೆ.ಹೆಚ್. ಪಟೇಲ್, ಜಾರ್ಜ್ ಫರ್ನಾಂಡೀಸ್ ಯಾವ ರೀತಿಯ ಸಮಾಜವಾದಿಗಳು ಎಂದು ಕೇಳಿದ ಪ್ರಶ್ನೆಗೆ ಐಕ್ಯರಂಗ ಕೊಟ್ಟ ಸುದೀರ್ಘ ಉತ್ತರವನ್ನು ನೋಡಿದೆ. ಅದರಲ್ಲಿ ವಿವಿಧ ರೀತಿಯ ಸಮಾಜವಾದಿಗಳ ಬಗ್ಗೆ ವಿವರಿಸಿದ್ದೀರಿ. ಆದರೆ ಅದರಲ್ಲಿ ಜೆ.ಹೆಚ್.ಪಟೇಲ್ ಮತ್ತು ಜಾರ್ಜ್ ಫರ್ನಾಂಡೀಸ್ ಇವರು ಮತ್ತೆ ನೆಹರು, ಇಂದಿರಾ ಗಾಂಧಿ ಇವರು ಎಂತಹ ಸಮಾಜವಾದಿಗಳು ದಯವಿಟ್ಟು ತಿಳಿಸಿ? ಮತ್ತೆ ಇತ್ತೀಚೆಗೆ ಜೆ.ಹೆಚ್. ಪಟೇಲ್, ಫರ್ನಾಂಡೀಸ್, ಹೆಗಡೆಯವರು ಸಮಾಜವಾದಿಗಳ ಐಕ್ಯತೆಯ ಹೆಸರಿನಲ್ಲಿ ಬಿಜೆಪಿ ನೇತೃತ್ವದ ಕೂಟದಲ್ಲಿ ಒಂದಾಗಿಬಿಟ್ಟಿದ್ದಾರೆ ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಬಿ.ರಾಜಶೇಖರಮೂರ್ತಿ

ಸಮಾಜವಾದ ಬಡಜನರಲ್ಲಿ ಹೆಚ್ಚು ಹೆಚ್ಚು ಜನಪ್ರಿಯವಾದಂತೆಲ್ಲಾ ಸಮಾಜವಾದವನ್ನು ದುರುಪಯೋಗ ಪಡಿಸಿಕೊಳ್ಳುವ ಪ್ರವೃತ್ತಿ ಹೆಚ್ಚಾಯಿತು ಎಂಬುದನ್ನು ಐಕ್ಯರಂಗದ 29 ನೇ. ಸಂಚಿಕೆ (ಜುಲೈ 12 ರಿಂದ 18) ಯಲ್ಲಿ ಓದಿದ್ದೀರಿ. ಆ ಸಂಚಿಕೆಯಲ್ಲಿ ವಿವರಿಸಿದ್ದಂತೆ ಪಾಳೇಗಾರಿ ಸಮಾಜವಾದ, ಬಂಡವಾಳಶಾಹಿ ಸಮಾಜವಾದ, ಪುಟ್ಟ ಬಂಡವಾಳಶಾಹಿ ಸಮಾಜವಾದ ಮತ್ತು ವಿಮರ್ಶಾತ್ಮಕ ಕಾಲ್ಪನಿಕ ಸಮಾಜವಾದ ಎಂಬ ವಿಧಗಳನ್ನು 150 ವರ್ಷದ ಮೊದಲೇ ಗುರುತಿಸಲಾಗಿದೆ ಇದರಲ್ಲಿ ನೆಹರು ಮತ್ತು ಇಂದಿರಾ ಗಾಂಧಿಯವರು ಜಗತ್ತಿನಲ್ಲಿ ಬಲವಾಗಿರುವ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಎದುರಿಸುತ್ತಾ ಭಾರತದಲ್ಲಿ ಬಂಡವಾಳಶಾಹಿ ಪ್ರಭುತ್ವವನ್ನು ಸ್ಥಾಪಿಸಲು ಜನರ ಬೆಂಬಲ ಪಡೆಯಲೆಂದು ಸಮಾಜವಾದದ ಮಾತನ್ನಾರಂಭಿಸಿದರು. ಕೆಲವು ಬಡವರ ಕಲ್ಯಾಣ ಕ್ರಮಗಳನ್ನು ಕೈಗೊಳ್ಳುವ ಮೂಲಕ ಜನರಿಗೆ ಮುಂಕುಬೂದಿ ಎರಚಿ ಅವರ ಮತಗಳನ್ನು ಗಳಿಸಿಕೊಳ್ಳುವುದರಲ್ಲಿ ಕೆಲಕಾಲ ಅವರು ಯಶಸ್ವಿಯಾದರು. ಇದು ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಬಂಡವಾಳಶಾಹಿ ಸಮಾಜವಾದ ತಳೆದ ರೂಪವಾಗಿತ್ತು.

ಕೈಗಾರಿಕೆ ಮತ್ತು ವಾಣಿಜ್ಯದ ಬೆಳವಣಿಗೆಯಲ್ಲಿ ಬಹಳ ಹಿಂದುಳಿದ ದೇಶಗಳಲ್ಲಿ ಅದರಲ್ಲಿಯೂ ಬಂಡವಾಳಶಾಹಿ ಬೆಳವಣಿಗೆ ಬಹಳ ದೀರ್ಘ ಕಾಲವನ್ನು ತೆಗೆದು ಕೊಳ್ಳುತ್ತಿರುವ ಭಾರತದಂತಹ ಸಾಹುಕಾರಗಳಾಗಿದ್ದ ದೇಶಗಳಲ್ಲಿ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಹಾಗೂ ಕುಶಲ ಕರ್ಮಿಗಳ ಮೂಲಕ ಸಣ್ಣ ಪುಟ್ಟ ಉತ್ಪಾದನಾ ಕ್ರಿಯೆಗಳಲ್ಲಿ ತೊಡಗಿರು ವವರು ಬಹುದೊಡ್ಡ ಸಂಖ್ಯೆಯಲ್ಲಿ ಇರುತ್ತಾರೆ. ಬಂಡವಾಳಶಾಹಿಯಿಂದ ಇವರ ಜೀವನವು ನಿರಂತರವಾಗಿ ತೊಂದರೆಗೆ ಅಥವಾ ವಿನಾಶಕ್ಕೆ ಒಳಗಾಗುತ್ತಿರುತ್ತದೆ. ಆದ್ದರಿಂದಾಗಿ ಈ ದುಡಿಯುವ ವರ್ಗಗಳ ನೆಲೆಯಿಂದ ಬಂದ ರಾಜಕಾರಣಿಗಳು ಹಾಗೂ ಬುದ್ಧಿ ಜೀವಿಗಳು(ಸಮಾಜ ವಿಜ್ಞಾನಿಗಳು, ಸಾಹಿತಿಗಳು, ಮತ್ತಿತರರು) ಬಂಡವಾಳಶಾಹಿ ಸಮಾಜವನ್ನು ತೀವ್ರವಾದ ಟೀಕೆಗೆ ಒಳಪಡಿಸುತ್ತಾರೆ. ಸಮಾಜದ ಈ ವಿಮರ್ಶೆಯಿಂದ ಅವರು ಪ್ರಗತಿಪರ ಪಾತ್ರವನ್ನು ಒಂದು ಹಂತದ ವರೆಗೆ ವಹಿಸಿದ್ದರೂ ಕೂಡ ಬಂಡವಾಳಶಾಹಿ ಸಮಾಜಕ್ಕೆ ಪರ್ಯಾಯವಾಗಿ ಇವರು ಸಮಾಜವಾದಿ ಸಮಾಜದ ನಿರ್ಮಾಣಕ್ಕೆ ಬದಲಾಗಿ ಬಂಡವಾಳಶಾಹಿ ಸಮಾಜಕ್ಕಿಂತ ಪೂರ್ವದಲ್ಲಿದ್ದ ಪಾಳೇಗಾರಿ ಸಮಾಜದ ಬಹಳಷ್ಟು ಅಂಶಗಳನ್ನು ಉಳಿಸಿಕೊಳ್ಳಬಯಸುತ್ತಾರೆ. ಹೀಗಾಗಿ ತಮ್ಮ ಕ್ರಿಯೆಯಲ್ಲಿ ಪ್ರಗತಿ ಪರರಾಗದೆ ಪ್ರತಿಗಾಮಿಗಳಾಗುತ್ತಾರೆ. ಹೀಗೆ ಮಾತಿನಲ್ಲಿ ಪ್ರಗತಿಶೀಲತೆ, ಕ್ರಿಯೆಯಲ್ಲಿ ಪ್ರತಿಗಾಮಿ ಈ ಇಬ್ಬಂದಿತನ ಅಥವಾ ವೈರುಧ್ಯ ಜೆ.ಹೆಚ್. ಪಟೇಲ್, ಜಾರ್ಜ್ ಫರ್ನಾಂಡೀಸ್, ಯು.ಆರ್. ಅನಂತಮೂರ್ತಿ ಮೊದಲಾದ ಅನೇಕ ಸಮಾಜವಾದಿಗಳನ್ನು ಬಂಡವಾಳಶಾಹಿ ಗಳಲ್ಲಿಯೇ ಅತ್ಯಂತ ಪ್ರತಿಗಾಮಿಗಳಾದ ಕೋಮುವಾದಿಗಳನ್ನು ಬೆಂಬಲಿಸುವ ಜಾರುವ ದಾರಿಗೆ ದೂಡಿದೆ. ಹಿಂದಿನ ಸಂಚಿಕೆಯಲ್ಲಿಯೇ ವಿವರಿಸಿದಂತೆ ಸಮಾಜವಾದಿಗಳಲ್ಲಿ ಅನೇಕರು ತುರ್ತು ಪರಿಸ್ಥಿತಿಯನ್ನು ಹೇರಿದ ಇಂದಿರಾ ಗಾಂಧಿಯವರ ಪ್ರತಿಗಾಮಿ ಪ್ರಭುತ್ವವನ್ನು ಬೆಂಬಲಿಸಿದ್ದಂತೆಯೇ ಇಂದು ಈ ಸಮಾಜವಾದಿಗಳು ಕೇವಲ ತಮ್ಮ ಸ್ವಾರ್ಥದ, ಭ್ರಷ್ಟತನದ ರಕ್ಷಣೆಗೆ ಪ್ರಜಾಪ್ರಭುತ್ವವನ್ನು ನಾಶಮಾಡಿ ಫ್ಯಾಸಿಸ್ಟ್ ಪ್ರಭುತ್ವವನ್ನು ಹೇರಬಯಸುವ ಕೋಮುವಾದಿಗಳನ್ನು ಅಪ್ಪಿಕೊಳ್ಳುವ ನೀಚ ಕೃತ್ಯಕ್ಕೆ ಇಳಿದ್ದಿದ್ದಾರೆ.

ಕೋಮುವಾದಿ ಸಂಘಟನೆಗಳಿಗೆ ಸಾರ್ವಜನಿಕ ಹಣ ಒದಗಿಸಲು

'ರಾಷ್ಟ್ರೀಯ ಪುನರ್ರಚನಾ ದಳ' ಯೋಜನೆ

ವಾಜಪೇಯಿ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಕ್ಯಾಬಿನೆಟ್ ಮಂತ್ರಿ ಮತ್ತು ರಾಜ್ಯ ಮಂತ್ರಿ ಇಬ್ಬರೂ ಬಿಜೆಪಿಯ ಪ್ರಚಂಡರು ಎಂಬುದು ನಿಮಗೆ ತಿಳಿದಿದೆ - ಎಂ.ಎಂ.ಜೋಷಿ ಮತ್ತು ಉಮಾ ಭಾರತಿ. ಈ ಇಲಾಖೆ ದೇಶದ ಯುವಜನರಿಗೆಂದು 'ರಾಷ್ಟ್ರೀಯ ಪುನರ್ರಚನಾ ದಳ'(NRC) ಎಂಬುದನ್ನು ದೇಶಾದ್ಯಂತ ರಚಿಸಲು ಯೋಜಿಸಿತ್ತು. ಉಸ್ತುವಾರಿ ವಾಜಪೇಯಿ ಸರಕಾರ ಈಗ ಅದನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದೆ. ಇದಕ್ಕೆ ಪ್ರಜಾ ಪ್ರಭುತ್ವವಾದಿ ಯುವಜನ-ವಿದ್ಯಾರ್ಥಿ ಸಂಘಟನೆಗಳು ಭಾರೀ ವಿರೋಧ ವ್ಯಕ್ತಪಡಿಸುತ್ತಿವೆ.

ಯುವಜನರಿಗೆ ಉದ್ಯೋಗವಕಾಶ ನಿರ್ಮಾಣ, ಅನಕ್ಷರತೆಯ ನಿರ್ಮೂಲನ ಇತ್ಯಾದಿ ಗಂಭೀರ ಸಮಸ್ಯೆಗಳ ಬಗ್ಗೆ ಮೌನವಾಗಿರುವ ಈ ಸರಕಾರ ರಾಷ್ಟ್ರೀಯ ಪುನರ್ರಚನೆಯ ಟೊಳ್ಳು ಘೋಷಣೆ ಹಾಕುತ್ತಿದೆ. ಇದು ತನ್ನ ರಾಜಕೀಯ ಹಿತಾಸಕ್ತಿಗಳಿಗಾಗಿ ಹಾಕಿರುವ ಘೋಷಣೆ ಎಂದು ವಿದ್ಯಾರ್ಥಿ-ಯುವಜನ ಸಂಘಟನೆಗಳು ಬಲವಾಗಿ ಖಂಡಿಸಿವೆ.

ಈ ಯೋಜನೆಯನ್ನು ದೇಶಾದ್ಯಂತ 80 ಜಿಲ್ಲೆಗಳಲ್ಲಿ ಜಾರಿ ಮಾಡಲಾಗುತ್ತಿದೆ. ಸಂಬಂಧಪಟ್ಟ ರಾಜ್ಯ ಸರಕಾರಗಳಿಗೆ ಜಿಲ್ಲೆಗಳ ಆಯ್ಕೆಯಲ್ಲಿ ಏನೂ ಪಾತ್ರವೇ ಇಲ್ಲ. ಈ ಮೂಲಕ ಬಿಜೆಪಿ ತನ್ನ ಸ್ವಭಾವಕ್ಕನುಗುಣವಾಗಿ ರಾಜ್ಯಗಳಿಗೆ ಸಮಾನಸ್ಥಾನ-ಮಾನ ಇರಬೇಕೆಂಬ ಒಕ್ಕೂಟ ತತ್ವವನ್ನು ಉಲ್ಲಂಘಿಸಿದೆ. ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ ಸರಕಾರಗಳು ಇದಕ್ಕೆ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿವೆ.

ಈ ರಂಗದಲ್ಲಿ ಪ್ರತಿ ಜಿಲ್ಲೆಯಲ್ಲಿ 1000 ಯುವ ಜನರನ್ನು ಆಯ್ದು ತಿಂಗಳಿಗೆ 1000 ರೂ. ಕೊಡಲಾಗುತ್ತದೆ. ಈ ಯುವಜನರ ಆಯ್ಕೆಗೆ ಆಧಾರವೇನು? ವಾಸ್ತವವಾಗಿ ಸಾರ್ವಜನಿಕ ಹಣದಲ್ಲಿ ಆರ್.ಎಸ್.ಎಸ್. ಸ್ವಯಂ ಸೇವಕರನ್ನು ಸಾಕುವ ಯೋಜನೆ ಯಿದು. ಈ NRG ಸಂಪೂರ್ಣವಾಗಿ ಆರ್.ಎಸ್.ಎಸ್. ಹತೋಟಿಯಲ್ಲಿದೆ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಹಣವನ್ನು ಸಂಬಂಧಪಟ್ಟ ರಾಜ್ಯಮಟ್ಟದ ಇಲಾಖೆಗಳನ್ನು ಇದರಲ್ಲಿ ತೊಡಗಿಸದೆಯೇ ನೇರವಾಗಿ ಈ NRCಗೆ ಕೊಡಲಾಗುತ್ತಿದೆ. ಈ ಮೂಲಕ ಕೋಮುವಾದ ಸಂಘಟನೆ ಗಳಿಗೆ ಸಾರ್ವಜನಿಕ ಹಣ ಒದಗಿಸಲು ಸರಕಾರೀ ಯಂತ್ರದ ದುರುಪಯೋಗ ಮಾಡಿಕೊಳ್ಳಲಾಗಿದೆ. ಉಸ್ತುವಾರಿ ವಾಜಪೇಯಿ ಸರಕಾರದ ನೆರವಿನಿಂದ ಸರ್ಕಾರಿ ಯೋಜನೆಗಳಲ್ಲಿ ಕೈಯಾಡಿಸುವ ಕೋಮುವಾದಿಗಳ ಈ ದುಷ್ಟ ಪ್ರಯತ್ನಗಳನ್ನು ವಿದ್ಯಾರ್ಥಿ ಮತ್ತು ಯುವಜನ ಸಮುದಾಯ ಬಯಲಿಗೆಳೆಯಬೇಕು ಎಂದು ಡಿವೈಎಫ್ಐ ಅಖಿಲ ಭಾರತ ಜಂಟಿ ಕಾರ್ಯದರ್ಶಿ ಹಾಗೂ ತ್ರಿಪುರಾ ಸರಕಾರದ ಯುವ ವ್ಯವಹಾರಗಳ ಮಂತ್ರಿ ಜಿತೇಂದ್ರ ಚೌಧುರಿ ಹಾಗೂ ಎಸ್.ಎಫ್.ಐ. ಅಖಿಲ ಭಾರತ ಜಂಟಿ ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್ ಕರೆ ನೀಡಿದ್ದಾರೆ.



ಕಾಂ. ವಿಮಲಾ ರಣದಿವೆ ಇನ್ನಿಲ್ಲ

ಹಿರಿಯ ಸಿಪಿಐ(ಎಂ) ನಾಯಕಿ, ಕೇಂದ್ರ ಸಮಿತಿಯ ಸದಸ್ಯೆ ಕಾಂ. ವಿಮಲಾ ರಣದಿವೆ 24-7-99 ರಂದು ಮುಂಬೈನಲ್ಲಿ ನಿಧನರಾದ ದುಃಖದ ಸಮಾಚಾರ ಬಂದಿದೆ. ಅವರಿಗೆ 84 ವರ್ಷ ವಯಸ್ಸಾಗಿತ್ತು. ಸಿ.ಐ.ಟಿ.ಯು ಅಖಿಲ ಭಾರತ ಕಾರ್ಯದರ್ಶಿಯಾಗಿ ಪ್ಲಾಂಟೇಷನ್ ಕಾರ್ಮಿಕ ಸಂಘಟನೆ ಮುಖಂಡರಾಗಿ ಕಾಂ. ವಿಮಲಾ ಕಾರ್ಯನಿರ್ವಹಿಸಿದ್ದರು. ಅಖಿಲ ಭಾರತ ದುಡಿಯುವ ಮಹಿಳೆಯರ ಸಂಘಟನೆಯ ಸ್ಥಾಪಕ ಮುಖಂಡರಲ್ಲೊಬ್ಬರಾಗಿದ್ದರು. ಪಕ್ಷದ ರಾಜ್ಯ ಸಮಿತಿಯು ಶ್ರದ್ಧಾಂಜಲಿ ಸಲ್ಲಿಸಿದೆ. ವಿವರ ವರದಿಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಜನತಾದಳದ ಒಡಕು ಬಿಜೆಪಿಗೊಂದು ತೊಡಕು

ಜನರ ನಡುವೆ ಬದುಕಿ ಅವರ ನೆಚ್ಚಿಗೆಗಳಿಸಿ ರಾಜಕಾರಣ ಮಾಡುತ್ತಾ ಒಂದು ನೆಲೆಯನ್ನುಗಳಿಸಿಕೊಳ್ಳದೆ ಸೂತ್ರಕಿತ್ತಗಾಳಿ ಪಟದಂತಿರುವ, ಗಾಳಿಬಂದಾಗ ತೂರಿಕೊಳ್ಳುವ ರಾಜಕಾರಣಿಗಳ ಸಾಲಿಗೆ ಸೇರಿದ ರಾಮಕೃಷ್ಣಹೆಗಡೆಯವರಿಗೆ ಕರ್ನಾಟಕದ ಯಾವೆಡೆಯಿಂದಲೂ ಈಗಲೂ , ಹಿಂದೆಯೂ ಆರಿಸಿ ಬರುವ ಶಕ್ತಿಯಿಲ್ಲ, ನೆಲೆಯಿಲ್ಲ. ಅವರ ಶಕ್ತಿಯೆಲ್ಲಾ ಮೇಲುಮೇಲಿನ ರಾಜಕಾರಣ, ಗುಂಪು ಗಾರಿಕೆ ಚೇಲಾತನಗಳು ಮಾತ್ರ. ಅವರ ಲೋಕಶಕ್ತಿಯ ಶಕ್ತಿಯೂ ಅಷ್ಟೇ. ಆದರೆ ಜನತಾದಳವನ್ನೊಡೆಯುವುದು ಮಾತ್ರ ಶಕ್ತಿ ಎಂದು ಚೆನ್ನಾಗಿ ಅರಿತಿದ್ದ ರಾಮಕೃಷ್ಣ ಹೆಗ್ಗಡೆಯವರು ಅದಕ್ಕಾಗಿ ಬೇತಾಳ ಕಥೆಯ ತ್ರಿವಿಕ್ರಮನಂತೆ ನಿರಂತರವಾಗಿ ಪ್ರಯತ್ನಿಸುತ್ತಲೇ ಇದ್ದರು. ಜನತಾದಳದಲ್ಲಿ ಒಡಕುಂಟು ಮಾಡುವ ಜೆ.ಎಚ್. ಪಟೇಲರು ಹಾಗೂ ದೇವೇಗೌಡರ ನಡುವೆ ಭಿನ್ನಾಭಿಪ್ರಾಯವನ್ನು ಸೃಷ್ಟಿಸುವ ಯಾವುದೇ ಅವಕಾಶವನ್ನು ಬಿಡಲಿಲ್ಲ. ಜೆ.ಎಚ್ ಪಟೇಲರ ಪ್ರತಿಯೊಂದು ಕೆಲಸದಲ್ಲಿಯೂ ದೇವೇಗೌಡರನ್ನು ಹುಡುಕುತ್ತಾ ದೇವೇಗೌಡರ ನೆರಳಿನಿಂದ ಹೊರಗೆ ಬರುವಂತ ಕರೆಕೊಡುತ್ತಾ ಇದ್ದರು. ಈ ಪರಿಸ್ಥಿತಿ ದೇವೇಗೌಡರು, ಅವರ ಮಕ್ಕಳ ಕಾಣಿಕೆಯೂ ಸೇರಿ ಜನತಾದಳದಲ್ಲಿ ಎರಡು ಗುಂಪುಗಳಾಗಿ ಅವರ ನಡುವಿನ ಕಾದಾಟ ದಿನಂಪ್ರತಿ ಸುದ್ದಿಯಾಗಿ ಲೋಕವೇ ರೋಸುಹೋಗುವಂತಾಯಿತು. ಇದರಿಂದ ಜನತಾದಳದೊಂದಿಗಿದ್ದ ಹಲವು ಜನರೂ ಕೂಡ ದೂರ ಸರಿದು ಜನತಾದಳ ಶಕ್ತಿ ಕುಗ್ಗಿತು.

ಒಂದು ಕಡೆ ಜನರನ್ನು ಸೆಳೆದುಕೊಳ್ಳುವ ಜನಪರ ಆಡಳಿತವಿಲ್ಲದೆ, ಮತ್ತೊಂದು ಕಡೆ ಇದ್ದ ಬೆಂಬಲವನ್ನು ಕಳೆದುಕೊಂಡ ಜನತಾದಳದ ನಾಯಕರು ತಮ್ಮಲ್ಲಿಯೇ ನಂಬಿಕೆ ಕಳೆದುಕೊಳ್ಳುವ ಸ್ಥಿತಿ ಇಳಿದರು. ಇಷ್ಟೆಲ್ಲಾ ಆದ ಮೇಲೂ ರಾಮಕೃಷ್ಣ ಹೆಗ್ಗಡೆಯವರ ವಂಚಕ ಭೇದನೀತಿ ಫಲಿಸಲಿಲ್ಲ. ಜನತಾಧಳ ಒಗ್ಗಟ್ಟಿನಿಂದ ಉಳಿಯುವ ಲಕ್ಷಣವೇ ಹೆಚ್ಚು ಕಾಣಿಸತೊಡಗಿತು.

ಜಾರ್ಜ್ ಫರ್ನಾಂಡೀಸ್ ಪ್ರವೇಶ

ಜನತಾದಳನ್ನೊಡೆಯುವುದು ತಮ್ಮೊಬ್ಬರಿಂದಲೇ ಸಾಗದ ಮಾತು ಎಂದು ಕಂಡುಕೊಂಡ ರಾಮಕೃಷ್ಣ ಹೆಗ್ಗಡೆಯವರು ಈ ಮಹಾನ್ ಕೆಲಸಕ್ಕೆ ಜಾರ್ಜ್ ಫರ್ನಾಂಡಿಸ್‌ರ ಸಹಾಯವನ್ನು ಪಡೆದುಕೊಂಡರು. ರಾಜ್ಯದ ಮಟ್ಟದಲ್ಲಿ ಜನತಾದಳವನ್ನೊಡೆಯಬೇಕಾದರೆ ರಾಷ್ಟ್ರಮಟ್ಟದಲ್ಲಿಯೂ ಒಡೆಯಬೇಕಾಗುತ್ತದೆ ಎಂದು ಕಂಡುಕೊಂಡರು. ತಮ್ಮಂತೆಯೆ ಸೂತ್ರವಿಲ್ಲದ ಗಾಳಿಪಟಗಳಾದ ಗುಜ್ರಾಲ್, ಶರದ್ ಯಾದವ್ ಮತ್ತು ತಮ್ಮ ಲಾಲೂ ದ್ವೇಷದಿಂದ ಕುರುಡಾಗಿದ್ದ ರಾಂವಿಲಾಸ್ ಪಾಸ್ವಾನ್ ಗಳನ್ನು ಇವರಿಬ್ಬರೂ ಬಳಸಿಕೊಂಡರು.

ಬಿಜೆಪಿ ಸರ್ಕಾರ ಬೀಳುವ ಸಮಯದಲ್ಲಿ ಈ ನಿಶ್ಚಿತ ಪ್ರಯತ್ನ ನಡೆದರೂ ಜನತಾದಳದ ಎಂಪಿಗಳು ಒಟ್ಟಾಗಿ ಬಿಜೆಪಿ ಸರ್ಕಾರದ ವಿರುದ್ಧ ಮತ ಚಲಾಯಿಸಿದರು. ನಂತರ ಬಿಜೆಪಿಯೇತರ ಸರ್ಕಾರವೊಂದು ಅಸ್ತಿತ್ವಕ್ಕೆ ಬಂದಿದ್ದರೆ ಇಂದು ದೇಶದಲ್ಲಿ ಜಾತ್ಯತೀತ ಶಕ್ತಿಗಳು ಸಬಲ ಸ್ಥಿತಿಯಲ್ಲಿರುತ್ತಿದ್ದರು. ಚುನಾವಣೆಯ ಪರಿಸ್ಥಿತಿಯೇ ಭಿನ್ನವಾಗಿರುತ್ತಿತ್ತು. ಅಧಿಕಾರವಿಲ್ಲದ ರಾಮಕೃಷ್ಣ ಹೆಗ್ಗಡೆ, ಫರ್ನಾಂಡೀಸ್ ಗಳ ಆಟವೂ ನಡೆಯುತ್ತಿರಲಿಲ್ಲ. ಆದರೆ ಮುಲಾಯಂಸಿಂಗ್ ನಂತಹ ಕೆಲವು ನಾಯಕರ ದೂರದೃಷ್ಟಿರಾಹಿತ್ಯ, ಕಾಂಗ್ರೆಸ್ ನ ಏಕ ಪಕ್ಷ ಪ್ರಾಬಲ್ಯದ ಬಯಕೆ ಸೇರಿ ಬಿಜೆಪಿ ಸರ್ಕಾರ ಮುಂದುವರೆಯಿತು. ಇದು ಇತರ ಪಕ್ಷಗಳನ್ನೊಡೆಯುವ ಆಟಕ್ಕೆ ಮತ್ತಷ್ಟು ಅವಕಾಶ ನೀಡಿತು. ಇದಕ್ಕೆ ಮೊದಲ ಬಲಿ ಕಾಂಗ್ರೆಸ್ ಪಕ್ಷವೇ ಆಯಿತು.(ಶರದ್ ಪವಾರ್‌ಗೆ ಉತ್ತೇಜಿಸುವ ಮೂಲಕ)

ವಾಜಪೇಯಿ ಪ್ರವೇಶ

ತಮ್ಮ 13 ತಿಂಗಳ ವಿನಾಶಕಾರಿ ಆಡಳಿತದಿಂದಾಗಿ 1998 ರಲ್ಲಿ ತಮಗೆ ಮತನೀಡಿದ ಜನರ ನಂಬಿಕೆಯನ್ನು ಕಳೆದು ಕೊಂಡಿದ್ದೇವೆ ಎಂದು ಅತ್ಯಂತ ಚೆನ್ನಾಗಿ ಅರಿತವರು ವಾಜಪೇಯಿ. ಕಾರ್ಗಿಲ್ ಯುದ್ಧದ ಬಗ್ಗೆ ಎಷ್ಟೇ ವೀರಾವೇಶವೂ ಕೂಡ ತಮ್ಮ ಸರ್ಕಾರದ ಲೋಪವನ್ನು ಮುಚ್ಚಿಕೊಳ್ಳಲು ಅವಕಾಶ ನೀಡುತ್ತಿಲ್ಲ. ಇಂತಹ ಸಂದರ್ಭದಲ್ಲಿ ಎಲ್ಲಿಂದ ಹೇಗಾದರೂ ಸರಿ ಮತಗಳನ್ನೂ ಗಳಿಸಿಕೊಳ್ಳುವ ಆತುರದಲ್ಲಿದ್ದ ವಾಜಪೇಯಿಯವರ ರಂಗಪ್ರವೇಶವಾಯಿತು. ಎಷ್ಟೇ ಪ್ರಯತ್ನ ಮಾಡಿದರೂ ರಾಮಕೃಷ್ಣಹೆಗ್ಗಡೆ ಹಾಗೂ ಜಾರ್ಜ್ ಫರ್ನಾಂಡೀಸ್‌ಸರಿಂದ ಜನತಾದಳನ್ನೊಡೆಯುವ ಸಾಧ್ಯವಾಗದಾಗ ಜೆ.ಹೆಚ್. ಪಟೇಲರನ್ನು ಅವರ ಜೊತೆಯ ಬಣವನ್ನು ಸೆಳೆದುಕೊಳ್ಳುವ ಪ್ರಯತ್ನಕ್ಕೆ ವಾಜಪೇಯಿ ತಮ್ಮ ಕೈಗೂಡಿಸಿದರು. ಲೋಕಶಕ್ತಿ, ಸಮತಾ ಪಕ್ಷಗಳ ಶಕ್ತಿಯ ಮೇಲೆಯೆ ಅವಲಂಬನೆ ಮಾಡಿ ಜನತಾ ದಳವನ್ನೊಡೆಯುವ ಧೈರ್ಯ ಮಾಡದಾಗಿದ್ದ ಪಟೇಲರ ಬಣಕ್ಕೆ ಈಗ ರೆಕ್ಕೆಗಳು ಮೂಡಿದವು. ಬಿಜೆಪಿಯ ಪ್ರಧಾನಿ ಎರಚಿದ ಕಾಳುಗಳನ್ನು ಆರಿಸಿ ಕೊಳ್ಳಲು ಹಕ್ಕಿಗಳು ಹಾರಿದವು.

ಆಪರೇಷನ್ ವಿಜಯ್‌ಗೆ ಪ್ರಧಾನಿ ವಾಜಪೇಯಿಯವರು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್ ರವರು ಎಷ್ಟು ಗಮನಕೊಟ್ಟರೂ ಇಲ್ಲವೋ? ಆದರೆ ಆಪರೇಷನ್ ಬ್ರೇಕ್ ಗಂತೂ ಸಾಕಷ್ಟು ಗಮನ ನೀಡಿದ್ದಾರೆ.

ಹೀಗೆ ರಾಮಕೃಷ್ಣ ಹೆಗ್ಗಡೆ, ಜಾರ್ಜ್ ಫರ್ನಾಂಡೀಸ್, ವಾಜಪೇಯಿ ಕೂಡಿ ಜನತಾದಳವನ್ನೊಡೆದು ವಿಜಯೋತ್ಸವನ್ನೂ ಆಚರಿಸಲು ಅನುವಾಗುತ್ತಿದ್ದಂತೆ ಅದಕ್ಕೆ ಬಿಜೆಪಿಯೊಳಗಿಂದಲೇ ಅನೇಕ ತೊಡಕುಗಳು ಉದ್ಭವಿಸಿವೆ.

ಜನತಾದಳದ ಒಡಕು

ಬಿಜೆಪಿಯಲ್ಲಿನ ಒಡಕುಗಳನ್ನು ಹೊರತರುತ್ತವೆ.

ಆಪರೇಷನ್ ಬ್ರೇಕ್ ಕಾರ್ಯಾಚರಣೆಯ ಇಡೀ ಅವಧಿಯಲ್ಲಿ ವಾಜಪೇಯಿಯವರು ತಮ್ಮ ಸಹೋದ್ಯೋಗಿ ಅಡ್ವಾನಿ, ಪಕ್ಷದ ಅಧ್ಯಕ್ಷ ಕುಶಭಾವುಠಾಕ್ರೆ, ತಮ್ಮ ಪಕ್ಷದ ಕರ್ನಾಟಕ ರಾಜ್ಯ ಘಟಕವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ ಎಂಬುದು ಬಿಜೆಪಿಯ ಅಂತರಿಕ ಪರಿಸ್ಥಿತಿ, ಅಂತರಿಕ ಚರ್ಚೆ, ಪ್ರಜಾಪ್ರಭುತ್ವಗಳು ಎಷ್ಟರ ಮಟ್ಟಿಗಿವೆ ಎಂದು ಸಾಬೀತಾಗುತ್ತದೆ.

ಹೆಗ್ಗಡೆ- ಜಾರ್ಜ್‌ಗಳ ಕಾರ್ಯಚರಣೆ ಆರಂಭವಾಗುತ್ತಿದಂತೆಯೇ ನಿರಂತರವಾಗಿ ಬಿಜೆಪಿ ರಾಜ್ಯ ನಾಯಕ ಯಡಿಯೂರಪ್ಪ, ಅನಂತ್ ಕುಮಾರ್, ಈಶ್ವರಪ್ಪ, ಮತ್ತಿತರ ಅನೇಕರು ಪುಂಖಾನುಪುಂಖವಾಗಿ ನಮ್ಮ ಸಂಬಂಧ ಕೇವಲ ಲೋಕಶಕ್ತಿಯೊಂದಿಗೆ. ಜನತಾ ದಳದ ನಿರಾಕರಿಸಲ್ಪಟ್ಟ ನಾಯಕು ನಮ್ಮ ಕೂಟಕ್ಕೆ ಬೇಡ ಎಂದು ಹೇಳಿಕೆ ನೀಡಿದ್ದಾರೆ. ಕೊನೆಗೆ ಭಾಜಪದ ರಾಷ್ಟ್ರೀಯ ನಾಯಕರಾದ ಕೆ.ಎಲ್. ಶರ್ಮಾ, ಜೆ.ಪಿ. ಮಾಥುರ್, ವೆಂಕಯ್ಯನಾಯ್ಡು, ಗೋವಿಂದಾಚಾರ್ಯ ಸ್ವತಃ ಬಿಜೆಪಿ ಅಧ್ಯಕ್ಷ ಕುಶಭಾವು ಠಾಕ್ರೆ ಹಾಗೂ ಅಡ್ವಾನಿ ಈ ಕ್ರಮದ ಬಗ್ಗೆ ತಮ್ಮ ವಿರೋಧ ಅಪನಂಬಿಕೆಗಳನ್ನು ವ್ಯಕ್ತಪಡಿಸಿದ್ದಾರೆ.

ಸಮತಾ ಪಕ್ಷ ಲೋಕಶಕ್ತಿಗಳು ಜನತಾದಳದೊಂದಿಗೆ ವಿಲೀನ ಆಗಿಯೇ ಹೋದವು ಎನ್ನುತ್ತಿರುವಾಗಲೂ ಭಾಜಪದ ರಾಷ್ಟ್ರೀಯ ಕಾರ್ಯದರ್ಶಿ ವೆಂಕಯ್ಯನಾಯ್ಡು ರವರ ಸಮ್ಮುಖದಲ್ಲಿ ರಾಜ್ಯ ಪದಾಧಿಕಾರಿಗಳೆಲ್ಲಾ ಸೇರಿ ನಾವು ಜನತಾ ದಳದೊಂದಿಗೆ ಯಾವ ಸಂಬಂಧವನ್ನು ಇಟ್ಟುಕೊಳ್ಳುವುದಿಲ್ಲ ಅದಕ್ಕಾಗಿ ಒತ್ತಾಯಿಸಿದರೆ ಲೋಕಶಕ್ತಿಯೊಂದಿಗೆ ನಮ್ಮ ಸಂಬಂಧ ಕಡಿದುಕೊಳ್ಳುತೇವೆ ಎಂದು ಗುಟುರು ಹಾಕಿದ್ದಾರೆ. ಇದರಿಂದಾಗಿ ಒಂದು ಕಡೆ ಬಿಜೆಪಿಯ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿ ಮಾಡಿದೆ. ಮತ್ತೊಂದು ಕಡೆ ಜೆ.ಎಚ್.ಪಟೇಲರೊಂದಿಗೆ ಹಾರಿದ ಹಕ್ಕಿಗಳಲ್ಲಿ ತಮ್ಮ ಭವಿಷ್ಯವೇನು ಎಂಬ ಆತಂಕ ಮೂಡಿಸಿದೆ.

ಜನತಾದಳದ ತುಣಕನ್ನು ತಮ್ಮ ಮೈತ್ರಿ ಕೂಟಕ್ಕೆ ಒಳಗೊಂಡರೆ ಲೋಕಶಕ್ತಿಗೆ ಹೆಚ್ಚು ಶೀಟುಗಳನ್ನು ಬಿಟ್ಟು ಕೊಡುವಂತಾಗಿ ರಾಜ್ಯ ವಿಧಾನ ಸಭೆಯಲ್ಲಿ ಬಹುಮತ ಪಡೆದು ಬಿಜೆಪಿಯದೇ ರಾಜ್ಯ ಸರ್ಕಾರ ರಚಿಸುವ ಆಸೆಗೆಲ್ಲಿ ಕುತ್ತು ಬಂದಿತೋ? ಯಡಿಯೂರಪ್ಪನವರ ಮುಖ್ಯಮಂತ್ರಿಯಾಗುವ ಕನಸಿಗೆಲ್ಲಿ ಬೆಂಕಿ ಬಿದ್ದಿತೋ? ಎಂಬ ಕಳವಳ ಬಿಜೆಪಿಯ ರಾಜ್ಯ, ರಾಷ್ಟ್ರ ನಾಯಕರನ್ನು ಕಾಡುತ್ತಿದೆ. ಹಾಗೆಯೇ ಜನತಾ ದಳ ಸರ್ಕಾರವನ್ನು ದೂಷಿಸುತ್ತಾ ರಾಜ್ಯದಲ್ಲಿ ಸಂಕಲ್ಪ ಯಾತ್ರೆ, ಮತ್ತೊಂದು ಯಾತ್ರೆ ಮಾಡಿದ ನಾವು ಈಗ ಚುನಾವಣೆಯ ಸಮಯದಲ್ಲಿ ಯಾರನ್ನೂ ದೂರಿ ತಮಗೆ ಮತ ಕೇಳಬೇಕು ಎಂಬ ಪ್ರಶ್ನೆಯಾಗಿದೆ.

ಅದೇ ಸಂದಂರ್ಭದಲ್ಲಿ ದೇವೇಗೌಡರು ಅವರ ಜನತಾದಳ ರಾಜ್ಯ ಕಾರ್ಯಕರ್ತರ ಸಮಾವೇಶ ತಮ್ಮ ಮೇಲೆ ಬರುತ್ತಿದ್ದ ಆರೋಪವನ್ನು ಅಲ್ಲಗಳೆದು ತಾವು ಸ್ವತಂತ್ರವಾಗಿಯೇ ಸ್ಪರ್ಧಿಸುತ್ತೇವೆ. ಕಾರ್ಯಕರ್ತರು ತಮ್ಮೊಂದಿಗಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಶಾಸಕರಲ್ಲಿ ತಮ್ಮ ಬಹುಮತ ಸಾಬೀತು ಮಾಡಲು ಸಹಿ ಸಂಗ್ರಹ ಆರಂಭಿಸಿದ್ದಾರೆ.

ಕಾಂಗ್ರೆಸ್ ನಿಂದ ದೂರವುಳಿದು ತಮ್ಮ ಪಕ್ಷವನ್ನು ಕಟ್ಟುವ ಈ ಪ್ರಯತ್ನ ಕರ್ನಾಟಕದಲ್ಲಿ ಬಿಜೆಪಿಯ ಬೆಳವಣಿಗೆಗೆ ಆತಂಕವೊಡ್ಡಲಿದೆ ಹಾಗೂ ಕಾಂಗ್ರೆಸೇತರ ಜಾತ್ಯಾತೀತ ಶಕ್ತಿಗಳ ಕೂಟವೊಂದರ ರಚನೆಗೆ ಹಾಗೂ ಬೆಳವಣಿಗೆಗೆ ಅನುಕೂಲ ಪರಿಸ್ಥಿತಿಯನ್ನು ಸೃಷ್ಟಿಸಲಿದೆ. ಕಾಂ. ಸುರ್ಜಿತ್ ರವರು ತಮ್ಮ ಲೇಖನದಲ್ಲಿ ಹೇಳಿದಂತೆ ಈಗಲಾದರೂ ಜನತಾದಳ ಜನತೆಯ ನೈಜ ಸಮಸ್ಯೆಗಳತ್ತ ಗಮನ ಹರಿಸಬೇಕು. ಜನರನ್ನು ತಮ್ಮ ಕಾರ್ಯಕರ್ತರನ್ನು ಒಗ್ಗೂಡಿಸುವ ಸಂಘಟಿತ ಪ್ರಯತ್ನ ಮಾಡಬೇಕು..

○

ಜನತಾದಳ ಒಡಕಿನ ಬಗ್ಗೆ ಕಾಂ. ಸುರ್ಜಿತ್

ಭಾರತೀಯ ಜನತಾಪಕ್ಷ ಮತ್ತು ಅದರ ಮೈತ್ರಿಕೂಟದ ವಿನಾಶಕಾರಿ ಆಡಳಿತವನ್ನು ತಡೆಗಟ್ಟಲು ದೇಶಾದ್ಯಂತ ಎಡ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಟ್ಟುಗೂಡಿಸಲು ಪ್ರಯತ್ನ ನಡೆಸುತ್ತಿರುವಾಗಲೇ ಜನತಾದಳ ಇಬ್ಭಾಗವಾಗಿರುವುದು ಶೋಚನೀಯ. ಎರಡು ದಿನಗಳ ತೀವ್ರ ಆತಂಕ ಏಳುಬೀಳುಗಳ ನಂತರ ಜನತಾದಳದ ರಾಜಕೀಯ ವ್ಯವಹಾರ ಸಮಿತಿಯ ಆರು ಜನ ಸದಸ್ಯರು ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ(ಎನ್.ಡಿ.ಎ)ದೊಂದಿಗೆ ಕೈಜೋಡಿಸಿದ್ದಾರೆ. ಅವರಲ್ಲಿ ಪಕ್ಷದ ಅಧ್ಯಕ್ಷ ಶರದ್ ಯಾದವ್, ಮಾಜಿ ಪ್ರಧಾನಿ ಐ.ಕೆ.ಗುಜ್ರಾಲ್, ರಾಮ್ ವಿಲಾಸ್ ಪಾಸ್ವಾನ್ ಮತ್ತು ಕರ್ನಾಟಕ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಸೇರಿದ್ದಾರೆ.

ಬಿಜೆಪಿಯ ಶತಪ್ರಯತ್ನ

ಸಮಾಜವಾದಿ ಶಕ್ತಿಗಳ ಐಕ್ಯತೆಯ ಹೆಸರಿನಲ್ಲಿ ಬಿಜೆಪಿ ನೇತೃತ್ವದ ಸರಕಾರದ ಭಾಗವಾಗಿರುವ ರಾಮಕೃಷ್ಣ ಹೆಗಡೆ ಮತ್ತು ಜಾರ್ಜ್ ಫರ್ನಾಂಡೀಸ್ ಅವರು ಮೊದಲು ಮುತುವರ್ಜಿ ವಹಿಸಿದ್ದರೆ, ನಂತರ ಶರದ್ ಯಾದವ್ ಗುಂಪು ಲೋಕಶಕ್ತಿ ಮತ್ತು ಸಮತಾಪಾರ್ಟಿಯೊಂದಿಗೆ ವಿಲೀನಗೊಂಡು ಎನ್.ಡಿ.ಎ. ಬಳಗದಲ್ಲಿ ದೊಡ್ಡ ಶಕ್ತಿಯಾಗಬೇಕೆಂದು ಬಯಸುತ್ತಿದೆ. ಕೆಲವರು 'ಹಿಂದಿನ ಜನತಾ ಪರಿವಾರ'ದ ಹೆಸರಿನಲ್ಲಿ ಅದನ್ನೇ ಸಾಧಿಸಲು ಹೊರಟಿದ್ದು ನವೀನ್ ಪಾಟ್ನಾಯಕ್ ಅವರ ಬಿಜು ಜನತಾದಳ(ಬಿಜೆಡಿ)ಯನ್ನು ಸೇರಿಸಲು ಪ್ರಯತ್ನ ನಡೆದಿದೆ.

ಬಿಜೆಪಿಯು ತನಗೆ ಪ್ರಬಲ ಪ್ರತಿರೋಧವನ್ನು ಒಡ್ಡಬಹುದಾದ ಎಡ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಡೆಯಲು ಮಾಡಿದ ಪ್ರಯತ್ನದ ಒಂದು ಭಾಗವಾಗಿ ಜನತಾದಳದ ವಿಭಜನೆ ನಡೆದಿದೆ. ಈ ಹಿಂದೆ ಮಹಾರಾಷ್ಟ್ರದಲ್ಲಿ ಶರದ್ ಪವಾರ್ ಗುಂಪನ್ನು ಕಾಂಗ್ರೆಸ್ಸಿನಿಂದ ಬೇರ್ಪಡಿಸುವುದರ ಮೂಲಕ ಬಿಜೆಪಿ ವಿರೋಧಿ ಓಟುಗಳನ್ನು ಒಡೆದು ತನಗೆ ಅನುಕೂಲ ಮಾಡಿಕೊಂಡಿತು. ಇದಾದ ಸ್ವಲ್ಪ ಸಮಯದಲ್ಲೇ ಬಿಜೆಪಿ-ಶಿವಸೇನಾ ಕೂಟವು ವಿಧಾನ ಸಭೆಯನ್ನು ವಿಸರ್ಜಿಸಲು ಶಿಫಾರಸು ಮಾಡಿದೆ. ಇತರೆ ಪಕ್ಷಗಳ ನಡುವೆ ಒಡಕು ತರುವ ಸಂಚನ್ನು ಬಿಜೆಪಿ ಮಾಡುತ್ತಿದೆ.

1998 ರಲ್ಲಿ ಜಲಂಧರ್ ಲೋಕಸಭಾ ಕ್ಷೇತ್ರದಿಂದ ಗಜ್ರಾಲ್ ಸ್ಪರ್ಧಿಸಿದಾಗ ಅಕಾಲಿದಳ ಮತ್ತು ಬಿಜೆಪಿ ಬೆಂಬಲ ನೀಡಿದ್ದರೆ, ಹಾಜಿಪುರ ಕ್ಷೇತ್ರದಲ್ಲಿ ಪಾಸ್ವಾನ್ ಅವರು ಬಿಜೆಪಿ ಮತ್ತು ಸಮತಾದ ಬೆಂಬಲದಿಂದಲೇ ಆಯ್ಕೆಯಾದರು. ಬಿಹಾರದ ಮಾಧೇಪುರದಲ್ಲಿ ಚುನಾವಣೆಯ ನಂತರ ಕೆಲವು ಪ್ರದೇಶಗಳಲ್ಲಿ ನಡೆದ ಪುನರ್ ಮತದಾನದಲ್ಲಿ ಬಿಜೆಪಿ-ಸಮತಾ ಕೂಟವು ಶರದ್ ಯಾದವ್ ಅವರನ್ನು ಬೆಂಬಲಿಸಿತು.

ಮಾಜಿ ಪ್ರಧಾನಿ ದೇವೇಗೌಡ ಪ್ರಮುಖ ಸಮಾಜವಾದಿಗಳಾದ ಸುರೇಂದ್ರ ಮೋಹನ್ ಮತ್ತು ಮಧು ದಂಡವತೆ, ಜೈಪಾಲ್ ರೆಡ್ಡಿ, ಶ್ರೀಕಾಂತ್ ಜೆನಾ, ಸಿ.ಎಂ.ಇಬ್ರಾಹಿಂ ಮತ್ತು ಎಸ್.ಆರ್.ಬೊಮ್ಮಾಯಿ ಮೊದಲಾದವರನ್ನು ಒಳಗೊಂಡ 11 ಜನರ ಬಹುಮತದ ಜನತಾದಳ ರಾಜಕೀಯ ವ್ಯವಹಾರಗಳ ಸಮಿತಿಯು ಯಾವುದೇ ರೀತಿಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಸಲ್ಲದು ಎಂಬ ನಿರ್ಧಾರಕ್ಕೆ ಬಂದಿತು. ಹಲವಾರು ರಾಜ್ಯಗಳಲ್ಲಿ ಜನತಾದಳದಲ್ಲಿನ ಶಾಸಕರು, ಸಂಸದರು ಮಾಜಿ ಸಂಸದರಲ್ಲಿ ಬಹುತೇಕ ಇವರ ಬೆಂಬಲಕ್ಕೆ ಇದ್ದಾರೆ. ಈ ವಿಭಾಗವು ಪಕ್ಷಾಂತರಗೊಂಡವರನ್ನು ಕೈಬಿಟ್ಟು ಹೆಚ್.ಡಿ.ದೇವೇಗೌಡ ಅವರನ್ನು ಜನತಾದಳದ ಅಧ್ಯಕ್ಷರನ್ನಾಗಿ ಚುನಾಯಿಸಿದೆ.

ಹಿಂದಿನ ಒಂದು ದಶಕದಲ್ಲಿ ಎರಡು ಬಾರಿ ಕಾಂಗ್ರೆಸ್ಸೇತರ ಸರಕಾರವನ್ನು ಪ್ರತಿನಿಧಿಸಿದ್ದ ಹಾಗೂ ರಾಷ್ಟ್ರ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಜನತಾದಳವು ಹೀಗೇಕೆ ಆಯಿತು? 1998 ರ ಲೋಕಸಭಾ ಚುನಾವಣೆಯಲ್ಲಿ ಅದು ಹಿಂದೆ ಇದ್ದ 96 ಸೀಟುಗಳಿಂದ 6 ಕ್ಕೆ ಇಳಿಯಬೇಕಾಯಿತು.

ಇಂತಹ ಪರಿಸ್ಥಿತಿಗೆ ಕಾರಣಗಳೇನು?

ಸಂಯುಕ್ತ ರಂಗ ಸರಕಾರದಲ್ಲಿ ಜನತಾದಳವು ಅತಿದೊಡ್ಡ ಘಟಕವಾಗಿದ್ದು ಎಂಟು ಅಥವಾ ಒಂಬತ್ತು ಮಂತ್ರಿಗಳಿದ್ದರೂ ಜನರ ಮೇಲೆ ಪರಿಣಾಮ ಬೀರುವ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ವಿದೇಶಾಂಗ ನೀತಿ ಮತ್ತಿತರ ಕ್ಷೇತ್ರಗಳಲ್ಲಿ ಕೆಲವೊಂದು ಉತ್ತಮ ಕೆಲಸ ಮಾಡಿದರೂ ಕಾಂಗ್ರೆಸ್ ಮತ್ತು ಬಿಜೆಪಿಗೆ ಸಮರ್ಥವಾದ ಪರ್ಯಾಯ ಎಂದು ಗುರುತಿಸಿಕೊಳ್ಳಲು ಸಾಧ್ಯವಾಗಲಿಲ್ಲ. ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ ವಿದ್ಯಾಭ್ಯಾಸ, ಕುಡಿಯುವ ನೀರು ಇತ್ಯಾದಿಗಳ ಬಗ್ಗೆ ಸಾಕಷ್ಟು ಮುತುವರ್ಜಿ ವಹಿಸಿದರೂ ಜನತಾದಳಕ್ಕೆ ಸಹಕಾರಿಯಾಗಲಿಲ್ಲ.

ದೇಶದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಹಾಗೂ ಕೆಲವೊಂದು ದುರ್ಬಲ ಜನವಿಭಾಗದ ಉನ್ನತಿಗಾಗಿ ಜನತಾದಳ ಹುಟ್ಟಿಕೊಂಡಿದ್ದರೂ ಈ ವಿಭಾಗದ ಆಶೋತ್ತರಗಳನ್ನು ಈಡೇರಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಬದಲಾಗಿ ಆಂತರಿಕ ಜಗಳ ಮತ್ತು ವಿಭಜನೆಯು ಜನರ ಮಧ್ಯೆ ಜನತಾದಳದ ಪ್ರಭಾವ ಕುಗ್ಗುವುದುಕ್ಕೆ ಕಾರಣವಾಯಿತು. ಇದರ ಜತೆಯಲ್ಲಿ ನೀತಿ ಮತ್ತು ಸಿದ್ಧಾಂತಗಳ ಆಧಾರದಲ್ಲಿ ಪಕ್ಷದ ಸಂಘಟನೆಯನ್ನು ಕಟ್ಟಲು ಜನತಾದಳವು ವಿಫಲವಾಯಿತು. ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಸಾಮೂಹಿಕ ಚಳುವಳಿ ಮತ್ತು ಪ್ರಕ್ಷೋಭೆಗಳನ್ನು ನಡೆಸಲು ಸಾಧ್ಯವಾಗಲಿಲ್ಲ.

ಜನತಾದಳ ನಾಯಕರ ಎಲ್ಲಾ ಚಟುವಟಿಕೆಗಳು ಮೇಲಿನ ಹಂತಕ್ಕೆ ಮಾತ್ರ ಮೀಸಲಾಗಿತ್ತು. ಅಂದರೆ ಅವರ ಕಾರ್ಯಕರ್ತರಿಗೆ ಯಾವುದೇ ಅಭಿಪ್ರಾಯಗಳನ್ನು ನೀಡದೆ ಮತ್ತು ತೆಗೆದುಕೊಳ್ಳದೆ ಮುಖಂಡರು ಮಾತ್ರವೇ ಎಲ್ಲವನ್ನು ನಿರ್ಧರಿಸುತ್ತಿದ್ದರು. ಜನತಾದಳದ ಗುರಿ ಮತ್ತು ಉದ್ದೇಶದ ಬಗ್ಗೆ ಕಾರ್ಯಕರ್ತರಲ್ಲಿ ಅರಿವು ಮೂಡಿಸದೆ ಇರುವುದರಿಂದ ಪಕ್ಷದ ಸಿದ್ಧಾಂತಕ್ಕೆ ಒಳಪಡುವಂತೆ ಮುಖಂಡರ ಮೇಲೆ ಒತ್ತಡ ತರಲು ಕಾರ್ಯಕರ್ತರಿಗೆ ಸಾಧ್ಯವಾಗಲಿಲ್ಲ.


ಪಕ್ಷದ ಇಂದಿನ ಸ್ಥಿತಿಗೆ ಮುಖಂಡರ ಮತ್ತು ಕಾರ್ಯಕರ್ತರ ಈ ದೋಷವು ಪ್ರಮುಖ ಕಾರಣವಾಗಿದೆ.

ಎಲ್ಲವೂ ಕಳೆದು ಹೋಗಿಲ್ಲ

ಬಿಜೆಪಿಯ ಅಧಿಕಾರದ ವ್ಯಾಮೋಹದಿಂದ ಮತ್ತು ಅದರ ಮೈತ್ರಿ ಪಕ್ಷಗಳ ಪ್ರೇರಪಣೆಯಿಂದ ಜನತಾದಳವನ್ನು ವಿಭಜನೆ ಮಾಡಿದವರು ಇದೀಗ ಅವರು ಮಾಡಿದ ಕೃತ್ಯಕ್ಕೆ ಉತ್ತರ ಹೇಳಬೇಕಾಗಿದೆ. ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವುದಕ್ಕಾಗಿ ಎರಡು ಬಾರಿ ಜನತಾದಳ ನೇತೃತ್ವದಲ್ಲಿ ಸರಕಾರವನ್ನು ರಚಿಸಿದವರು ಈಗೇಕೆ ಬಿಜೆಪಿಯ ಬೆಣ್ಣೆ ಪ್ರೀತಿ? ಬಿಜೆಪಿ, ಆರ್.ಎಸ್.ಎಸ್. ಮತ್ತು ಅದರ ಮುಖವಾಡ ಸಂಘಟನೆಗಳ ಕೋಮುವಾದದ ಅಪಾಯವು ಸ್ವಲ್ಪವಾದರೂ ಕಡಿಮೆ ಆಗಿದೆಯೇ? ಸಂಪೂರ್ಣವಾಗಿ ದೇಶದ ಐಕ್ಯತೆಯನ್ನು ಗಳಿಸಿದ್ದೇವೆ ಎಂಬ ಭರವಸೆ ಇದೆಯೇ? ಜನತಾದಳವನ್ನು ಒಡೆದು ಎನ್.ಡಿ.ಎ. ಗೆ ಸೇರುತ್ತಿರುವುದು ಯಾರ ಲಾಭಕ್ಕಾಗಿ? ಜನಸಾಮಾನ್ಯರು ಈ ಪ್ರಶ್ನೆಯನ್ನು ಕೇಳದೆ ಬಿಡುವುದಿಲ್ಲ.

ಬಹಿರಂಗವಾಗಿ ಅಥವಾ ಹೆಗಡೆ, ಫರ್ನಾಂಡೀಸ್ ಮತ್ತು ಶರದ್ ಯಾದವ್ ಹೇಳುವ ಗವಾಕ್ಷಿಯ ರೂಪದಲ್ಲಿ ಬಿಜೆಪಿಯೊಂದಿಗೆ ಸೇರಲು ಜನತಾದಳದ ರಾಜಕೀಯ ವ್ಯವಹಾರಗಳ ಸಮಿತಿಯ ಬಹುಭಾಗ ಸದಸ್ಯರು ನಿರ್ಧರಿಸಿರುವುದರಿಂದ 'ಎಲ್ಲವೂ ಕಳೆದುಹೋಗಿಲ್ಲ' ಎಂದೇ ಹೇಳಬಹುದು. ಬಹುಭಾಗ ಶಾಸಕರು ಹಾಗೂ ಕಾರ್ಯಕರ್ತರು ಮಾತೃಪಕ್ಷದಲ್ಲೇ ಇರುವುದರಿಂದ ಅವರ ಮೂಲಕ ಖಂಡಿತವಾಗಿಯೂ ಪಕ್ಷವನ್ನು ಪುನಶ್ಚೇತನಗೊಳಿಸಬಹುದು.

ಈ ಹಿನ್ನೆಲೆಯಲ್ಲಿ ದೇವೇಗೌಡ ನೇತೃತ್ವದ ಜನತಾದಳವು ಅದರ ಇತಿಹಾಸದಿಂದ ಪಾಠಗಳನ್ನು ಕಲಿತು ಪಕ್ಷವನ್ನು ಶಕ್ತಿಶಾಲಿಯಾಗಿ ಪುನಃಶ್ಚೇತನಗೊಳಿಸಲು ಪ್ರಕ್ಷೋಭೆ ಮತ್ತು ಚಳುವಳಿಗಳ ಮೂಲಕ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು, ಸಂಘಟನೆಯನ್ನು ಬಲಪಡಿಸಿ, ಕಾರ್ಯಕರ್ತರಿಗೆ ತಿಳುವಳಿಕೆ ಮೂಡಿಸುತ್ತಾ ಎಡ ಮತ್ತು ಜಾತ್ಯಾತೀತ ಶಕ್ತಿಗಳೊಂದಿಗೆ ಐಕ್ಯ ಹೋರಾಟ ನಡೆಸಬೇಕಾಗಿದೆ.



ಕಾಂ. ಜ್ಯೋತಿಬಸು ಅವರ 'ಮಾಸದ ನೆನಪು'ಗಳಲ್ಲಿ ಇದುವರೆಗೆ ಐತಿಹಾಸಿಕ ತೇಭಾಗ ಚಳುವಳಿ ಪಕ್ಷದ ನೇತೃತ್ವದಲ್ಲಿ ಆರಂಭಗೊಂಡದ್ದು, ವಿಧಾನಸಭಾ ಕಲಾಪಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ ಇತ್ಯಾದಿಗಳನ್ನು ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ಮುಂದೆ ಓದಿ.....

ಯಶಸ್ವಿಯಾದ ಹೋರಾಟ ಬಸು ಬಟ್ಟೆ ಹರಿದ ಪೋಲೀಸರು

ವಿಧಾನಸಭೆ 1946ರ ಜುಲೈ 24 ರಂದು ಮತ್ತೆ ಸಮಾವೇಶಗೊಂಡಿತು. ಅದೊಂದು ಅವಿಸ್ಮರಣೀಯ ದಿನ....ಯಾಕೆಂದರೆ....

ಕೈದಿಗಳ ಬಿಡುಗಡೆ ವಿಚಾರಕ್ಕೆ ಸಂಬಂಧಿಸಿದ ಸಮಿತಿ ಬೃಹತ್ ಚಳುವಳಿಯೊಂದನ್ನು ರೂಪಿಸಿತು. ಅದರ ಅಂಗವಾಗಿ ಸುಮಾರು 15000 ಪ್ರತಿಭಟನಕಾರರು ಅಸೆಂಬ್ಲಿಯತ್ತ ಮೆರವಣಿಗೆ ಹೊರಟರು. ಅಸೆಂಬ್ಲಿ ಕಟ್ಟಡದ ವಠಾರಕ್ಕೆ ಬಂದ ತಕ್ಷಣವೇ ಅವರು ಕೈದಿಗಳನ್ನು ಇನ್ನೂ ಯಾಕೆ ಬಿಡುಗಡೆ ಮಾಡಿಲ್ಲವೆಂದು ವಿವರಣೆ ನೀಡುವಂತೆ ಸರಕಾರವನ್ನು ಒತ್ತಾಯಿಸುವ ಘೋಷಣೆಗಳನ್ನು ಕೂಗಿದರು.

ಮೆರವಣಿಗೆ ಅಸೆಂಬ್ಲಿ ವಠಾರಕ್ಕೆ ಬರುವುದು ಎಲ್ಲರಿಗೂ ಗೊತ್ತಿತ್ತು. ಹೀಗಾಗಿ ನಾನು ಸದನ ನಿಲುವಳಿ ನೋಟಿಸ್ (adjioument notice) ನೀಡಿದೆ. ಆದರೆ ಅದನ್ನು ತಿರಸ್ಕರಿಸಲಾಯಿತು. ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ನಾನು ಎದ್ದು ನಿಂತು ನನ್ನ ಪ್ರಸ್ತಾಪವನ್ನು ಯಾಕೆ ತಿರಸ್ಕರಿಸಲಾಯಿತು ಎಂದು ಸ್ಪೀಕರ್‌ರನ್ನು ಪ್ರಶ್ನಿಸಿದೆ.

ನಾನು ಹೀಗೆ ಕೇಳಿದ್ದರ ಔಚಿತ್ಯವನ್ನು ಪ್ರಶ್ನಿಸುವ ನೆಪದಲ್ಲಿ ಸುಹ್ರವರ್ದಿ ನನ್ನನ್ನು ವಿರೋಧಿಸಲು ಯತ್ನಿಸಿದರು. ಸ್ಪೀಕರ್‌ರ ರೂಲಿಂಗ್ ಒಪ್ಪಿಕೊಳ್ಳಲು ನಾನು ಸಿದ್ಧನಿದ್ದೇನೆಯೇ ಹೊರತು ನಿಮ್ಮದಲ್ಲ ಎಂದು ಸುಹ್ರವರ್ದಿಗೆ ನಾನು ಸ್ಪಷ್ಟವಾಗಿ ಹೇಳಿದೆ. ಚರ್ಚೆ ನಡೆಯಿತು, ಕಾಂಗ್ರೆಸ್ ಸದಸ್ಯರು ನಮ್ಮನ್ನು ಬೆಂಬಲಿಸಿದರು. ಈ ನಡುವೆ ನಾನು ಸದನದಿಂದ ಹೊರಬಂದು ಮೆರವಣಿಗೆಕಾರರನ್ನು ಭೇಟಿಯಾದೆ. ವಿಷಯವನ್ನು ನಾವು ಸದನದಲ್ಲಿ ಎತ್ತಿದ್ದು ಕಾವೇರಿದ ಚರ್ಚೆ ನಡೆಯುತ್ತಿದೆ ಎಂಬುದಾಗಿ ನಾನವರಿಗೆ ತಿಳಿಸಿದೆ.

ಸದನಕ್ಕೆ ವಾಪಾಸಾದ ನಾನು ನಿಲುವಳಿ ನೋಟಿಸ್ ತಿರಸ್ಕೃತವಾದ ಬಗ್ಗೆ ನಾನು ಕೇಳಿದ್ದ ವಿವರಣೆಯನ್ನು ಸ್ಪೀಕರಿಗೆ ನೆನಪಿಸಿದೆ. ರೂಲಿಂಗನ್ನು ವಿವರಿಸುವಂತೆ ಒತ್ತಾಯಿಸಿದೆ. ಸ್ಪೀಕರ್ ಚೇಂಬರಿಗೆ ನಾನು ಬಂದರೆ ಮಾತ್ರವೇ ಯಾವ ನಿಯಮದನ್ವಯ ನನ್ನ ನೋಟಿಸನ್ನು ತಿರಸ್ಕರಿಸಲಾಯಿತು ಎಂದು ಹೇಳುವುದಾಗಿ ಸ್ಪೀಕರ್ ನುಡಿದರು. ನಾನದಕ್ಕೆ ಒಪ್ಪಲಿಲ್ಲ. ಇದು ತುಂಬಾ ಮುಖ್ಯವಾದ ವಿಷಯ. ರಾಜಕೀಯ ಕೈದಿಗಳ ಬಿಡುಗಡೆಗಾಗಿ ಕಾತರಿಸುತ್ತಿರುವ ಸಾವಿರಾರು ಜನರು ಹೊರಗೆ ಜಮಾಯಿಸಿದ್ದಾರೆ ಎಂದೆ.

ಪ್ರತಿಭಟನಾಕಾರರ ಘೋಷಣೆಗಳು ಸದನದ ಒಳಗೂ ಕೇಳಿಸುತ್ತಿತ್ತು. ಕೈದಿಗಳ ಬಿಡುಗಡೆಗೆ ತಾವು ಕ್ರಮಕೈಗೊಳ್ಳುವುದಾಗಿ ಸುಹ್ರಾವರ್ದಿ ಪತ್ರಕರ್ತರಿಗೂ ಹೇಳಿದ್ದರು. ನಾನು ನೇರವಾಗಿ ಸ್ಪೀಕರನ್ನು ನೋಡುತ್ತಾ "ಅವರಿಗೆ ಸಹಿ ಹಾಕಲು ಯಾಕೆ ಆಗುತ್ತಿಲ್ಲವೋ ನನಗೆ ಗೊತ್ತಿಲ್ಲ.... ಈ ವಿಷಯವನ್ನು ಮತ್ತೆ ಪರಿಶೀಲಿಸಲು ನಾನು ವಿನಂತಿಸುತ್ತೇನೆ. ಇನ್ನೂ ಸಾಕಷ್ಟು ಸಮಯವಿದೆ ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ" ಎಂದು ಹೇಳಿದೆ.

ಬೆಂಬಲವೋ ಬೆಂಬಲ

ಕಾಂಗ್ರೆಸ್ ಸದಸ್ಯ ಧೀರೇಂದ್ರ ದತ್ತ ನನ್ನ ಬೇಡಿಕೆಗೆ ದನಿಗೂಡಿಸಿದರು 'ಸಾವಿರಾರು ಹಿಂದೂಗಳು ಮತ್ತು ಮುಸ್ಲಿಮರು ಕೈದಿಗಳ ಬಿಡುಗಡೆಗೆ ಒತ್ತಾಯಿಸುತ್ತಿದ್ದಾರೆ. ಯಾಕೆ ಆಗುವುದಿಲ್ಲ ಎಂದು ಅವರು (ಸುಹ್ರವರ್ದಿ) ಹೇಳಬೇಕು.... ಇನ್ನೂ ಹೆಚ್ಚು ಹೊತ್ತು ನಾವು ಕಾಯುವುದಿಲ್ಲ ಎಂದ ದತ್ತ ಹೇಳಿಕೆ ನೀಡುವಂತೆ ಮುಖ್ಯಮಂತ್ರಿಯನ್ನು ಆಗ್ರಹ ಪಡಿಸಿದರು.

ಪ್ರತಿಪಕ್ಷದ ನಾಯಕ ಹಾಗೂ ಕಾಂಗ್ರೆಸ್ ಸದಸ್ಯ ಕಿರಣ್ ಶಂಕರ್ ರಾಮ್ ಕೂಡ ಬೆಂಬಲಕ್ಕೆ ಬಂದರು. ಅವರು ಸ್ಪೀಕರ್‌ಗೆ ಹೀಗೆ ಹೇಳಿಧರು. ನಾನು ನಿಮ್ಮ ರೂಲಿಂಗನ್ನು ಗೌರವಿಸುತ್ತೇನೆ. ಆದರೆ ಹೊರಗಡೆ ಭಾವನೆ ಉಕ್ಕೇರುತ್ತಿದೆ.... ಭಾರೀ ಸಂಖ್ಯೆಯ ಜನ ನೆರೆದಿದ್ದಾರೆ.. ನೀವು ಪ್ರತಿಭಟನಕಾರರನ್ನು ಭೇಟಿಯಾಗಿದ್ದೀರೋ ಇಲ್ಲವೋ ಗೊತ್ತಿಲ್ಲ, ಆದರೆ ಮುಸ್ಲಿಂ ಲೀಗ್ ಸಹಿತ ಎಲ್ಲಾ ರಾಜಕೀಯ ಪಕ್ಷಗಳ ಬೆಂಬಲಿಗರು ಹೊರಗೆ ಇದ್ದಾರೆ. ಈ ಪ್ರಾಂತದ ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳು ಹೊರಗಡೆ ಉತ್ತರಕ್ಕಾಗಿ ಕಾದು ನಿಂತಿವೆ ಎನ್ನುವುದನ್ನು ನಾನು ಪುನರುಚ್ಚರಿಸುತ್ತೇನೆ. ಅಲ್ಲಿ ಹಿಂದೂಗಳೂ ಇದ್ದಾರೆ ಮುಸಲ್ಮಾನರೂ ಇದ್ದಾರೆ" ಆಡಳಿತ ಪಕ್ಷದ ಸದಸ್ಯರು ಈ ಹೇಳಿಕೆಯನ್ನು ವಿರೋಧಿಸಿದರು.

ಒಂದೆಡೆ ನಾನು ಮತ್ತು ಇನ್ನೊಂದೆಡೆ ಆಡಳಿತಪಕ್ಷದ ಶಾಸಕರು ಮತ್ತು ಸುಹ್ರವರ್ದಿ. ನಮ್ಮ ನಡುವೆ ಮಾತಿನ ಚಕಮಕಿ ಆರಂಭವಾಯಿತು. ಮುಖ್ಯಮಂತ್ರಿ ಮತ್ತು ಪ್ರತಿಪಕ್ಷ ನಾಯಕ ಸದನದಿಂದ ಹೊರಹೋದರು. ಮೆರವಣಿಗೆಕಾರರ ಪ್ರತಿನಿಧಿಗಳ ನಿಯೋಗವೊಂದನ್ನು ಭೇಟಿಯಾಗಲು ಅವರು ಹೋಗಿದ್ದಾರೆ ಎಂದು ಸ್ಪೀಕರ್ ಪ್ರಕಟಿಸಿದರು.

ಅದೇ ದಿನ ನಿರಂಜನ ಸೇನ್ ಗುಪ್ತ ನೇತೃತ್ವದ ನಿಯೋಗವೊಂದು ಸುಹ್ರವರ್ದಿಗೆ ಒಂದು ಮನವಿ ಪತ್ರವನ್ನು ಅರ್ಪಿಸಿತು. ಅಂತಿಮವಾಗಿ ಅವರು ಹೊರಗಡೆ ಪ್ರತಿಭಟನಾಕಾರರನ್ನು ಭೇಟಿ ಮಾಡಲೇಬೇಕಾಯಿತು. ನಾನು ಆಗ ಹಾಜರಿದ್ದೆ. ಸಂಬಂಧಪಟ್ಟ ಕಡತಗಳನ್ನು ನಾನು ಅನೇಕ ಸಾರಿ ನೋಡಿದ್ದೇನೆ. ಇನ್ನೂ ಅದನ್ನು ಪರಿಶೀಲಿಸುತ್ತೇನೆ ಎಂಬ ಸುಹ್ರವರ್ದಿ ಮಾತಿಗೆ ಜನ ಜಂಗುಳಿ ಪ್ರತಿಭಟನೆ ವ್ಯಕ್ತಪಡಿಸಿತು.

'ನಮಗೆ ಗಡುವು ಬೇಕು, ಆಶ್ವಾಸನೆಗಳಲ್ಲ' ಎಂದು ಕೂಗಿದರು. ಕೊನೆಗೂ, ಆಗಷ್ಟ್ 15 ರೊಳಗೆ ಕೈದಿಗಳನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಸುಹ್ರವರ್ದಿ ಹೇಳಿದರು. ಪ್ರತಿಭಟನಾಕಾರರು ಶಾಂತರಾಗಿ ಚದುರಿದರು.

ಕುರ್ಚಿ ತಂದ ಅಧಿಕಾರಿ

ಸಾವಿರಾರು ಪ್ರತಿಭಟನಾಕಾರರು ಬರುವುದಕ್ಕೂ ಕೆಲದಿನಗಳ ಮುಂಚೆ ನಮ್ಮಲ್ಲಿ ಕೆಲವರು ರೈಟರ್ಸ್ ಬಿಲ್ಡಿಂಗ್ಸ್‌ಗೆ ಹೋಗಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸುವ ಮನವಿ ಪತ್ರವೊಂದನ್ನು ಸುಹ್ರಾವರ್ದಿಗೆ ಅರ್ಪಿಸಿದ್ದೆವು.

ನಿಯೋಗದಲ್ಲಿ ನಾನು, ಬಂಕಿಮ್ ಮುಖರ್ಜಿ, ಭೂತೇಶ್ ಗುಪ್ತ ಮೊದಲಾದವರಿದ್ದೆವು.

ನಮ್ಮನ್ನು ಕುಳಿತುಕೊಳ್ಳಲು ಹೇಳಿದ ಮುಖ್ಯಮಂತ್ರಿ ಗೃಹಖಾತೆಯ ಅಧಿಕಾರಿಯೊಬ್ಬರನ್ನು (ಬಹುಶಃ ಗೃಹ ಕಾರ್ಯದರ್ಶಿ) ಕರೆಯಲು ಕಳಿಸಿದರು. ಆ ಅಧಿಕಾರಿಯ ಹೆಸರು ಪೋರ್ಟರ್, ಆತನಿಗೆ ಕೂರಲು ಕುರ್ಚಿಯೇ ಇರಲಿಲ್ಲ.

ಆತ ಒಳಗೆ ಬರುತಲೇ, 'ಪೋರ್ಟರ್, ನೀವೇಕೇ ಒಂದು ಕುರ್ಚಿ ತರಬಾರದು' ಎಂದು ಸುಹ್ರಾವರ್ದಿ ಪ್ರಶ್ನಿಸಿದರು. ತಕ್ಷಣವೇ ಹೊರ ಹೋದ ಪೋರ್ಟರ್ ಒಂದು ಕುರ್ಚಿಯೊಂದಿಗೆ ಮರಳಿದರು!

ಮನವಿ ಪತ್ರದ ಕೆಲಭಾಗಗಳನ್ನು ಓದಿದ ಸುಹ್ರವರ್ದಿ ಅಧಿಕಾರಿ ಪೋರ್ಟರ್‌ನ ಅಭಿಪ್ರಾಯ ಕೇಳಿದರು.

'ಸರ್, ಅವರೆಲ್ಲರೂ (ಕೈದಿಗಳು) ಕೊಲೆಗಡುಕರು' ಎಂಬುದು ಪೋರ್ಟರ್ ನ ಉತ್ತರವಾಗಿತ್ತು. ಪೋರ್ಟರ್ ಮತ್ತು ನಮ್ಮ ಮಧ್ಯ ಮಾತಿನ ಸಮರ ನಡೆಯಿತು.

ಪೋರ್ಟರ್‌ಗೆ ಹೊರಹೋಗಲು ಹೇಳಿದ ಸುಹ್ರಾವರ್ದಿ ವಿಷಯವನ್ನು ತಾವು ಪರಿಶೀಲಿಸುವುದಾಗಿ ನುಡಿದರು. ರಾಜಕೀಯ ಕೈದಿಗಳ ಬಿಡುಗಡೆಗೆ ಅವರು ಆಗಲೇ ತಾತ್ವಿಕ ನಿರ್ಧಾರ ತೆಗೆದುಕೊಂಡಿದ್ದರೆಂದು ನಮಗೆ ಆಗ ಗೊತ್ತಾಯಿತು. ಜುಲೈ 24 ರಂದು ಅವರು ಆ ನಿರ್ಧಾರವನ್ನು ಪ್ರಕಟಿಸಿದರು.

ಏನಿದ್ದರೂ ಸಮಿತಿಯೂ ಮುಖ್ಯಮಂತ್ರಿ ಸುಹ್ರವರ್ದಿ ಪ್ರಕಟಣೆಯಿಂದ ತೃಪ್ತರಾಗಿ ಕುಳಿತುಕೊಳ್ಳಲಿಲ್ಲ. ಜುಲೈ 25 ರಂದು ಮತ್ತು ಆಗಸ್ಟ್ 15 ರ ನಡುವೆ ಬಂಗಾಳದಾದ್ಯಂತ ಸಭೆಗಳು ನಡೆದವು. ಅವುಗಳಲ್ಲಿ ಬಹುಪಾಲು ವಿದ್ಯಾರ್ಥಿಗಳೇ ಇದ್ದರು. 1946 ಆಗಸ್ಟ್ 15 ರಂದು ಎಲ್ಲಾ ಕೈದಿಗಳ ಬಿಡುಗಡೆಯನ್ನು ಸುಹ್ರವರ್ದಿ ಪ್ರಕಟಿಸಿದರು. ಈ ಸಂಬಂಧ ಕ್ರಮಕೈಗೊಳ್ಳಲಾಗುತ್ತದೆ ಎಂದವರು ಹೇಳಿದರು. ರಾಜಕೀಯ ಬಂಧಿಗಳು ಎಂದು ಗುರುತಿಸಲಾದ ಇತರರ ಪ್ರಕರಣಗಳನ್ನು ಕೂಡ ತಾವು ಪರಿಶೀಲಿಸುತ್ತಿರುವುದಾಗಿಯೂ ಸುಹ್ರವರ್ದಿ ಹೇಳಿದರು.

ಆ ವೇಳೆಯಲ್ಲಿ ನಾನು ಒಂದು ಪ್ರಶ್ನೆಯನ್ನು ಎತ್ತಲು ಬಯಸಿದ್ದೆ. ಆದರೆ ಸ್ಪೀಕರ್ ಯಾರ ಭಾಷಣಕ್ಕೂ ಅವಕಾಶ ನೀಡಲಿಲ್ಲ. ನರಹತ್ಯೆ ದೊಂಬಿಯ(ಇದರ ಬಗ್ಗೆ ಮುಂದೆ ವಿವರ ಇದೆ) ದುರಂತ ನಡೆದ ನಂತರ ಆಗಸ್ಟ್ 16 ರಂದು ಕೈದಿಗಳನ್ನು ಬಿಡುಗಡೆ ಮಾಡಲಾಯಿತು. ಅವರಲ್ಲಿ ಬಹುತೇಕ ಮಂದಿ ಸೆರೆಯಲ್ಲಿದ್ದಾಗ ಕಮ್ಯೂನಿಸ್ಟ್ ತತ್ವದತ್ತ ಆಕರ್ಷಿತರಾದರು. ಕೆಲವರು ಮಾತ್ರ ಕಾಂಗ್ರೆಸ್‌ನಂತ ಪಕ್ಷಗಳನ್ನು ಸೇರಿದರು. ಗಣೇಶ್ ಘೋಷ್, ಅಂಬಿಕಾ ಚಕ್ರವರ್ತಿ, ಅನಂತ ಸಿನ್ಹಾ ಮತ್ತು ಪ್ರಭಾತ್ ಚಕ್ರವರ್ತಿ ಮೊದಲಾದವರು ಬಿಡುಗಡೆಯಾದ ರಾಜಕೀಯ ಬಂಧಿಗಳಲ್ಲಿ ಸೇರಿದ್ದರು. ಈ ಎಲ್ಲಾ ಕಮ್ಯೂನಿಸ್ಟ್ ನಾಯಕರನ್ನು ಪಕ್ಷದ ರಾಜ್ಯ ಕಛೇರಿಯಲ್ಲಿ ಅಭಿನಂದಿಸಲಾಯಿತು.

ಇದಕ್ಕೂ ಮುಂಚೆ ಆಗಸ್ಟ್ 6 ರಂದು ವಿಧಾನಸಭೆಯ ಗೇಟಿನ ಬೀಗ ಹಾಕಿರುವುದನ್ನು ಹಾಗೂ ಅಸೆಂಬ್ಲಿ ಪ್ರವೇಶಿಸಲು ಬಯಸಿದ ಸಾವಿರಾರು ಜನರು ಕಾಯುತ್ತಾ ಬೀದಿಯಲ್ಲಿ ನಿಂತಿರುವುದನ್ನು ನಾನು ಗಮನಿಸಿದೆ. ನನ್ನ ಜೊತೆ ರತನ್ ಲಾಲ್ ಬ್ರಹ್ಮನ್ ಇದ್ದರು. ನಾವಲ್ಲದೆ ಕಾಂಗ್ರೆಸ್‌ನ ಧಿಲೇನ್ ಮುಖರ್ಜಿ ಮತ್ತು ಇತರ ಕೆಲ ಶಾಸಕರೂ ಬೀದಿಯಲ್ಲೇ ನಿಲ್ಲಬೇಕಾಯಿತು.

ಜನರಿಂದ ತೀರಾ ತಿರಸ್ಕಾರಕ್ಕೆ ಒಳಗಾಗಿದ್ದ ಅಂದಿನ ಡೆಪ್ಯುಟಿ ಪೋಲೀಸ್ ಕಮಿಷನರ್ (ಡಿಸಿಪಿ) ಷಂಸುದ್ದೊ ಕಾರ್ಯಚರಣೆಯ ಉಸ್ತುವಾರಿ ವಹಿಸಿದ್ದ. ಎಲ್ಲಾ ಪೋಲೀಸ್ ಸಾರ್ಜೆಂಟರು ಆಂಗ್ಲೋ - ಇಂಡಿಯನ್ ಆಗಿದ್ದರು. ವಿಷಯ ಏನೆಂದು ನಾನು ವಾದಿಸತೊಡಗಿದಾಗ ಡಿಸಿಪಿ ನನ್ನನ್ನು ಹೊಡೆಯುವಂತೆ ಆತ ಪೋಲೀಸರಿಗೆ ಸೂಚಿಸಿದ.

ಧೀರೇನ್ ಮಧ್ಯ ಪ್ರವೇಶ ಮಾಡಿ ಪೋಲೀಸರು ಈ ರೀತಿ ಮಾಡುವಂತಿಲ್ಲ ಎಂದು ಹೇಳಿದರು. ಹಾಗೂ ನಾನು ಒಬ್ಬ ಶಾಸಕ ಎಂದು ತಿಳಿಸಿದರು. ಆಗ ನನ್ನನ್ನು ಬಂಧಿಸಿ ಅಸಿಸ್ಟೆಂಟ್ ಪೋಲೀಸ್ ಕಮಿಷನರ್ ಕಛೇರಿಯಲ್ಲಿ ಇಡಲಾಯಿತು.

ನನ್ನ ಬಂಧನದ ಸುದ್ದಿ ಕಲಾಪ ನಡೆಯುತ್ತಿದ್ದಲ್ಲಿಗೆ ತಲುಪಿತು. ಸದಸ್ಯರ ಕೋರಿಕೆ ಮೇರೆಗೆ ಕಲಾಪಗಳನ್ನು ತಕ್ಷಣವೇ ಮುಂದೂಡಲಾಯಿತು. ಸ್ವತಃ ಮುಖ್ಯಮಂತ್ರಿಯೇ ಹೊರಗೆ ಧಾವಿಸಿ ಬಂದರು. ಜನರ ಗುಂಪು ಆಕ್ರೋಶದಿಂದ ಚಡಪಡಿಸುತ್ತಿತ್ತು. ಮುಸ್ಲಿಂಲೀಗ್ ಬೆಂಬಲಿಗರು ಕೂಡ ಡಿಸಿಪಿ ವಿರುದ್ಧ ಕೋಪಗೊಂಡಿದ್ದರು.

'ಜ್ಯೋತಿ, ಇಲ್ಲಿ ಬನ್ನಿ' ಎಂದು ಸುಹ್ರವರ್ದಿ ನನ್ನನ್ನು ಕರೆದರು 'ನನ್ನನ್ನು ಬಂಧಿಸಲಾಗಿದೆ. ಹೇಗೆ ಬರಲಿ' ನಾನು ಉತ್ತರಿಸಿದೆ 'ಇಲ್ಲಿ ನಿಮ್ಮನ್ನು ಯಾರೂ ಬಂಧಿಸಿಲ್ಲ ಬನ್ನಿ' ಎಂದು ಪುನಃ ಹೇಳಿದರು.

ಅಸೆಂಬ್ಲಿ ಆವರಣದಲ್ಲಿ ನಾವು ಭೇಟಿಯಾದೆವು. ಪೋಲೀಸ್ ಅಧಿಕಾರಿ ಕ್ಷಮೆ ಕೋರಬೇಕೆಂದು ನಾನು ಪಟ್ಟು ಹಿಡಿದೆ. ಅನೇಕ ಜನರು ನನ್ನನ್ನು ಬೆಂಬಲಿಸಿದರು. ಸುಹ್ರಾವರ್ದಿ ಬ್ರಿಟಿಷ್ ಪೋಲೀಸ್ ಕಮಿಷನರ್ ಅನ್ನು ಕರೆಯಿಸಿದರು. ಆದರೆ ಆತ ಕ್ಷಮಾಪಣೆ ಪ್ರಸ್ತಾಪಕ್ಕೆ ಒಪ್ಪದಾಗ ಡಿಸಿಪಿಯನ್ನು ಕರೆಸಲಾಯಿತು. ಆತನೂ ಮೊಂಡುವಾದ ಮಾಡಿದ. ಕ್ಷಮಾಪಣೆ ಸಾಧ್ಯವಿಲ್ಲ ಎಂದ. ಕೊನೆಗೆ ತಾನು ಮಾಡಿದ್ದು ತಪ್ಪಲ್ಲವೆಂದು ಗೊತ್ತಿದ್ದರೂ ಆದೇಶವನ್ನು ಪಾಲಿಸಿ ಕ್ಷಮೆ ಕೋರುವುದಾಗಿ ಹೇಳಿದ.

ಹರಿದ ಬಟ್ಟೆಯಲ್ಲೇ ಅಸ್ಸೆಂಬ್ಲಿ ಪ್ರವೇಶ

ನಾನು ಹರಿದ ಬಟ್ಟೆಯಲ್ಲೇ ವಿಧಾನಸಭೆಯನ್ನು ಪ್ರವೇಶಿಸಿದೆ. ಒಂದು ತಪ್ಪು ಸರಿಯಾಗಿರುವುದಕ್ಕೆ ತಮಗೆ ಸಂತೋಷವಾಗಿದೆ ಎಂದು ಸುಹ್ರವರ್ದಿ ಪ್ರಕಟಿಸಿದರು. ಒಬ್ಬ ಗೌರಾವಾನ್ವಿತ ಸದಸ್ಯರನ್ನು ಬಂಧಿಸಲಾಗಿತ್ತು. ಆದರೆ ಅವರು ಬಿಡುಗಡೆಗೊಂಡಿದ್ದಾರೆ ಹಾಗೂ ಸಂಬಂಧ ಪೋಲೀಸ್ ಅಧಿಕಾರಿ ಕ್ಷಮೆ ಕೋರಿದ್ದಾರೆ ಎಂದು ಅವರು ಹೇಳಿದರು.

ಪಕ್ಷಭೇದ ಮರೆತು ಸದಸ್ಯರು ಪೋಲೀಸ್ ಕೃತ್ಯವನ್ನು ಖಂಡಿಸಿದರು. ಆಗಸ್ಟ್ 12 ರೊಳಗೆ ಈ ಕುರಿತ ತನಿಖೆಯನ್ನು ಪೂರ್ಣಗೊಳಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು.

ಅವಕ್ಕಾದ ತಂದೆ

ಸಂಜೆ ಪಕ್ಷದ ಕಛೇರಿಗೆ ಹೋದಾಗಲೂ ಮೈಮೇಲೆ ಹರಿದ ಬಟ್ಟೆಗಳೇ ಇದ್ದವು. ಬೆಳಗ್ಗಿನ ಘಟನೆಯನ್ನು ನಾನು ವಿವರಿಸಿದೆ. ಆ ನಂತರ ಮನೆಗೆ ಮರಳಿದೆ. ನನ್ನನ್ನು ಕಂಡು ತಂದೆ ಒಂದು ಕ್ಷಣ ಅವಾಕ್ಕಾದರು. ನಾನು ಅವರಿಗೆ ಹೇಳಬೇಕಾದ್ದನ್ನೆಲ್ಲ ಹೇಳಿದೆ.

ಪ್ರತಿದಿನ ಸಂಜೆ ಪಕ್ಷದ ಕಛೇರಿಗೆ ಹೋಗಿ ದಿನದ ಘಟನೆಗಳನ್ನು ಪಕ್ಷದ ನಾಯಕರುಗಳಿಗೆ ವಿವರಿಸುವುದು ರೂಢಿಯಾಗಿತ್ತು. ನಾನಾ ವಿಷಯಗಳಲ್ಲಿ ಪ್ರತಿದಿನ ಅವರ ನಿರ್ದೇಶನ ಪಡೆಯುವುದೂ ಉದ್ದೇಶವಾಗಿತ್ತು. ರೈಲ್ವೆ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಆಗಿದ್ದರಿಂದ ಸಂಘದ ಕಛೇರಿಗೂ ಆಗಾಗ ಭೇಟಿ ಕೊಡುತ್ತಿದ್ದೆ.

ವಿಧಾನಸಭೆ ಅಧಿವೇಶನಕ್ಕೆ ವಿರಾಮವಿದ್ದಾಗ ನಾನು ಜಿಲ್ಲೆಗಳಲ್ಲಿ ಪ್ರವಾಸ ಮಾಡಬೇಕಿತ್ತು. ಅಸೆಂಬ್ಲಿಯೊಳಗೆ ಜನತೆಯ ಸಮಸ್ಯೆಗಳನ್ನು ಎತ್ತುವ ಸಲುವಾಗಿ ಸದಾ ಜನಸಮೂಹದ ಸಂಪರ್ಕವಿಟ್ಟುಕೊಂಡಿರುವುದು ನಮ್ಮ ಕರ್ತವ್ಯವಾಗಿತ್ತು.

ಬಂಗಾಳದಾದ್ಯಂತ ಕಾಡುತ್ತಿದ್ದ ತೀವ್ರ ಆಹಾರ ಬಿಕ್ಕಟ್ಟಿನ ಬಗ್ಗೆ ಕಾಂಗ್ರೆಸ್ ಸದಸ್ಯ ಬಿಮಲ್ ಚಂದ್ರ ಸಿನ್ಹಾ 1946 ಜುಲೈ 25 ರಂದು ಒಂದು ನಿಲುವಳಿ ಗೊತ್ತುವಳಿಯನ್ನು ಮಂಡಿಸಿದರು. ವಿಪರೀತ ಬೆಲೆಯೇರಿಕೆ, ಸಾಕಷ್ಟು ಆಹಾರ ಸರಬರಾಜು ಮಾಡಲು ವೈಫಲ್ಯ ಮೊದಲಾದವುಗಳಿಗಾಗಿ ಆ ಗೊತ್ತುವಳಿ ಸರಕಾರವನ್ನು ತೀಕ್ಷ್ಣವಾಗಿ ತರಾಟೆಗೆ ತೆಗೆದುಕೊಂಡಿತ್ತು. ಮೂವರು ಸದಸ್ಯರ ಕಮ್ಯುನಿಸ್ಟ್ ಗುಂಪಿನ ನಾಯಕನಾಗಿ ನಾನು ಕೂಡ ಅದೇ ರೀತಿಯ ಗೊತ್ತುವಳಿಗಾಗಿ ನೋಟಿಸ್ ನೀಡಿದೆ.

ಮೊತ್ತಮೊದಲ ಭಾಷಣ

ನಾನು ಚರ್ಚೆಯಲ್ಲಿ ಭಾಗವಹಿಸಿದೆ. ಅದು ವಿಧಾನಸಭೆಯಲ್ಲಿ ನನ್ನ ಪ್ರಪ್ರಥಮ ಭಾಷಣ. 'ಅಮೃತ ಬಜಾರ್ ಪತ್ರಿಕಾ' ಮತ್ತು ಇತರ ಕೆಲ ಪತ್ರಿಕೆಗಳು ನನ್ನ ಭಾಷಣಕ್ಕೆ ಸ್ವಲ್ಪ ಮಹತ್ವ ಕೊಟ್ಟು ಮರುದಿನ ಪ್ರಕಟಿಸಿದವು.

ಆಹಾರ ಬಿಕ್ಕಟ್ಟಿನ ಬಗ್ಗೆ ನಮ್ಮ ನಿಲುವು ಏನೆಂಬುದನ್ನು ಆಗಲೇ ನಾವು ಪಕ್ಷದ ನಾಯಕರ ಜತೆ ಸಮಾಲೋಚಿಸಿದ್ದೆವು. ಜಿಲ್ಲಾ ಸಮಿತಿ ಒದಗಿಸಿದ ಮಾಹಿತಿ ಮತ್ತು ಅಂಕಿ ಅಂಶಗಳು ಅಸೆಂಬ್ಲಿಯಲ್ಲಿ ನಮ್ಮ ಚರ್ಚೆಗೆ ನೆರವಾದವು. ನಮ್ಮ ಹಾಗೂ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವಿನ ಭಿನ್ನಾಭಿಪ್ರಾಯ ಆ ದಿನವೇ ವ್ಯಕ್ತವಾಯಿತು. ನಾವು ಕೆಲವು ಮಹತ್ವದ ಹಾಗೂ ರಚನಾತ್ಮಕ ಕೆಲಸ ಮಾಡಿದ್ದೇವೆ ಎಂಬುದು ಎಲ್ಲರ ಗಮನಕ್ಕೆ ಬಂತು. ವಿವಿಧ ಜಿಲ್ಲೆಗಳಲ್ಲಿ ನಾವು ರಚಿಸಿದ ಜನತಾ ಸಮಿತಿಗಳು ಅಕ್ರಮ ದಾಸ್ತಾನುಗಾರರ ವಿರುದ್ಧ ಕ್ರಮ ಕೈಗೊಂಡು ದಾಸ್ತಾನೆಲ್ಲ ಪಡಿತರ ಅಂಗಡಿಗೆ ಸರಬರಾಜು ಆಗುವಂತೆ ನೋಡಿಕೊಂಡವು.

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಮ್ಮ ಪಕ್ಷದ ನಿಲುವನ್ನೇ ಒಪ್ಪುತ್ತವೆಂದು ನಾವು ಯಾವ ಕ್ಷಣದಲ್ಲೂ ಎಣಿಸಿರಲಿಲ್ಲ. ಅಷ್ಟು ಮಾತ್ರವಲ್ಲದೆ ಇತರ ಪಕ್ಷಗಳ ಕೆಲ ನಾಯಕರು ನನ್ನನ್ನು ವೈಯಕ್ತಿಕವಾಗಿ ಭೇಟಿ ಮಾಡಿ ನನ್ನ ಭಾಷಣವನ್ನು ಮೆಚ್ಚಿದರು. ಅದು ನನ್ನ ಮೊದಲ ಭಾಷಣವಾಗಿತ್ತು. ಕಮ್ಯುನಿಸ್ಟ್ ಪಕ್ಷ ಈಗ ಒಂದು ಸಂಘಟಿತ ಶಕ್ತಿ ಎಂಬುದನ್ನು ಅದು ಸಾಬೀತು ಪಡಿಸಿತು. ಕಮ್ಯುನಿಸ್ಟ್ ಪಕ್ಷವನ್ನು ನಿರ್ಲಕ್ಷಿಸುವಂತಿರಲಿಲ್ಲ.

ಸಿನ್ಹಾ ಮಂಡಿಸಿದ್ದ ನಿಲುವಳಿ ಗೊತ್ತುವಳಿಯನ್ನು ಮತಕ್ಕೆ ಹಾಕಲಾಯಿತು. ನಾವು ಅದನ್ನು ಬೆಂಬಲಿಸಿದೆವು. ಆದರೆ ಗೊತ್ತುವಳಿ 86-126 ಮತಗಳಿಂದ ಸೋತಿತು.

ಕಾರ್ಗಿಲ್: ಅಮೆರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ವಾಜಪೇಯಿ ಸರಕಾರ 'ವ್ಯವಹಾರ' ಕುದುರಿಸಿದೆಯೇ?

ಕಳೆದವಾರ ಅಮೆರಿಕನ್ ಅಧ್ಯಕ್ಷ ಭಾರತದ ಪ್ರಧಾನ ಮಂತ್ರಿಗಳೊಂದಿಗೆ ದೂರವಾಣಿಯಲ್ಲಿ ಮಾತನಾಡಿದರು. ಸುಮಾರಾಗಿ ಅದೇ ವೇಳೆಗೆ ಅಮೆರಿಕದ ವಿದೇಶಾಂಗ ಸಚಿವೆ ಶ್ರೀಮತಿ ಅಲ್‌ಬ್ರೈಟ್ ಒಂದು ಪತ್ರಿಕಾ ಸಮ್ಮೇಳನ ನಡೆಸಿದರು. ಇವರೆಡರಲ್ಲೂ ಇದ್ದದ್ದು ಒಂದೇ ರಂಗ - ಭಾರತ ಕಾಶ್ಮೀರ ಪ್ರಶ್ನೆಯ ಮೇಲೆ ಬೇಗನೇ ಪಾಕಿಸ್ತಾನದೊಂದಿಗೆ ಮತ್ತೆ ಮಾತುಕತೆ ಆರಂಭಿಸಬೇಕು. ಅಮೆರಿಕಾಕ್ಕೇಕೆ ಈ ತುರ್ತು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ.

ಭಿನ್ನಾಭಿಪ್ರಾಯ, ತಿಕ್ಕಾಟಗಳನ್ನು ಪರಿಹರಿಸಿಕೊಳ್ಳಲು ಮಾತುಕತೆ ನಡೆಸಿ ಎಂದು ಹೇಳಿದರೆ ತಪ್ಪೇನು ಎಂದು ಕೇಳಬಹುದು. ತಪ್ಪೇನಿಲ್ಲ, ಆದರೆ ಇದುವರೆಗೂ ಭಾರತ-ಪಾಕಿಸ್ತಾನ ಘರ್ಷಣೆಗಳಲ್ಲಿ ಪಾಕಿಸ್ತಾನಕ್ಕೆ ಬಲ ಬೆಂಬಲ ನೀಡುತ್ತಾ ಬಂದಿರುವ ಒಂದು ದೇಶ ಈಗ ಮಾತುಕತೆ ಶುರುಮಾಡಿ, ಮಾತುಕತೆ ಶುರುಮಾಡಿ ಎಂದು ಏಕೆ ಒತ್ತಡ ಹಾಕುತ್ತಿದೆ? ಈ ಹಿಂದೆ ಪಾಕಿಸ್ತಾನದೊಂದಿಗೆ ಮಾತುಕತೆಗಳನ್ನು ಆರಂಭಿಸಲು ಮುತುವರ್ಜಿವಹಿಸಿದ್ದು ಭಾರತವೇ - ಅದು ಸುಮಾರು ಮೂರು ದಶಕಗಳ ಹಿಂದೆ ಸಿಮ್ಲಾ ಒಪ್ಪಂದದಲ್ಲಿರಬಹುದು ಅಥವಾ ಇತ್ತೀಚಿನ ಲಾಹೋರ್ ಘೋಷಣೆಯಲ್ಲಿರಬಹುದು. ಆದ್ದರಿಂದ ಪಾಕಿಸ್ತಾನಕ್ಕೆ ಯಾವಾಗ ಹೇಗೆ ಮಾತುಕತೆ ನಡೆಸಬೇಕೆಂದು ಹೇಳಲು ಈ ಅಮೆರಿಕನ್ನರು ಯಾರು?

ಈ ಹಿನ್ನೆಲೆಯಲ್ಲಿ ಕಾವಿಪಡೆಗಳ ಮುಖಂಡರು ಅವರ ಬೆಂಬಲಿಗರು ಮೊತ್ತಮೊದಲ ಬಾರಿಗೆ ಅಮೆರಿಕಾ ಭಾರತದ ಪರ ವಹಿಸುವಂತೆ ಮಾಡಿರುವುದು ವಾಜಪೇಯಿ ಸರಕಾರದ ಸಾಧನೆ ಎಂದು ಪರಸ್ಪರ ಬೆನ್ನು ತಟ್ಟಿಕೊಳ್ಳುತ್ತಿರುವುದರ ಸಾರ್ಥಕತೆ ಪ್ರಶ್ನಾರ್ಹ, ಪ್ರಶ್ನಿಸಬೇಕು. ವಾಶಿಂಗ್ಟನ್‌ನಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಅಮೆರಿಕದ ವಿದೇಶಾಂಗ ಸಚಿವೆ 'ಕಾಶ್ಮೀರದಲ್ಲಿ ನಿಯಂತ್ರಣ ರೇಖೆಯ ಬಳಿ ಭಾರತ ಮತ್ತು ಪಾಕಿಸ್ತಾನಗಳು ಹೇಳಿಕೊಂಡಿರುವ ದಾವೆಗಳು ಎಷ್ಟು ಸರಿ ಎಷ್ಟು ತಪ್ಪು ಎಂದು ಪರೀಕ್ಷಿಸುವುದು ನಮಗೆ ಸಾಧ್ಯವಿಲ್ಲ" ಎಂದು ಹೇಳಿರುವುದನ್ನು, ಭಾರತ ಒಳ ನುಸುಳಿದವರನ್ನು ನಿಯಂತ್ರಣ ರೇಖೆಯ ಆಚೆಗೆ ತಳ್ಳುವುದರಲ್ಲೂ ಆತ್ಮಸಂಯಮದಿಂದ ವರ್ತಿಸಬೇಕು ಎಂದು ಇನ್ನೊಬ್ಬ ವಕ್ತಾರ ಹೇಳಿರುವುದನ್ನು ಗಮನಿಸಬೇಕು. ಶ್ರೀಮತಿ ಅಲ್‌ಬ್ರೈಟ್‌ರವರು ಜುಲೈ 25 ರಂದು ಸಿಂಗಾಪುರದಲ್ಲಿ ನಡೆಯುವ ಸಿಯಾನ್ ಪ್ರಾದೇಶಿಕ ವೇದಿಕೆಯ ಸಭೆಯ ವೇಳೆಯಲ್ಲಿ ಈ ವಿಷಯವನ್ನು ಭಾರತದ ವಿದೇಶಾಂಗ ಮಂತ್ರಿಯೊಂದಿಗೆ ಮಾತಾಡುವುದಾಗಿ ಹೇಳಿದ್ದಾರೆ.

> ಈ ಪ್ರದೇಶದಲ್ಲಿ ಇದುವರೆಗೆ ಪಾಕಿಸ್ತಾನ ಅಮೆರಿಕಾದ ಬಂಟನಂತೆ ಕೆಲಸ ಮಾಡುತ್ತಿದೆ. ಅದರ ಸ್ಥಾನದಲ್ಲಿ ಭಾರತವನ್ನು ಅಮೆರಿಕದ ಬಂಟನನ್ನಾಗಿ ಮಾಡಬೇಕೆಂಬುದು ಬಿಜೆಪಿಯ ಆಸೆ. ಇದೇ ಒಂದು ಸಾಧನೆ ಎಂಬಂತೆ ದೇಶ ಒಪ್ಪುವಂತೆ ಈ ಉಸ್ತುವಾರಿ ಸರ್ಕಾರ ಮಾಡುತ್ತದೆ. ಇದಕ್ಕೆ ಖಂಡಿತಾ ಅವಕಾಶ ಕೊಡಬಾರದು.

ಆದರೆ ಇವು ಯಾವುದನ್ನೂ ಗಮನಿಸದೆ ಕಾವಿ ಪಡೆಗಳು ಮತ್ತು ಅವರ ಬೆಂಬಲಿಗರು ಕಾರ್ಗಿಲ್‌ನಲ್ಲಿ ತಾವು ಮಹಾನ್ ಸಾಧನೆ ಮಾಡಿದ್ದೇವೆ ಎನ್ನುತ್ತಾ ಅದರ ಚುನಾವಣಾ ಲಾಭ ಪಡೆಯಬಹುದೆಂಬ ಯೋಜನೆಯಲ್ಲೇ ಮುಳುಗಿದಂತಿದೆ.

ಜುಲೈ 21 ರಂದು 'ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ವಾಜಪೇಯಿ ಸರಕಾರದ ಸಾಧನೆಯಲ್ಲ, ನಿಜವಾದ ವೈಫಲ್ಯದ ಬಗ್ಗೆ ಇನ್ನಷ್ಟು ಪ್ರಶ್ನೆಗಳೆತ್ತಿದೆ. ಜುಲೈ 4 ರಂದು ಶರೀಫ್-ಕ್ಲಿಂಟನ್ ಮಾತುಕತೆಗಳ ನಂತರ ಕಾರ್ಗಿಲ್‌ನಲ್ಲಿ ನುಸುಳಿದವರನ್ನು ಹಿಂತೆಗೆದುಕೊಳ್ಳುವ ಬಗ್ಗೆ ಒಂದು ರಾಜಕೀಯ ಒಪ್ಪಂದ ನಡೆದಿತ್ತು ಎಂದು ಈ ವರದಿ ಹೇಳುತ್ತದೆ. ಹಲವು 'ವಾಹಕಗಳು' ಮಧ್ಯಸ್ಥಿಕೆದಾರರ ಮೂಲಕ ಈ ಒಪ್ಪಂದ ಏರ್ಪಟ್ಟಿತ್ತಂತೆ. ಶರೀಫ್-ಕ್ಲಿಂಟನ್ ಸಭೆಯ ನಂತರ ಎರಡೂ ದೇಶದ ಪ್ರಧಾನಮಂತ್ರಿಗಳು ನೇರ ಸಂಪರ್ಕದಲ್ಲಿದ್ದರು ಎಂದೂ ಈ ವರದಿ ಹೇಳಿದೆ. ಈ 'ವ್ಯವಹಾರ'ದಲ್ಲಿ ಮೂರನೇ ಪಕ್ಷವೊಂದು ಇನ್ನು ಮುಂದೆಯೂ ಶಾಮೀಲಾಗಿರುವ ಸಾಧ್ಯತೆಯೂ ವಾಸ್ತವ ಎಂದೂ ಈ ವರದಿ ಟಿಪ್ಪಣಿ ಮಾಡಿದೆ. ಪಾಕಿಸ್ತಾನವಾಗಲೀ, ಭಾರತವಾಗಲೀ ಇದುವರೆಗೆ ನೀಡಿಲ್ಲ. ಅಂದರೆ ತಂತಮ್ಮ ಜನಗಳಿಂದ ಅವರೇನಾದರೂ ಅಡಗಿಸಿಡಬಯಸುತ್ತಿದ್ದಾರೇಯೇ ಅಥವಾ ಆ 'ಮೂರನೇ ಪಕ್ಷ' ಇದರಲ್ಲಿ ಒಂದು ಪ್ರಧಾನ ಪಾತ್ರವಹಿಸಿರ ಬಹುದೇ ಎಂದು ಆ ವರದಿ ಮುಂದುವರೆದು ಪ್ರಶ್ನಿಸಿದೆ.

ಹಾಗಿದ್ದರೆ, ನಮ್ಮ ಧೀರ ಸೈನಿಕರು ತಮ್ಮ ಮಿಲಿಟರಿ ಕಾರ್ಯಾಚರಣೆಗಳನ್ನು ಮುಂದುವರಿಸಿ ಅಪಾರ ಕಷ್ಟ-ನಷ್ಟ, ಸಾವು-ನೋವುಗಳಿಗೆ ಅವರನ್ನೇಕೆ ಈಡು ಮಾಡಬೇಕಿತ್ತು ಎಂಬ ಪ್ರಶ್ನೆ ಏಳುತ್ತದಲ್ಲವೇ? ನಮ್ಮ ವೀರ ಸೈನಿಕರ ಹೆಣಗಳ ಮೇಲೆ ಇಂತಹ ರಾಜತಾಂತ್ರಿಕ ಆಟಗಳೇಕೆ?

ಈ ಹಿಂದೆ ಪೋಖ್ರಾನ್ ಸ್ಫೋಟದ ನಂತರ ನಮ್ಮ ವಿದೇಶಾಂಗ ಮಂತ್ರಿ ಮತ್ತು ಅಮೆರಿಕನ್ ವಿದೇಶಾಂಗ ಪ್ರತಿನಿಧಿ ಟಾಲ್ಬೋಟ್ ನಡುವೆ ಹಲವು ಸುತ್ತಿನ 'ಗುಪ್ತ' ಮಾತುಕತೆಗಳು ನಡೆದು ಇದ್ದಕ್ಕಿದ್ದಂತೆ ಒಂದು ದಿನ ಭಾರತ ತನ್ನ ದೀರ್ಘಕಾಲದ ನಿಲುವನ್ನು ಬದಲಿಸಿ ಸಿಟಿಬಿಟಿ ಗೆ ಸಹಿ ಹಾಕಲು ಒಪ್ಪಿದೆ ಒಂದು ಸುದ್ದಿ ಪ್ರಕಟವಾಗಿದ್ದು ನಮಗೆ ನೆನಪಿಸಿದೆ. ಈಗ ಮತ್ತೆ ಅಂತಹ ಆಟ ಸಾಗಿದೆಯೇ? ಭಾರತದ ಪ್ರಧಾನ ಮಂತ್ರಿಗಳು ಅಧ್ಯಕ್ಷ ಕ್ಲಿಂಟನ್‌ಗೆ ಆಗ ಪತ್ರ ಬರೆದದ್ದು, ಆ ವೇಳೆ 'ಚೀನಾ ನಮ್ಮ ಪ್ರಥಮ ಶತ್ರು' ಎಂದು ಹಾರಾಡಿದ್ದು ಮರೆತು, ಈಗ ಬಿ.ಬಿ.ಸಿ. ಸಂದರ್ಶನವೊಂದರಲ್ಲಿ ಅದನ್ನು ನಿರಾಕರಿಸಿದ್ದಾರೆ. ಈಗ ಪ್ರಧಾನಿಗಳು ಕಾರ್ಗಿಲ್ ಬಗ್ಗೆ ಅಧ್ಯಕ್ಷ ಕ್ಲಿಂಟನ್‌ಗೆ ಬರೆದ ಎರಡನೇ ಪತ್ರದಲ್ಲಿ ಏನಿತ್ತು ಎಂದು ಇನ್ನೂ ಸರಕಾರ ಮುಚ್ಚಿಡುತ್ತಿದೆ. ರಾಜ್ಯಸಭೆಯ ಅಧಿವೇಶನ ಕರೆಯಲೂ ಹಿಂದೇಟು ಹಾಕುತ್ತಿದೆ. ಏಕೆ ಇಂತಹ ಹಿಂಜರಿಕೆ? ಅಮೆರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಈ ಉಸ್ತುವಾರಿ ಸರಕಾರ ಎಂತಹ ವ್ಯವಹಾರ ನಡೆಸಿದೆಯೆಂದು ಅದಾಗಿಯೇ ದೇಶಕ್ಕೆ ತಿಳಿಸುವುದಿಲ್ಲ. ಅದಕ್ಕೆ ಜನಗಳ ಒತ್ತಡ ಅನಿವಾರ್ಯ.

ಈಗ ನಮ್ಮ ದೇಶಬಾಂಧವರ ಮುಂದಿರುವ ಪ್ರಶ್ನೆ-ಒಂದು ಸ್ವತಂತ್ರ ಸಾರ್ವಭೌಮ ದೇಶವಾಗಿ ಭಾರತದ ಭವಿಷ್ಯ ಇಂತಹ ಕೈಗಳಲ್ಲಿ ಭದ್ರವಾಗಿರುತ್ತದೆಯೇ? ಖಂಡಿತಾ ಇಲ್ಲ. ಈ ಪ್ರದೇಶದಲ್ಲಿ ಇದುವರೆಗೆ ಪಾಕಿಸ್ತಾನ ಅಮೆರಿಕಾದ ಬಂಟನಂತೆ ಕೆಲಸ ಮಾಡುತ್ತಿದೆ. ಅದರ ಸ್ಥಾನದಲ್ಲಿ ಭಾರತವನ್ನು ಅಮೆರಿಕದ ಬಂಟನನ್ನಾಗಿ ಮಾಡಬೇಕೆಂಬುದು ಬಿಜೆಪಿಯ ಆಸೆ. ಇದೇ ಒಂದು ಸಾಧನೆ ಎಂಬಂತೆ ದೇಶ ಒಪ್ಪುವಂತೆ ಈ ಉಸ್ತುವಾರಿ ಸರ್ಕಾರ ಮಾಡುತ್ತದೆ. ಇದಕ್ಕೆ ಖಂಡಿತಾ ಅವಕಾಶ ಕೊಡಬಾರದು.

ಕಾರ್ಗಿಲನ್ನು ಚುನಾವಣೆಗಾಗಿ ಉಪಯೋಗಿಸಲು ಆರ್.ಎಸ್.ಎಸ್.ಹುನ್ನಾರ

ತೇರದಾಳ ಘಟನೆಯ ಹಿನ್ನೆಲೆ

ಕಳೆದ 50 ವರ್ಷಗಳಲ್ಲಿ ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ಹಿಂದೂ-ಮುಸ್ಲಿಂ ಕೋಮು ದಂಗೆಯ ಒಂದೆರಡು ಘಟನೆಗಳಲ್ಲದೆ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗುವುದರಲ್ಲಿ ಜಿಲ್ಲೆಯ ಬಹುತೇಕ ಮತಸ್ಥರು ಶ್ರಮಿಸಿದ್ದರು. ಬಿಜಾಪುರ ಜಿಲ್ಲೆಯ ಹಿಂದೂ ಮುಸ್ಲಿಂ ಸ್ವಾಮಿಗಳಾದ ಬಂತನಾಳ ಶಿವಯೋಗಿಗಳ, ಮಲ್ಲಿಕಾರ್ಜುನ ಸ್ವಾಮಿಗಳ, ಹಾಶಿಂ ಪೀರ ಸಾಹೇಬರ ಪ್ರಭಾವವಲ್ಲದೆ, 1943 ರಿಂದಲೂ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ನಡೆಸಿಕೊಂಡು ಬಂದ ಕರ್ನಾಟಕ ಏಕೀಕರಣ, ಗೋವಾ ಚಳುವಳಿಗಳು, ಜಿಲ್ಲೆಯ ಪ್ರಮುಖ ಕೇಂದ್ರಗಳಲ್ಲಿ ಪಕ್ಷದ ನೇತೃತ್ವದಲ್ಲಿ ನಡೆಸಿದ ಹೋರಾಟಗಳು ಮುಖ್ಯವಾಗಿ, ಹ್ಯಾಂಡ್‌ಲೂಂ, ಪವರ್ ಲೂಂ ನೇಕಾರರ, ನಗರಸಭೆ ನೌಕರರ, ಬೀಡಿ, ಸಿಮೆಂಟ್, ಜೆನ್ನಿಂಗ್ ಫ್ಯಾಕ್ಟರಿ, ಟಾಂಗಾ ಮೊದಲಾದವುಗಳ ವಿದ್ಯಾರ್ಥಿ, ರೈತರ ಹೋರಾಟಗಳು ಜನಸಾಮಾನ್ಯರ ಮೇಲೆ ಪ್ರಭಾವ ಬೀರಿದ್ದವು. ಮುಸ್ಲಿಂ ಬೀಡಿ ಕೆಲಸಗಾರರು, ಟಾಂಗಾ ಹೊಡೆಯುವವರು, ಮುಸ್ಲಿಂ ಶಿಕ್ಷಕರು ಒಂದೆರಡು ಘಟನೆ ನಡೆದಾಗ ಕೆಂಬಾವುಟ ಹಿಡಿದುಕೊಂಡು ಧೈರ್ಯದಿಂದ ಬಿಜಾಪುರ- ಬಾಗಲಕೋಟೆಯಲ್ಲಿ ಮಧ್ಯಪ್ರವೇಶ ಮಾಡಿ ಸಹಾಯ ಮಾಡಿದ್ದರು. ಕಾರ್ಮಿಕ ವರ್ಗದ, ರೈತ, ವಿದ್ಯಾರ್ಥಿಗಳು ನಡೆಸುತ್ತಿದ್ದ ಹೋರಾಟ ಪ್ರಜಾಪ್ರಭುತ್ವ ಪ್ರಜ್ಞೆಯ, ಕೋಮುಸೌಹಾರ್ದತೆಯ ಮೌಲ್ಯಗಳನ್ನು ಬಿತ್ತಿದ್ದರಿಂದ ಆ ಕಾಲದಲ್ಲಿ ಆರ್.ಎಸ್.ಎಸ್., ಜನಸಂಘ, ಮುಸ್ಲಿಂ ಲೀಗ್‌ಗಳಿದ್ದೂ ಕೋಮು ಸೌಹಾರ್ದತೆಯನ್ನು ಕೆಡಿಸುವ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಈ ಹೊತ್ತು ಪಶ್ಚಿಮ ಬಂಗಾಳದಲ್ಲಿ ಕೋಮು ಸೌಹಾರ್ದತೆ ಕಾಪಾಡಲು ಜನರೇ ಮುಂದಾಗಿರುವುದನ್ನು ಕಾಣುತ್ತೇವೆ.

> ಬಾಬ್ರಿ ಮಸೀದಿ ಕೆಡವಿದಾಗ ಕೋಮು ಸೌಹಾರ್ದತೆಯನ್ನು ಕೆಡಿಸುವ ಪ್ರಯತ್ನ ನಡೆದರೂ ಅದಕ್ಕೆ ಅವಕಾಶ ಸಿಗಲಿಲ್ಲ. ರಾಮನ ಹೆಸರಿನಲ್ಲಿ ಇಟ್ಟಿಗೆ ಯಾತ್ರೆ ನಡೆದಾಗಲೂ ಪ್ರಚೋದನೆಗೆ ಪ್ರೋತ್ಸಾಹ ಸಿಗಲಿಲ್ಲ. ಆದರೆ ಕಾರ್ಗಿಲ್ ಸಮಸ್ಯೆಯನ್ನು ಮುಂದೆ ಮಾಡಿ, ಜಾತಿ ಸೌಹಾರ್ದತೆಯನ್ನು ನಾಶಗೊಳಿಸಿ ಚುನಾವಣೆಯಲ್ಲಿ ಮತಗಳಿಸುವ ಗಂಬೀರ ಪ್ರಯತ್ನ ಆರ್.ಎಸ್.ಎಸ್.,, ಭಜರಂಗ ದಳ, ಬಿಜೆಪಿಯವರು ಕೈಕೊಂಡಿರುವುದಕ್ಕೆ ತೇರದಾಳ ಘಟನೆಯೇ ಜೀವಂತ ಸಾಕ್ಷಿಯಾಗಿದೆ.

ಬಾಗಲಕೋಟೆಯಲ್ಲಿ ನವರಾತ್ರಿ ದಿವಸ ಆರ್.ಎಸ್.ಎಸ್. ಪಥಸಂಚಲನ ನಡೆಸುವ ಪರಿಪಾಠ ಇಟ್ಟುಕೊಂಡಿದೆ. ಪಥ ಸಂಚಲನ ನಡೆಯುತ್ತಿರುವಾಗಲೇ ಮಸೀದಿಗೆ ಕಲ್ಲು ಒಗೆದು ದಂಗೆಗೆ ಆರ್‌ಎಸ್‌ಎಸ್ ಕಾರಣೀಭೂತವಾಗಿತ್ತು. ಆಗ ಶಾಸಕರಾಗಿದ್ದ (ಇಂದು ಸಿಪಿಐ ಪಕ್ಷದಲ್ಲಿರುವ) ಎಂ.ಸಿ.ನರಸಿಂಹನ್ ಶಾಸನ ಸಭೆಯಲ್ಲಿ ಈ ಪ್ರಶ್ನೆಯನ್ನೆತ್ತಿದ್ದರು. ಕಮ್ಯುನಿಸ್ಟ್ ಪಾರ್ಟಿ, ಬಿಜಾಪುರ-ಬಾಗಲಕೋಟೆಯ ಟಾಂಗಾ ಯೂನಿಯನ್ ಮತ್ತು ಮುಸ್ಲಿಂ ಬೀಡಿ ಕೆಲಸಗಾರರು ಮಧ್ಯ ಪ್ರವೇಶಿಸಿ ಸಹಾಯ ಹಸ್ತ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿದಾಗ ದೇಶದ ಹಲವಾರು ಪ್ರದೇಶಗಳಲ್ಲಿ ಹಿಂದೂ-ಮುಸ್ಲಿಂ ದಂಗೆ ನಡೆದಾಗಲೂ ಬಿಜಾಪುರ ಜಿಲ್ಲೆಯಲ್ಲಿ ಶಾಂತಿ ಕಾಪಾಡಿಕೊಂಡು ಬರಲು ಸಾಧ್ಯವಾಗಿದೆ. ಕೋಮು ಸೌಹಾರ್ದತೆಯನ್ನು ಕೆಡಿಸುವ ಪ್ರಯತ್ನ ನಡೆದರೂ ಅದಕ್ಕೆ ಅವಕಾಶ ಸಿಗಲಿಲ್ಲ. ರಾಮನ ಹೆಸರಿನಲ್ಲಿ ಇಟ್ಟಿಗೆ ಯಾತ್ರೆ ನಡೆದಾಗಲೂ ಪ್ರಚೋದನೆಗೆ ಪ್ರೋತ್ಸಾಹ ಸಿಗಲಿಲ್ಲ.

ಆದರೆ ಕಾರ್ಗಿಲ್ ಸಮಸ್ಯೆಯನ್ನು ಮುಂದೆ ಮಾಡಿ, ಜಾತಿ ಸೌಹಾರ್ದತೆಯನ್ನು ನಾಶಗೊಳಿಸಿ ಚುನಾವಣೆಯಲ್ಲಿ ಮತಗಳಿಸುವ ಗಂಬೀರ ಪ್ರಯತ್ನ ಆರ್.ಎಸ್.ಎಸ್., ಭಜರಂಗ ದಳ, ಬಿಜೆಪಿಯವರು ಕೈಕೊಂಡಿರುವುದಕ್ಕೆ ತೇರದಾಳ ಘಟನೆಯೇ ಜೀವಂತ ಸಾಕ್ಷಿಯಾಗಿದೆ.

ಬಿಜಾಪುರ ಜಿಲ್ಲೆ ಇಂದು ಇಬ್ಭಾಗವಾಗಿದೆ. ಬಿಜಾಪುರ ಮತ್ತು ಬಾಗಲಕೋಟೆ. ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ತೇರದಾಳ ನಗರದಲ್ಲಿ ಕಾರ್ಗಿಲ್ ಪ್ರಶ್ನೆಯನ್ನು ಕೋಮು ಸೌಹಾರ್ದತೆಗೆ ವಿಷ ತುಂಬಲು, ಬಿಜೆಪಿ ಗೆಲುವಿಗೆ ಅದನ್ನು ಉಪಯೋಗಿಸಲು ಪ್ರಯತ್ನ ನಡೆದಿದೆ. ಬಹಳ ಚಾಲಾಕಿಯಾಗಿ, ಬುದ್ಧಿವಂತಿಗೆಯಿಂದಲೇ ಆ ಪ್ರಯತ್ನ ನಡೆದಿದೆ.


ಜುಲೈ 7 ರಂದು ತೇರದಾಳ ನಗರದ ಬೇರೆ ಬೇರೆ ಸಂಘ ಸಂಸ್ಥೆಗಳ ಹಿಂದೂ-ಮುಸ್ಲಿಂ ಮುಖಂಡರೂ ವಿದ್ಯಾರ್ಥಿಗಳೆಲ್ಲಾ ಸೇರಿ ಕಾರ್ಗಿಲ್ ಘಟನೆಯ ಪ್ರತಿಭಟನಾರ್ಥವಾಗಿ ಮತ್ತು ಹಣ ಸಂಗ್ರಹಿಸಲು ಮೆರವಣಿಗೆ ತೆಗೆದು ಸಂಜೆ 7 ಗಂಟೆಗೆ ಪಾಕಿಸ್ತಾನದ ಪ್ರಧಾನ ಮಂತ್ರಿ ನವಾಜ್ ಶರೀಫ್ ಮತ್ತು ಪಾಕಿಸ್ತಾನದ ಧ್ವಜವನ್ನು ದಹನ ಮಾಡಲಾಯಿತು. ಅದೇ ದಿನ ರಾತ್ರಿ 9 ಗಂಟೆಗೆ ಕಟ್ಟೆಯ ಮೇಲೆ ಕೂತಿದ್ದ ಇಬ್ಬರು ಅಲ್ಪಮತಸ್ಥರು, ಅಲ್ಲಿಗೆ ಬಂದ 2-3 ಜನರಿಗೆ ಪಾಕಿಸ್ತಾನದ ರಾಷ್ಟ್ರೀಯ ಧ್ವಜ ಯಾಕೆ ಸುಟ್ಟಿರಿ ಎಂದು ಕೇಳಿದರಂತೆ. ಅದನ್ನೇ ದೊಡ್ಡ ಅಪರಾಧವೆಂದು ತಿಳಿದು ಆರ್.ಎಸ್.ಎಸ್., ಭಜರಂಗ ದಳ ಮತ್ತು ಬಿಜೆಪಿಯವರು ರಾಜ್ಯಾದ್ಯಂತ ಗುಲ್ಲೆಬ್ಬಿಸುತ್ತಿದ್ದಾರೆ ಬಂದ್ ಆಚರಿಸುತ್ತಿದ್ದಾರೆ. ತೇರದಾಳ ಚಲೋ ಕಾರ್ಯಕ್ರಮ ಹಾಕಿಕೊಂಡು ಪೋಲೀಸರ ವಿರುದ್ಧ, ಅಲ್ಪಸಂಖ್ಯಾತರ ವಿರುದ್ಧ ಏನೆಲ್ಲಾ ಮಾಡ ಹೊರಟಿದ್ದಾರೆ. ಯಾರ ಒಪ್ಪಿಗೆಯಿಲ್ಲದೆ ಶಾಂತಿಸಭೆಯಲ್ಲಿ ಒಳನುಗ್ಗಿ ಬಂದ ಶಿವಮೊಗ್ಗದ ಭಜರಂಗ ದಳದ ಮುಖಂಡ 'ನೀನು ಯಾರು' ಎಂದು ಜಿಲ್ಲಾಧಿಕಾರಿಗಳನ್ನು ನೇರವಾಗಿ ಕೇಳುವ ಧಾಡ್ಯತೆಯನ್ನು ತೋರ್ಪಡಿಸಿರುವುದನ್ನು ಕಂಡಾಗ, ಎಷ್ಟು ಆಳವಾದ ಒಳ ಸಂಚನ್ನು ಈ ಜನ ರೂಪಿಸುತ್ತಿದ್ದಾರೆಂಬ ಅಂಶ ಬಯಲಾಗುತ್ತಿದೆ.

ತೇರದಾಳದ ಸಮಸ್ಯೆಯನ್ನು ಆರ್.ಎಸ್.ಎಸ್., ಭಜರಂಗ ದಳ ಮತ್ತು ಬಿಜೆಪಿಯವರು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆಂಬ ಅಂಶವನ್ನು ಕಾಂಗ್ರೆಸ್ಸಾಗಲೀ, ಜನತಾದಳದವರಾಗಲೀ, ಇತರ ಪ್ರಜಾಪ್ರಭುತ್ವ ಶಕ್ತಿಗಳಾಗಲೀ ಗಮನಿಸದಂತೆ ಕಂಡು ಬರುವುದಿಲ್ಲ. ಜುಲೈ 19 ರಂದು ನಾನು ತೇರದಾಳಕ್ಕೆ ಹೋಗಿ ಪರಿಸ್ಥಿತಿಯನ್ನು ಅಭ್ಯಾಸ ಮಾಡಿದೆ. ಅದೇ ದಿವಸ ಜಮಖಂಡಿ ಶಾಸಕರಾದ ಮೇಟಿಯವರೂ ಬಂದಿದ್ದರು. ಶಾಸಕರ ಒತ್ತಡದಿಂದಲೇ ಪೋಲೀಸರು ಮುಸಲ್ಮಾನರಿಗೆ ರಕ್ಷಣೆ ನೀಡಿ ಹಿಂದು ಜನರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆಂದು ಈ ಜನ ಪತ್ರಿಕಾ ಹೇಳಿಕೆಗಳ ಮೂಲಕ ಅಪಪ್ರಚಾರ ಮಾಡುತ್ತಿದ್ದಾರೆ.

ಸ್ಮಶಾನ ಭೂಮಿಯ ಕಾರಣದಿಂದಾಗಿ 1992 ರಿಂದಲೇ ಒಳಗಿಂದೊಳಗೆ ದ್ವೇಷ ಬೆಳೆದು ಬರುತ್ತಿದ್ದು ಕಾಂಗ್ರೆಸ್ ಸಮಸ್ಯೆಯ ಸಂಬಂಧಪಟ್ಟಂತೆ ಸದಾ ಒಂದು ಪ್ರಶ್ನೆ ಈ ಜನರಿಗೆ ದ್ವೇಷ ಬೆಳೆಸಿ ಅಶಾಂತಿ ಹುಟ್ಟಿಸಿ, ಮುಂದಿನ ಚುನಾವಣೆಯಲ್ಲಿ ಅದರ ಲಾಭ ಗಿಟ್ಟಿಸಿಕೊಳ್ಳಲಿಕ್ಕೆ ಒಂದು ಒಳ್ಳೆಯ ಅವಕಾಶವಾಗಿ ಕೈ ಸೇರಿದಂತಾಗಿದೆ. ದುರಾದೃಷ್ಟದಿಂದ ಜಾತಿ ದ್ವೇಷ ಬೆಳೆಸುತ್ತಿರುವ ಕೆಲವೇ ಜನರನ್ನು ವಿರೋಧಿಸಿ ಶಾಂತಿ ನೆಲೆಸುವಂತೆ ಮಾಡುವ ಹೊಣೆ ಹೊರಬೇಕಾದ ಪ್ರಜಾಸತ್ತಾತ್ಮಕ ಶಕ್ತಿಗಳು ಬಲವಾಗಿಲ್ಲ. ಹಿರಿಯರ ಮಾತನ್ನು ಕೇಳುವವರೇ ಇಲ್ಲವಾಗಿರುವುದರಿಂದಲೇ ಶಾಂತಿ ಸಮಿತಿ ಸಭೆ ಸೇರದಂತಾಗಿದೆ. ತೇರದಾಳದ ಸುತ್ತಮುತ್ತ ಇರುವ ರಬಕವಿ-ಬನಹಟ್ಟಿಗಳಲ್ಲಿ ಪ್ರಬಲವಾಗಿದ್ದ ಕಾರ್ಮಿಕರ ಸಂಘಟನೆ ಈಗ ಪ್ರಭಾವ ಕಳೆಕೊಂಡಿರುವುದರಿಂದ ಈ ಮತೀಯ ಶಕ್ತಿಗಳೂ ಈ ನೇಕಾರ ಕೇಂದ್ರಗಳನ್ನು ಉಪಯೋಗಿಸುವ ಪ್ರಯತ್ನ ನಡೆಸಿವೆ.

ಜನತಾದಳದಲ್ಲುಂಟಾಗಿರುವ ಅಂತರಿಕ ಗೊಂದಲ ಸರಕಾರವನ್ನು ಸಂಪೂರ್ಣ ನಿಶಕ್ತಿಗೊಳಿಸಿದೆ. ಪೋಲೀಸ್ ಮತ್ತು ರೆವಿನ್ಯೂ ಅಧಿಕಾರಿಗಳನ್ನು ಅಸ್ಥಿರಗೊಳಿಸಿದೆ. ಇಂತಹ ಸಂದರ್ಭದಲ್ಲಿ ಕೋಮುವಾದಿಗಳ ದುಷ್ಕೃತ್ಯಗಳ ಬಗ್ಗೆ ಎಚ್ಚರವಹಿಸಬೇಕಾದ ಜವಾಬ್ದಾರಿಯನ್ನು ಪ್ರಜಾಪ್ರಭುತ್ವ ಶಕ್ತಿಗಳು ವಹಿಸಿಕೊಳ್ಳುವುದು ಅತ್ಯಗತ್ಯ.

- ಎನ್.ಕೆ.ಉಪಾಧ್ಯಾಯ



ಅಂದು 1980 ಇಡೀ ರಾಜ್ಯದಲ್ಲಿ ರೈತ ಹೋರಾಟದ ಅಲೆ. ಮಲಪ್ರಭ ಪ್ರದೇಶದ ಹತ್ತಿ ಬೆಳೆಗಾರರು, ತಂಬಾಕು ಬೆಳೆಗಾರರು, ಹಾಸನದ ರೈತರು, ಕೋಲಾರದ ರೈತರು ಎಲ್ಲಾ ಸಿಡಿದೆದ್ದ ದಿನಗಳು. ರೈತರಂಗೂ ರೈತ ವಿರೋಧಿ ನೀತಿಯನ್ನು ಅನುಸರಿಸುತ್ತಿದ್ದ ಗುಂಡೂರಾವ್ ಸರ್ಕಾರಕ್ಕೂ ಕಾಳಗ,

ಇಂದು 1999. ಇಡೀ ದೇಶದಲ್ಲಿ ತೊಗರಿ ಬೆಳೆಗಾರರು, ಕಬ್ಬು ಬೆಳೆಗಾರರು, ರೇಷ್ಮೆ ಬೆಳೆಗಾರರು, ಟೊಮೊಟೋ, ಈರುಳ್ಳಿ(ಉಳ್ಳಾಗಡ್ಡೆ) ಶೇಂಗಾ(ಕಡಲೇ ಕಾಯಿ) ಬೆಳೆಗಾರರು ಬದುಕು-ಮರಣದ ಹೋರಾಟದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಗುಂಡಿಗೆ ಬಲಿಯಾಗಿದ್ದಾರೆ. ಎರಡಕ್ಕೂ ಮೂಲ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು.

ಈ ಜುಲೈ 21 ಕ್ಕೆ ನರಗುಂದ, ನವಲಗುಂದ, ಸೌದತ್ತಿಗಳ ರೈತ ಚಳುವಳಿಯ 20ನೇ ವರ್ಷದ ನೆನಪಿನಲ್ಲಿ ಅಂದಿನ ರೈತ ಚಳುವಳಿ ಇಂದಿನ ಪರಿಸ್ಥಿತಿಯ ವಿಶ್ಲೇಷಣೆಯನ್ನೂ ದುಡಿವ ಜನರ ಪ್ರಾಣಮಿತ್ರ 'ಐಕ್ಯರಂಗ' ನೀಡುತ್ತಿದೆ.

ನರಗುಂದ-ನವಲಗುಂದ ರೈತ ಬಂಡಾಯದ ನೆನಪು

ನಿತ್ಯಾನಂದಸ್ವಾಮಿ

ಮಲಪ್ರಭ ರೈತರ ಬಂಡಾಯ ರಾಜ್ಯದ ರಾಜಕೀಯಕ್ಕೆ ಒಂದು ತಿರುವು ನೀಡಿದ್ದು ಈಗ ಇತಿಹಾಸದ ಭಾಗವಾಗಿದೆ. ಬಂಧಿತ ರೈತರ ಬಿಡುಗಡೆ, ಮೊಕದ್ದಮೆಗಳ ವಾಪಸಾತಿ, ಇತ್ಯಾದಿ ಬೇಡಿಕೆಗಳಿಗಾಗಿ ಹೋರಾಡಲು ರಚನೆಯಾದ ಪ್ರಗತಿಪರ ಜನತಂತ್ರ ರಂಗ, ರೈತ ಹುತಾತ್ಮರ ಜ್ಯೋತಿಯೊಂದಿಗೆ ನರಗುಂದದಿಂದ ರಾಜಧಾನಿ ಬೆಂಗಳೂರಿಗೆ ಬಂದ ಬೃಹತ್ ಕಾಲ್ನಡಿಗೆ ಜಾಥಾ ಬೆಂಗಳೂರಿನ ಕಾರ್ಮಿಕವರ್ಗ ನೀಡಿದ ಅಭೂತಪೂರ್ವ ಸ್ವಾಗತ ಗುಂಡೂರಾವ್ ಸರ್ಕಾರದ ಸರ್ವಾಧಿಕಾರಿ ಆಳ್ವಿಕೆಯ ತಳಪಾಯವನ್ನೇ ಅಲುಗಾಡಿಸಿತು. ಹೀಗೆ ಆರಂಭವಾದ ಈ ಜನಪರ ಐತಿಹಾಸಿಕ ಚಳುವಳಿ ಅಲೆ ಅಲೆಯಾಗಿ ಬೆಳೆದು 1983 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರುವಂತಾಯಿತು. ರೈತ ನಾಯಕರಾದ ಕಾಮ್ರೇಡ್ ಪಿ. ರಾಮಚಂದ್ರರಾವ್, ಕಾಮ್ರೇಡ್ ಅಪ್ಪಸ್ವಾಮಿರೆಡ್ಡಿ ಹಾಗೂ ಕಾರ್ಮಿಕ ನಾಯಕರಾದ ಕಾಮ್ರೇಡ್ ಎಸ್. ಸೂರ್ಯನಾರಾಯಣ ರಾವ್ ವಿಧಾನಸಭೆಗೆ ಆಯ್ಕೆಯಾಗಿ ದುಡಿಯುವ ವರ್ಗದ ಧ್ವನಿಯನ್ನು ಅವರು ವಿಧಾನಸೌಧದಲ್ಲಿ ಮೊಳಗಿಸುವಂತಾಯಿತು.

ಇಡೀ ದೇಶದ ಗಮನವನ್ನೇ ಸೆಳೆದ ಮಲಪ್ರಭಾ ರೈತರ ಈ ಚಳುವಳಿಯನ್ನು ಸ್ಮರಿಸುವಾಗ ರಾಜ್ಯದಲ್ಲಿ ಅಂದಿನ ಮತ್ತು ಇಂದಿನ ಸ್ಥಿತಿಗತಿಗಳನ್ನು ಪರಿಶೀಲಿಸುವುದು ಅಗತ್ಯವಿದೆ.

ಅಂದು ಮಲಪ್ರಭ ನದಿಯ ನೀರು ಇಲ್ಲಿಯ ರೈತರ ಭೂಮಿಗೆ ಬಂದಾಗ ಬರಗಾಲದ ಬವಣೆಯಿಂದ ತಾವು ಪಾರಾದೆವೆಂದು ರೈತರು ಖುಷಿಪಟ್ಟಿದ್ದರು. ಆದರೆ ರೈತರ ಕನಸು ನನಸಾಗಲಿಲ್ಲ. ನೀರಿನೊಂದಿಗೆ ಅನೇಕ ಹೊಸ ಸಮಸ್ಯೆಗಳೂ ಬಂದವು. ಕಾಲುವೆಗಳ ನಿರ್ಮಾಣ ಸರಿಯಾಗಿ ಆಗಿರಲಿಲ್ಲ. ಬಸಿಗಾಲುವೆಗಳ ನಿರ್ಮಾಣ ಆಗಿರಲಿಲ್ಲ. ಭೂಮಿ ಜವುಳಾಯಿತು, ಸವುಳಾಯಿತು. ಕಾಲುವೆ ಕೊನೆತುದಿಗೆ ನೀರು ತಲುಪಲೇ ಇಲ್ಲ. ವ್ಯವಸ್ಥಿತವಾಗಿ ನೀರು ಒದಗಿಸಲು ಕ್ರಮಕೈಗೊಳ್ಳದ ಸರ್ಕಾರ ರೈತರ ಮೇಲೆ ನೀರಿನ ತೆರಿಗೆ ಹೇರಲು ತಡಮಾಡಲಿಲ್ಲ. 1976 ರಲ್ಲಿ ನೀರು ಬಂದಿದ್ದರೂ 1974 ರಿಂದಲೇ ತೆರಿಗೆ ವಿಧಿಸಲಾಯಿತು. ಇದು ಸಾಲದೆನ್ನುವಂತೆ ರೈತರಿಂದ ಅಭಿವೃದ್ಧಿ ಕರವನ್ನು ಸಂಗ್ರಹಿಸಲೂ ಆರಂಭಿಸಲಾಯಿತು. ಪ್ರತಿ ಎಕರೆಗೆ ರೂ.5000 ರಿಂದ 15000 ದ ವರೆಗೆ ವಿಧಿಸಲಾದ ಕರವನ್ನು ಸಂದಾಯ ಮಾಡಲು ರೈತರು ತಮ್ಮ ಭೂಮಿಯನ್ನು ಮಾರಾಟ ಮಾಡುವಂತಹ ಪರಿಸ್ಥಿತಿ ಉಂಟಾಯಿತು. ಅದೇ ಸಮಯಕ್ಕೆ ಸರಿಯಾಗಿ ವರಲಕ್ಷ್ಮಿ ಹತ್ತಿಯ ದರ ಕ್ವಿಂಟಾಲಿಗೆ 1000 ರೂಪಾಯಿ ಇದ್ದದ್ದು 350 ರೂಪಾಯಿಗೆ ಇಳಿದು ಬಿಟ್ಟಿತ್ತು. ಈ ಬಗ್ಗೆ ಎರಡು ವರ್ಷಗಳಿಂದ ರೈತರು ಮನವಿ, ಮೆರವಣಿಗೆ, ಉಪವಾಸ ಸತ್ಯಾಗ್ರಹಗಳನ್ನು ಮಾಡುತ್ತಾ ಬಂದರೂ ಗುಂಡೂರಾವ್ ಸರ್ಕಾರಕ್ಕೆ ಕನಿಕರ ಬರಲಿಲ್ಲ. ನೀರಾವರಿ ಇಲಾಖೆಯ ಅಧಿಕಾರಿಗಳ ದಬ್ಬಾಳಿಕೆ ಮಿತಿಮೀರಿ ಹೋಗಿತ್ತು. ರೈತರ ಅಸಂತೃಪ್ತಿ ಸ್ಫೋಟಗೊಂಡದ್ದೇ ಜುಲೈ 21 ರಂದು.

ಅಂದು ಕೇಂದ್ರದಲ್ಲಿಯೂ ರಾಜ್ಯದಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು. ಹಣಕಾಸು ನಿಧಿಯಿಂದ ಸಾಲತಂದು ಅದರ ಷರತ್ತುಗಳ ಅನುಷ್ಠಾನಕ್ಕೆ ಕ್ರಮ ಕೈಕೊಳ್ಳತೊಡಗಿತ್ತು. ಕೇಂದ್ರ ಸರ್ಕಾರದ ಒತ್ತಡಗಳಿಗೆ ಅನುಗುಣವಾಗಿ ಕರ್ನಾಟಕ ಸರ್ಕಾರ ರೈತರಿಂದ ಬ್ಯಾಂಕ್‌ಸಾಲ, ನೀರಾವರಿಕರ, ಅಭಿವೃದ್ಧಿ ಕರ ಇತ್ಯಾದಿಗಳನ್ನು ವಸೂಲಿ ಮಾಡಲು ದಬ್ಬಾಳಿಕೆಯ ಕ್ರಮಗಳನ್ನು ಅನುಸರಿಸಲಾರಂಭಿಸಿತ್ತು. ಫಸಲಿಗೆ ಸರಿಯಾದ ಬೆಲೆ ದೊರೆಯದೆ ಕಂಗೆಟ್ಟ ರೈತರಿಂದ ಬಲವಂತದ ವಸೂಲಿ ಕ್ರಮದಿಂದಾಗಿ ಗಾಯದ ಮೇಲೆ ಬರೆ ಹಾಕಿದಂತಾಯಿತು. ಹತ್ತಾರು ರೀತಿಯಿಂದ ಸರ್ಕಾರದ ನೆರವಿಗಾಗಿ ಮೊರೆಯಿಟ್ಟರೂ ಪ್ರಯೋಜನವಾಗದೆ ಹೋದಾಗ ರೈತರಲ್ಲಿ ಸಹಜವಾಗಿ ಸಂಘಟಿತರಾಗಿ ಹೋರಾಡುವ ಪ್ರಜ್ಞೆ ಉದಯವಾಯಿತು. ನರಗುಂದ ರೈತ ಬಂಡಾಯವು ಈ ಪ್ರಜ್ಞಾಪೂರ್ವಕ ಪ್ರಯತ್ನದ ಕಿಡಿಯಾಗಿ ಸ್ಫೋಟಗೊಂಡಿತು.

ಮಲಪ್ರಭಾ ರೈತರ ಹೋರಾಟವು ರಾಜ್ಯದ ರಾಜಕೀಯ ಚಿತ್ರವನ್ನೇ ಬದಲಾಯಿಸುವಲ್ಲಿ ಯಶಸ್ವಿಯಾಯಿತು. ಮಾತ್ರವಲ್ಲ ಅಸಂಘಟಿತ ರೈತರಲ್ಲಿ ಸಂಘಟನೆಯ ಆವಶ್ಯಕತೆ ಹಾಗೂ ಮಹತ್ವದ ಕುರಿತು ಅರಿವು ಮೂಡಿಸಿತು. ರೈತರಲ್ಲಿ ಉಂಟಾದ ಈ ಜಾಗೃತಿಯ ಲಾಭ ಪಡೆದು ಮಲೆನಾಡಿನ ಕಬ್ಬು ಬೆಳೆಗಾರರ ಸಂಘವು ರಾಜ್ಯ ರೈತ ಸಂಘವಾಗಿ ಪರಿವರ್ತನೆ ಹೊಂದುವಂತಾಯಿತು.

ಪಕ್ಷಾತೀತವಾಗಿ ಆರಂಭವಾದ ರಾಜ್ಯ ರೈತ ಸಂಘದ ಮುಖಂಡರು ರಾಜಕೀಯ ಅಧಿಕಾರದ ಗದ್ದುಗೆಯನ್ನೇರಲು ರೈತ ಸಂಘವನ್ನೇ ಏಣಿಯಾಗಿ ಬಳಸಲು ಹೊರಟಾಗ ರೈತರ ಒಗ್ಗಟ್ಟಿಗೆ ಧಕ್ಕೆಯಾಯಿತು. ಸಾವಿರಾರು ರೈತರನ್ನು ಹೋರಾಟಕ್ಕಿಳಿಸಿ ಜೈಲಿಗೂ ಕರೆದೊಯ್ಯುವ ಸಾಮರ್ಥ್ಯ ಹೊಂದಿದ್ದ ರಾಜ್ಯ ರೈತ ಸಂಘವು ಇಂದು ರೈತರ ವಿಶ್ವಾಸ ಕಳೆದುಕೊಳ್ಳುತ್ತಿದೆ. ರೈತರ ರಕ್ತವನ್ನೇ ಹೀರುವ ದೊಡ್ಡ ದೊಡ್ಡ ಬನಿಯಾಗಳು, ಮಾರ್ವಾಡಿಗಳು, ಬೆಂಬಲಿಸುವ ಬಿ.ಜೆ.ಪಿ ಪಕ್ಷಕ್ಕೆ ಜಿಗಿದಿರುವ ಬಾಬಾಗೌಡ ಪಾಟೀಲರ ಹೆಗಲ ಮೇಲೆ ಹಸುರು ಶಾಲೊಂದು ವಿಜೃಂಭಿಸುತ್ತಿರುವುದು ದಾರಿತಪ್ಪಿದ ರೈತ ಚಳುವಳಿಯನ್ನು ಅಣಕಿಸುವಂತಿದೆ.

ಮಲಪ್ರಭ ರೈತ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘವು ಸೌಂದತ್ತಿ, ರಾಮದುರ್ಗ ಮೊದಲಾದ ತಾಲೂಕುಗಳಲ್ಲಿ ರೈತರ ಮಧ್ಯದಲ್ಲಿ ಪ್ರಭಾವವನ್ನು ಉಳಿಸಿಕೊಂಡಿರುವುದು ಬಿಟ್ಟರೆ ನರಗುಂದ ನವಲಗುಂದ ತಾಲೂಕುಗಳ ರೈತರ ನಡುವೆ ಕೆಲಸವನ್ನು ಮುಂದುವರೆಸಲಾಗದ್ದು ಅದರ ಬಲಹೀನತೆಯಾಗಿದೆ. ಆದರೆ ಮಲಪ್ರಭ ಚಳುವಳಿಯ ಸ್ಫೂರ್ತಿಯನ್ನು ರಾಜ್ಯದ ಗುಲ್ಬಾರ್ಗ, ಬಿಜಾಪುರ, ಬಳ್ಳಾರಿ, ರಾಯಚೂರು ಮೊದಲಾದ ಜಿಲ್ಲೆಗಳಿಗೆ ಕೊಂಡೊಯ್ದು ರೈತರನ್ನು ಹೋರಾಟದ ದಾರಿಯಲ್ಲಿ ಮುನ್ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ ಯಶಸ್ವಿಯಾಗಿರುವುದು ಅದರ ಸಾಧನೆ. ಕೋಲಾರ, ದಕ್ಷಿಣ ಕನ್ನಡ ಮೊದಲಾದ ಜಿಲ್ಲೆಗಳ ರೈತ ಚಳುವಳಿಗೂ ಮಲಪ್ರಭ ರೈತರ ಹೋರಾಟಕ್ಕೆ ಹೊಸ ಚಾಲನೆಯನ್ನು ನೀಡಿದೆ. ಜುಲೈ 21, 1980 ರ ನರಗುಂದ ನವಲಗುಂದ ರೈತ ಬಂಡಾಯದ ನಂತರ ಮಲಪ್ರಭೆಯಲ್ಲಿ ಬಹಳಷ್ಟು ನೀರು ಹರಿದಿವೆ. ಕೇಂದ್ರದಲ್ಲಿ ಸರ್ಕಾರಗಳು ಬದಲಾಗಿವೆ. ಆದರೆ ನೀತಿಗಳು ಮಾತ್ರ ಬದಲಾಗಲಿಲ್ಲ, ಬದಲಾದದ್ದು ಅವುಗಳ ಅನುಷ್ಟಾನದ ವೇಗ ಮಾತ್ರ. ಈಗ ಉಸ್ತುವಾರಿ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವೂ ರೈತರನ್ನು ದಿವಾಳಿಯೆಬ್ಬಿಸಲು ಎಳ್ಳಷ್ಟೂ ಮುಜುಗರ ಪಟ್ಟುಕೊಳ್ಳಲಿಲ್ಲ. ನಕಲೀ ಬೀಜ, ನಕಲೀ ಗೊಬ್ಬರ, ನಕಲೀ ಕ್ರಿಮಿನಾಶಕಗಳನ್ನು ಬಳಸಿದ ರೈತರು ತಮ್ಮ ಮಾನ ಮರ್ಯಾದೆ ಹರಾಜು ಆಗುತ್ತಿರುವುದನ್ನು ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುವಂತಾಯಿತು. ದೇಶಕ್ಕೆ ಅನ್ನ ಹಾಕುವ ರೈತ ದಿಕ್ಕಿಲ್ಲದವನಂತಾಗಿ ಸಾವಿಗೆ ಶರಣಾಗುತ್ತಿದ್ದಾಗ ಬಿ.ಜೆ.ಪಿ. ಸರ್ಕಾರ ರೈತರ ಆತ್ಮಹತ್ಯ ಪ್ರಕರಣದಲ್ಲಿಯೂ ರಾಜಕೀಯ ಮಾಡಲು ಹೇಸಲಿಲ್ಲ. ನಕಲೀ ಬೀಜ, ಗೊಬ್ಬರ ಇತ್ಯಾದಿಗಳನ್ನು ಪೂರೈಸಿದ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಕಠಿಣ ಕ್ರಮಗಳನ್ನು ಜರುಗಿಸುವ ಬದಲು ರೈತರ ಆತ್ಮಹತ್ಯೆಗಳಿಗೆ ರಾಜ್ಯ ಜನತಾದಳ ಸರ್ಕಾರವೇ ಹೊಣೆ ಎಂದು ಕೈತೊಳೆದು ಕೊಳ್ಳಲು ಪ್ರಯತ್ನಿಸಿದರು. ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಗಳಿಗೆ ಭೇಟಿ ಕೊಟ್ಟು ಪ್ರಚಾರ ಗಿಟ್ಟಿಸಿಕೊಳ್ಳಲು ಮರೆಯದ ಬಿ.ಜೆ.ಪಿ.ಗಳು ರೈತರ ಅಸಂತೃಪ್ತಿಯನ್ನು ಜನತಾದಳದ ವಿರುದ್ಧ ತಿರುಗಿಸಲು ವಿಶೇಷ ಗಮನಕೊಟ್ಟರು.

ಬಿಜೆಪಿಯ ಸೆರಗನ್ನು ಹಿಡಿದು ಕೇಂದ್ರದಲ್ಲಿ ವಾಣಿಜ್ಯಮಂತ್ರಿಯಾಗಿರುವ ಲೋಕಶಕ್ತಿಯ ರಾಮಕೃಷ್ಣ ಹೆಗಡೆಯವರ ಹೊಸ ಆಮದು ರಫ್ತು ನೀತಿಯಿಂದಾಗಿ ರೈತರು ಕೃಷಿರಂಗವನ್ನೇ ಬಿಟ್ಟು ಓಡಿ ಹೋಗುವಂತಾಗಿದೆ. ವಿದೇಶದಿಂದ ಸಕ್ಕರೆ ಆಮದು ಮಾಡಿಕೊಳ್ಳುವುದರಿಂದ ದೇಶದ ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪತ್ತಿಯಾದ ಸಕ್ಕರೆ ಮಾರಾಟವಾಗದೆ ರೈತರು

ನರಗುಂದ ಬಂಧುಗಳು

ಬಿಸಿಲ ಬೇಗೆಗೆ ಬಿರಿದ ನೆಲದೊಳಗಿಂದ ಬಿಸಿಯುಸಿರು
ಬಸಿರಿಟ್ಟ ಬೀಜಗಳ ಸುಟ್ಟು ಹೊಗೆಯಾಡುತಿದೆ ಗಾಳಿಯಲ್ಲಿ
ನೊಗ ಹೊತ್ತ ಜೀವಗಳು ಜಡವಾಗಿ ಬಡವಾಗಿ
ಎಲುಬುಗೂಡುಗಳಾಗಿ ಹಸಿರು ಕಾಣದೆ
ಉಸಿರಡಗಿ ಮೂಳೆ ಚಕ್ಕಳದ ತಟ್ಟೆಗಳು.
ನೀರಿಲ್ಲದ ಕಾಲುವೆಗಳು ಕೆಲರಿಲ್ಲದ ಕುಂಟೆಗಳಲ್ಲಿ
ಒಣಗಿ ತರಗಾದ ಮೀನುಗಳ ರಾಶಿ.
ಹಾರಾಡುತ್ತಿರುವ ಹದ್ದು ಕಾಗೆಗಳ ಸದ್ದಿಲ್ಲ.
ಗುಡ್ಡ ಬೆಟ್ಟಗಳಲ್ಲಿ ಮುಖ ಸೋತ ಗಿಡ ಮರ ಬಳ್ಳಿ
ಸುಟ್ಟು ಸುಡುಗಾಡಾದ ಕರುನಾಡ ನೆಲ.
ನೀರು ಬತ್ತಿದ ಕಣ್ಣುಗಳು, ಮಾಂಸವಿಲ್ಲದ ಮೂಳೆಗಳು
ಓಡಾಡುತ್ತಿವೆ ಹೊಲದ ಬದುಗಳ ಮೇಲೆ
ತಲೆ ಎತ್ತಿ ಆಕಾಶದತ್ತ ಹತ್ತಿ ರಾಶಿಯ ಕಂಡು ಸಂಕಟದ
ಸಮರದಲ್ಲಿ ಬದುಕಿವೆ- ಬದುಕು ಮನ್ನಿಸು ಎಂದು.
ನಾರು ಹುಣ್ಣಿಗೆ ಬರೆ ಇಕ್ಕಿದಂತೆ, ಬರಗಾಲಕ್ಕೆ ನೆಂಟರು
ಬಂದರೋ ಬಂದರು ಕಂದಾಯ ಸುಂಕಗಳ ಸುಲಿಗೆಗೆ
ಅಧಿಕಾರಿಗಳ ದಂಡು ಚಿರತೆ ಹಿಂಡಾಗಿ.
ಎತ್ತಿ ಎಸೆದು ಆಚೆ ಇದ್ದ ಬದ್ದುದನೆಲ್ಲ ಚೆಂಬು ತಣಿಗೆ,
ನೆಲಕೆ ಬಿದ್ದ ಸದ್ದಿಗೆ ಭೂತಾಯಿ ಎದೆಯೊಡೆದು ಅತ್ತಳೋ
ಮಿಳಮಿಳನೆ ನೋಡಿ ಗಳಗಳನೆ ಅಳುವಾಗ
ಕರುಳ ಕತ್ತರಿಸಿ ಎಳೆದೆಳೆದು ಸೆಳೆದರೋ
ಬತ್ತಿ ಹೋಗಿದೆ ಕಣ್ಣು ಬಸವಿಲ್ಲ ಭುಜದೊಳಗೆ
ಎದೆಯೊಳಗೆ ರಂಜಕದ ಕಿಡಿಹತ್ತಿ ಕಣ್ಣೊಳಗೆ
ಕುಳುಕಿ ಗಾಳಿಯಲಿ ಸುಳಿಸುಳಿದು ಮುಖ ಮುಖಗಳಲಿ
ಎದುರೆದ್ದು ನುಗ್ಗಿ ಮೈಕೊಡವಿ ಕುಡಗೋಲು ಕೊಡಲಿ
ರಾಟೆ ಮೇಟಿಗಳ ಹಿಡಿದು ಕಾಲಿಟ್ಟ ಕಡೆಯಲ್ಲೆಲ್ಲ ಲಂಕಾದಹನ
ಕೋವಿನಳಿಗೆಗಳ ಷೆಲ್ಲು ಹೊಗೆಗಳಿಗೆ ಎದೆಕೊಟ್ಟು
ಹೊಡೆದ ಗುಂಡುಗಳ ಬಾಯಲ್ಲಿ ನುಂಗಿ ನುಗ್ಗಿದರು
ನೆಲತಾಯ ಮಕ್ಕಳು ನರಗುಂದ ಬಂಧುಗಳು.

ಹಾನಗ

1980 ರಲ್ಲಿ ನರಗುಂದ ನವಲಗುಂದದಲ್ಲಿ ನಡೆದ
ಗುಂಡಿಗೆ ಬಲಿಯಾಗಿ ಅಸುನೀಗಿದ ಯುವ ರೈತರಾದ
ಬಸಪ್ಪ ಶಿವಪ್ಪ ಲಕ್ಕುಂಡಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸ
ಹಾನಗಲ್ಲಿನಲ್ಲಿ ರೈತ ಹುತಾತ್ಮರ ದಿನವನ್ನು ಆಚರಿಸಲಾ
ಸಂಘ ಹಾಗೂ ಪ್ರಾಂತ ಕೃಷಿಕೂಲಿಕಾರರ ಸಂಘದ ಜಂ
ಸಭೆಯಲ್ಲಿ ತಾಲೂಕಿನ ಹತ್ತಾರು ಗ್ರಾಮಗಳಿಂದ
ಭಾಗವಹಿಸಿದ್ದರು. ಅಂದಿನ ಮಲಪ್ರಭಾ ರೈತರ ಚಳುವ
ಸ್ವಾಮಿ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಕಾಡಶೆಟ್ಟಿ ಹಳ್ಳಿಯ ಶಿವರುದ್ರ
ಸಿ.ಎಂ.ಪಾಟೀಲ್, ಮರ್ದಾನ್ ಸಾಬ ಕೋಟಿ,



ಕಬ್ಬನ್ನು ಸುಡಬೇಕಾಗಿ ಬಂದಿದೆ. ತೊಗರಿಯನ್ನು
ಶಗಳಿಂದ ತರಿಸಿಕೊಳ್ಳುವುದರಿಂದ ರಾಜ್ಯದಲ್ಲಿ
ಯುವ ತೊಗರಿ ಮಾರುಕಟ್ಟೆ ಇಲ್ಲದಂತಾಗಿ ರೈತರು
ತ್ಯೆ ಮಾಡಿ ಕೊಳ್ಳುತ್ತಿರುವುದು ಮುಂದುವರೆದಿದೆ.
ಟ್ಟೆ ವನಸ್ಪತಿಗಳು, ಪಾಮೋಲಿನ್ ಮೊದಲಾದ
ವಿದೇಶಗಳಿಂದ ಹರಿದು ಬರಲು ಅವಕಾಶ
ಕೊಟ್ಟಿರುವುದರಿಂದ ಶೇಂಗಾ ಮೊದಲಾದ
ಳು ಬೆಳೆಯುವ ರೈತನಿಗೆ ಆಘಾತವಾಗಿದೆ.
ದ ಬೆಲೆ ಒಮ್ಮಿಂದೊಮ್ಮೆಲೆ ಕುಸಿದುದನ್ನು
ಳ್ಳಲಾಗದೆ ಶಿರಾದ ರೈತರು ಬೀದಿಗಿಳಿದಾಗ
ಮೇಲೆ ಗುಂಡು ಹಾರಿಸಿ ಅವರ ಧ್ವನಿಯನ್ನು
ಸುವ ಪ್ರಯತ್ನ ನಡೆದದ್ದು ಕೃಷಿರಂಗವನ್ನು
ದಿನ ದಿನಗಳಲ್ಲಿ ಆವರಿಸಲಿರುವ ಭೀಕರ
ನ ಮುನ್ಸೂಚನೆಯಾಗಿದೆ.

ಉದಾರೀಕರಣ ಜಾಗತೀಕರಣದ ನೀತಿಯನ್ನು
ರೀತಿಯಲ್ಲಿ ಯಾವುದೇ ಅಡೆತಡೆ ಇಲ್ಲದೆ
ದುವರೆಸುವಂತಾದರೆ ನಮ್ಮ ದೇಶದ ಹಾಗೂ
ದ ಕೃಷಿ ರಂಗ ದೊಡ್ಡ ಅಪಾಯಕ್ಕೊಳಗಾಗುವು
ಸಂಶಯವಿಲ್ಲ. ಪರಿವರ್ತನೆ ಹೊಂದುವುದರಲ್ಲಿ
ಯವಿಲ್ಲ. ಆದ್ದರಿಂದ ಕೇಂದ್ರದಲ್ಲಿ ಯಾವ ಸರ್ಕಾರ
ಕಾರಕ್ಕೆ ಬರುತ್ತದೆ ಎಂಬುದು ಮುಖ್ಯ
ಯಾಗುತ್ತದೆ. ತಮ್ಮ ಹಿತಾಸಕ್ತಿಗಳನ್ನು ಕಾಪಾಡುವ
ತ್ತ ಆ ಮೂಲಕ ದೇಶದ ಹಿತವನ್ನು ರಕ್ಷಿಸುವ
ವಾಗಿ ಕೇಂದ್ರದಲ್ಲಿ ಬಿ.ಜೆ.ಪಿ. ನೇತೃತ್ವದ ಸರ್ಕಾರ
ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳುವುದು
ನ ರೈತರ ತಕ್ಷಣದ ಪ್ರಥಮ ಕರ್ತವ್ಯವೆನ್ನ
ದು. ಆಪತ್ತನ್ನು ತಡೆಯುವುದಕ್ಕೆ ಗಮನ
ಕುವಾಗಲೇ ತಮ್ಮ ಹಿತರಕ್ಷಣೆಗಾಗಿ ಹೋರಾಡಲು
ವಿಶಾಲ ತಳಹದಿಯಲ್ಲಿ ಸಂಘಟಿತರಾಗುವುದು
ಮುಖ್ಯವಾಗುತ್ತದೆ. ನಾಡಿನ ಎಲ್ಲಾ ರೈತರನ್ನು
ಲವಾಗಿ ಸಂಘಟಿಸುವ ತಾತ್ವಿಕ ನೆಲೆಗಟ್ಟು
ವುದು ಅಖಿಲ ಭಾರತ ಕಿಸಾನ್ ಸಭಾಕ್ಕೆ ಸೇರಿರುವ
ಟಕ ಪ್ರಾಂತ ರೈತ ಸಂಘಕ್ಕೆ ಮಾತ್ರ. ಬರಲಿರುವ
ರ ಸವಾಲುಗಳನ್ನು ಎದುರಿಸಲು ಕರ್ನಾಟಕದ
ನ್ನು ದೊಡ್ಡ ಪ್ರಮಾಣದಲ್ಲಿ ಸಂಘಟಿಸಲು ಪ್ರಾಂತ
ಸಂಘವು ಮುಂದಾಗಬೇಕಾಗದುದು
ಗತ್ಯವಾಗಿದೆ.

ರೈತ ಚಳುವಳಿಯ ಉಕ್ಕೇರಿದ ಅಲೆ

ಜಿ.ಎನ್.ನಾಗರಾಜ್

"ರೈತರು ಬರುವರು ದಾರಿ ಬಿಡಿ
ರೈತರ ಕೈಗೆ ರಾಜ್ಯ ಕೊಡಿ"

ಇದು 1981 ರ ಜನವರಿಯಲ್ಲಿ ರೈತ ಬಂಡಾಯದ ಸ್ಫೂರ್ತಿ ಕೇಂದ್ರವಾಗಿದ್ದ ನರಗುಂದದಿಂದ ಬೆಂಗಳೂರಿನವರೆಗೆ ಕಾಲ್ನಡಿಗೆ ಜಾಥಾದಲ್ಲಿ ಹೊರಟಿದ್ದ ರಾಜ್ಯ ರೈತ ನಾಯಕರು ರೈತ ಚಳುವಳಿಕಾರರು ಮೊಳಗಿಸಿದ ರಣ ಕಹಳೆಯ ಧ್ವನಿ. ರಾಜ್ಯದ ಪ್ರಧಾನ ಸಂಚಾರ ನಾಡಿ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಚಳುವಳಿಯನ್ನು ಸ್ವಾಗತಿಸಲು ಹಾಗೂ ಮುಂದಿನ ಊರಿಗೆ ಬೀಳ್ಕೊಡಲು ಊರಿಗೆ ಊರೇ ಎದ್ದು ಬರುತ್ತಿತ್ತು. ಸಾವಿರಗಟ್ಟಲೆಯಾಗಿ ಹೆದ್ದಾರಿಯಲ್ಲಿ ಹರಿಯುತ್ತಿದ್ದಈ ರೈತ ಪ್ರವಾಹದ ನಡುವಿನಿಂದ ಅಲೆಅಲೆಯಾಗಿ ಧ್ವನಿಯೊಂದು ಹೊರಹೊಮ್ಮುತ್ತಿತ್ತು. ತಮಟೆಗಳ ಉತ್ತಾನದ ಬುಗ್ಗೆಯನ್ನೇ ಹರಿಸುತ್ತಿದ್ದವು. ಚಿಕ್ಕನರಗುಂದದ ಅನಾಮಿಕ ಕೃಷಿಕೂಲಿಕಾರನೊಬ್ಬ ತಾನೇ ಕಟ್ಟಿದ ಹಾಡೊಂದನ್ನು ಕಂಚಿನ ಕಂಠದಲ್ಲಿ ಮೊಳಗಿಸುತ್ತಿದ್ದ

"ಕೇಳ್, ಕೇಳ್, ಕೇಳೆಲೊ ರೌಡಿ
ನೀನಲ್ಲೊ ನಮ್ಮ ಸಮಾನ ಜೋಡಿ"
'ಈಗ ಮಾಡಿವಿ ಆರಂಭ
ವಿಧಾನಸೌಧದಿ ರಣಗಂಭ'


ಅಂದು ರಾಜ್ಯ ಮುಖ್ಯಮಂತ್ರಿಯಾಗಿ ದರ್ಬಾರು ನಡೆಸುತ್ತಾ ರೈತ, ಕಾರ್ಮಿಕರ ಮೇಲೆ ಗುಂಡಿನ ಸುರಿಮಳೆ ಸುರಿಸುತ್ತಿದ್ದ ಗೂಂಡಾಗಳ ನಾಯಕನೆಂದೇ ಹೆಸರಾಗಿದ್ದ ಗುಂಡೂರಾವ್‌ರಿಗೆ ಕೂಲಿಕಾರನೊಬ್ಬ ಹೆಮ್ಮೆಯಿಂದ ಹೇಳುತ್ತಿದ್ದ 'ನೀನಲ್ಲೊ ನಮ್ಮ ಸಮಾನ ಜೊಡಿ'

ಜನರ ನಡುವಿನಿಂದ ಕವಿಯೊಬ್ಬ ಹುಟ್ಟಿದ್ದ. ಇಡೀ ರಾಜ್ಯ ರೈತ ಕೂಲಿಕಾರರ ಎದೆಯಾಳದ ಭಾವನೆಗಳು ಈ ಕೂಲಿಕಾರನಿಗೆ ತಮ್ಮೆಲ್ಲಾ ಮಾತುಗಳನ್ನು, ಶಕ್ತಿಯನ್ನು ಧಾರೆಯೆರೆದಿದೇನೋ ಎಂಬಂತೆ ಸ್ಫೂರ್ತಿ ತುಂಬಿ ಹಾಡುತ್ತಿದ್ದ. ಅದುರಾಜ್ಯದ ಎಲ್ಲೆಡೆಗೆ ಬಡಿದು ಇಮ್ಮಡಿ, ಮುಮ್ಮಡಿಯಾಗಿ ಲಕ್ಷ ಕೋಟಿಮಡಿಯಾಗಿ ಅಂದಿನ ಸರ್ಕಾರದ ರಾಕ್ಷಸೀ ಹೃದಯ ಝಲ್ಲೆನ್ನುವಂತೆ ನಡುಗಿಸಿತ್ತು.

ಈ ಜಾಥಾ ಬೆಂಗಳೂರಿನಲ್ಲಿ ಕೊನೆಗೊಂಡಾಗ ರಾಜ್ಯದ ಎಲ್ಲಕಡೆಯಿಂದ ಹರಿದು ಬಂದ ರೈತ ಪ್ರವಾಹ ಲಕ್ಷಗಟ್ಟಲೆನೆರೆದಿತ್ತು. ಬೆಂಗಳೂರಿನ ಕಾರ್ಮಿಕರು ತೆರೆದ ಹೃದಯದಿಂದ ತಮ್ಮ ಈ ಬಂಧುಗಳನ್ನು ಸ್ವಾಗತಿಸಿದ್ದರು. ಇದಕ್ಕೆಲ್ಲಾ ಮೂಲನೆಲೆಯಾದದ್ದು ಮಲಪ್ರಭೆ ತುಂಬಿ ರೈತರ ಹೊಲಗಳಿಗೆ ತುಳುಕಿದ ನರಗುಂದ, ನವಲಗುಂದ, ಸೌಂದತ್ತಿಯಲ್ಲಿ 1980 ರ ಜುಲೈ 20 ರಂದು ನಡೆದ ರೈತ ಬಂಡಾಯ.

ಅಂದು 1980 ಜುಲೈ 21 ರಂದು ಧಾರವಾಡ ಜಿಲ್ಲೆಯ ನರಗುಂದ, ನವಲಗುಂದ, ಬೆಳಗಾವಿ ಜಿಲ್ಲೆಯ ಸೌಂದತ್ತಿ ತಾಲ್ಲೂಕಿನ ಬಂದ್‌ಗೆ ಮಲಪ್ರಭ ರೈತ ಹೋರಾಟ ಸಮನ್ವಯ ಸಮಿತಿ ಕರೆ ನೀಡಿತ್ತು. ಅಂಗಡಿ ಮುಂಗಟ್ಟುಗಳು ಬ್ಯಾಂಕ್, ಸರ್ಕಾರಿ ಕಛೇರಿಗಳೂ ಯಾರಿಗೂ ಈ ಬಂದ್ ಕರೆಯನ್ನು ಉಲ್ಲಂಘಿಸುವ ಧೈರ್ಯವಿರಲಿಲ್ಲ. ಎಷ್ಟೋ ಅಧಿಕಾರಿಗಳು ಅದರಲ್ಲಿಯೂ ಪ್ರಮುಖವಾಗಿ ನೀರಾವರಿ ಇಲಾಖೆಯ ಅಧಿಕಾರಿಗಳು ಊರನ್ನೇ ಬಿಟ್ಟು ಪಲಾಯನ ಮಾಡಿದ್ದರು. ಏಕೆಂದರೆ ರೈತ ಸಮುದಾಯದಲ್ಲಿ ಭುಸುಗುಡುತ್ತಿದ್ದ ಅತೃಪ್ತಿಯ ಕಾವು ಎಲ್ಲರಿಗೂ ಗೊತ್ತಾಗಿತ್ತು. 1979 ರ ಡಿಸೆಂಬರ್ ತಿಂಗಳಿಂದಲೇ ರೈತರು ಹೋರಾಟಕ್ಕಿಳಿ ದಿದ್ದರು. ಮೊದಲು ನವಲಗುಂದ ತಾಲ್ಲೂಕಿನ ಅಳಗವಾಡಿಯಿಂದ ಆರಂಭವಾದ ರೈತರ ಹೋರಾಟ ಕಿಡಿ ಸುತ್ತಮುತ್ತಲ ಗ್ರಾಮಗಳಿಗೆ ಅತಿ ವೇಗದಲ್ಲಿ ಹಬ್ಬಿತ್ತು. ನವಲಗುಂದದಲ್ಲಿ ಅನೇಕ ಬಾರಿ ರೈತರು ಸಭೆ, ಪ್ರತಿಭಟನೆ ಮೆರವಣಿಗೆ, ರಾಸ್ತಾರೋಕೋ ನಡೆಸಿದ್ದರು. ಅದರ ಪ್ರಭಾವದಿಂದ ನರಗುಂದ, ಸವದತ್ತಿಯಲ್ಲಿಯೂ ತಾನೇತಾನಾಗಿ ಹೋರಾಟದ ಕಿಚ್ಚು ಹರಡತೊಡಗಿತ್ತು. ನರಗುಂದದಲ್ಲಿ ತಿಂಗಳು ಗಟ್ಟಲೆ ಧರಣಿ ಸತ್ಯಾಗ್ರಹ ನಡೆಯಿತು. ನವಲಗುಂದದಲ್ಲಿಯೂ ಜುಲೈ 7 ರಿಂದಲೇ ಧರಣಿ ಸತ್ಯಾಗ್ರಹ ಆರಂಭವಾಯಿತು. ಆದರೆ ಸರ್ಕಾರ ಚುನಾಯಿತಪ್ರತಿನಿಧಿಗಳು ರೈತರ ಬೇಡಿಕೆಗಳಿಗೆ ಕಿವಿಗೊಡಲಿಲ್ಲ. ಬದಲಾಗಿ ಜಿಲ್ಲಾ ಆಡಳಿತದ ಮೂಲಕ-ಜಿಲ್ಲಾಧಿಕಾರಿ, ವಿಶೇಷ ಜಿಲ್ಲಾಧಿಕಾರಿಗಳ ಮೂಲಕ ಠೇಂಕಾರದ ಉತ್ತರ ನೀಡಿದ್ದರು. ಇದು ರೈತರನ್ನು ಕೆರಳಿಸಿತ್ತು. ಮೂರು ತಾಲ್ಲೂಕುಗಳ ಚಳುವಳಿಯೂ ಒಗ್ಗೂಡಿ ಸಂಗಮವಾಯಿತು. ಮೂರು ತಾಲ್ಲೂಕುಗಳ ಬಂದ್ ಕರೆಗೆ ಕಾರಣವಾಯಿತು.

ಅಂದು ಬಂದ್ ನಡೆದ ದಿನ ಮೂರು ತಾಲ್ಲೂಕು ಕೇಂದ್ರಗಳಲ್ಲಿ ಎಂದೂ ಕಾಣದ ರೈತರ ಪ್ರವಾಹಗಳು. ತಾಲ್ಲೂಕು ಕಛೇರಿಯ ಮುಂದೆ ಬೆಳಗಿನಿಂದಲೇ ಕೈಕೈಹಿಡಿದು ನಿಂತು ಕಛೇರಿಯ ಯಾರನ್ನೂ ಒಳಗೆ ಬಿಡದ ರೈತರು ಅದರಲ್ಲಿ ನರಗುಂದದ ತಹಶೀಲ್ದಾರ ಪೋಲೀಸರ ಬೆಂಬಲ ಪಡೆದು ರೈತರನ್ನು ಧಿಕ್ಕರಿಸಿ ಅವರನ್ನು ಬೂಟು ಕಾಲಿನಲ್ಲೇ ತುಳಿದು ಕೊಂಡೇ ಕಛೇರಿಯೊಳಗೆ ಪ್ರವೇಶ ಮಾಡಿದ. ಕಛೇರಿಯೊಳಕ್ಕೆ ನುಗ್ಗಿದ ರೈತರು ತಾಲ್ಲೂಕು ಕಛೇರಿಯನ್ನೇ ಭಸ್ಮ ಮಾಡಿದರು. ತಹಶೀಲ್ದಾರ್, ಡಿವೈಎಸ್‌ಪಿ, ಸರ್ಕಲ್ ಇನ್ಸಪೆಕ್ಟರ್, ಇವರುಗಳಿಗೆ ತೀವ್ರ ಪೆಟ್ಟಾಯಿತು. ಆ ಸಮಯದಲ್ಲಿ ಸಬ್ ಇನ್ಸ್‌ಪೆಕ್ಟರ್‌ನೊಬ್ಬನ ಗುಂಡಿಗೆ ಚಿಕ್ಕನರಗುಂದದ ರೈತ ಈರಪ್ಪ ಕಡ್ಲಿಕೊಪ್ಪ ಬಲಿಯಾದ. ರೈತರ ಆಕ್ರೋಶಕ್ಕೆ ಎಲ್ಲೆಯೇ ಇಲ್ಲವಾಯಿತು. ಆ ಸಬ್‌ಇನ್ಸ್‌ಪೆಕ್ಟರ್ ಹಾಗೂ ಮತ್ತೊಬ್ಬ ಪೋಲೀಸ್, ಪೋಲೀಸ್ ವ್ಯಾನು, ಜೀವುಗಳು ರೈತರ ಕೋಪಕ್ಕೆ ಬಲಿಯಾದವು. ನವಲಗುಂದದಲ್ಲಿಯೂ ಕಾಂಗ್ರೆ ನಾಯಕರ ಕುತಂತ್ರದಿಂದ ರೈತರು ರೊಚ್ಚಿಗೆದ್ದಾಗ ಶಿವಪ್ಪಲಕ್ಕುಂಡಿ ಗುಂಡೇಟಿಗೆ ಆಹುತಿಯಾದ.



ನರಗುಂದದಲ್ಲಿ ಜಾಥಾ ಪ್ರಾರಂಭದ ದೃಶ್ಯ.

ಅಂದಿನಿಂದ ಈ ಪ್ರದೇಶದಲ್ಲಿ ಪೋಲೀಸರ ಅಟ್ಟಹಾಸ, ಕರ್ಫ್ಯೂ ಆಡಳಿತ ನಡೆಯಿತು. ಆದರೆ ಇಡೀ ರಾಜ್ಯದಲ್ಲಿ ಹೋರಾಟ ಕಾಡುಕಿಚ್ಚಾಗಿ ಹರಡಿತು. ಮರುದಿನಗಳ ಪತ್ರಿಕೆಗಳಲ್ಲಿ ಎಲ್ಲಿ ನೋಡಿದರೂ ಅದೇ ಸುದ್ದಿ. ಗಜೇಂದ್ರಗಡದಲ್ಲಿ ಬ್ಯಾಂಕ್ ಮುಂದೆ ರೈತರ ಪ್ರತಿಭಟನೆ, ಗದಗ್ ನಲ್ಲಿ ಬೆಲೆ ಏರಿಕೆ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ, ಬಾಗೇಪಲ್ಲಿಯಲ್ಲಿ ರೈತರಿಗೆ ಗುಂಡು, ಇತ್ಯಾದಿ ಇತ್ಯಾದಿ. ಎತ್ತಣ ನರಗುಂದ! ಎತ್ತಣ ಬಾಗೇಪಲ್ಲಿ!! ರೈತರ ಅಸಮಾಧಾನದ ಸಂಬಂಧ ಎಲ್ಲರನ್ನೂ ಬೆಸೆದಿತ್ತು. ರೈತರು ಹೋರಾಟದ ದಾರಿ ಹಿಡಿದಿದ್ದರು.

ಇಡೀ ದೇಶದಲ್ಲಿ ರೈತ ಹೋರಾಟದ ಕಿಚ್ಚಿಗೆ ನಾಂದಿಯಾಯಿತು.

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 7 ಫೆಬ್ರವರಿ 15. 1981 ಬೆಲೆ : 50 ಪೈಸೆ

"ಎಲ್ಲಿಂದ ಬಂದಿರೆಂದು ಕೇಳಬಹುದು ನೀವು ಜನರ ನಡುವಿನಿಂದ ಎಂದು ಹೇಳತೇವಿ ನಾವು"

(ಆಳುವವರ ತುಳಿತಕ್ಕೆ ಸಿಕ್ಕಿ ನುಜ್ಜುಗುಜ್ಜಾಗಿದ್ದ ರೈತ ಸಿಡಿದೆದ್ದು ವ್ಯಾಪಕ ಸಂಘಟನೆಗೆ ಮನಕೊಟ್ಟು ಹೋರಾಟದಕಣದಲ್ಲಿ ಧುಮುಕಿದ್ದಾನೆ. ೧೯೮೦ರ ಜುಲೈ ೨೧ರಂದು ನರಗುಂದ-ನವಲಗುಂದದಲ್ಲಿ ನಡೆದ ಗೋಲಿಬಾರ್‌ನಲ್ಲಿ ಹುತಾತ್ಮರಾದ ಬಾಂಧವರ ಸ್ಮರಣೆಗಾಗಿ "ಹುತಾತ್ಮ ಜ್ಯೋತಿಯನ್ನು" ಹಿಡಿದು, ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸುತ್ತ ಜನವರಿ ೧೭ ರಿಂದ ಕಾಲ್ನಡಿಗೆಯಿಂದ ಆರಂಭವಾದ "ಮಹಾಯಾತ್ರೆ" ಫೆಬ್ರವರಿ ೫ ರಂದು ರಾಜಧಾನಿಗೆ ತಲುಪಿತು. ಅವಿರ್ಭವಿಸಿದ ನೂತನ ಶಕ್ತಿಯ ಪ್ರತೀಕವಾಗಿ ರಾಜಧಾನಿಯ ಬೀದಿಗಳಲ್ಲಿ ಉಕ್ಕಿಹರಿದ ಜನ ಸಾಗರಕ್ಕೆ ಬೆಂಗಳೂರಿನ ಜನತೆ ತುಂಬುಹೃದಯದ ಸ್ವಾಗತ ನೀಡಿತು. ನೂರಾರು ಮೈಲು ದೂರದಿಂದ ಕಾಲ್ನಡಿಗೆಯಿಂದ ಆಗಮಿಸಿದ ರೈತ ಬಾಂಧವರು ತನ್ನ ಸೋದರ ವರ್ಗವಾದ ಕಾರ್ಮಿಕರೊಂದಿಗೆ ಸಂಗಮವಾಗಿ ಮುನ್ನಡೆದ ದೃಶ್ಯ ಕರ್ನಾಟಕದ ಇತಿಹಾಸದಲ್ಲೇ ಅಪೂರ್ವವಾದುದು)


'ಐಕ್ಯರಂಗ'ದಲ್ಲಿ ಫೆಬ್ರವರಿ 15, 1981 ರಲ್ಲಿ ನರಗುಂದ, ನವಲಗುಂದ ಹುತಾತ್ಮರ ಸ್ಮರಣೆಗಾಗಿ ನಡೆದ 'ಹುತಾತ್ಮ ಜ್ಯೋತಿ'ಯ ಮೆರವಣಿಗೆಯ ವರದಿ.

...ಲ್ಲಿ ರೈತ ಹುತಾತ್ಮರ ದಿನ

ಪೋಲೀಸರ
ಕೊಪ್ಪ ಮತ್ತು
ಲೈ 21 ರಂದು
ಪ್ರಾಂತ ರೈತ
ಡಿಸಲಾಗಿದ್ದ
ಕೂಲಿಕಾರರು
ದ್ದ ಸಿದ್ದಾನಂದ
ವಾಗತಿಸಿದರು.
ಗಿ, ಜಿತೇಂದ್ರ

ಗೌಡ ಪಾಟೀಲ್, ರುದ್ರಪ್ಪ ಜಾಬಿನ್, ಹಕ್ಕಲಗೌಡ ಪಾಟೀಲ್, ಚಂದ್ರಶೇಖರ ಚೌಟಿ ಮತ್ತು ವಿಶ್ವನಾಥ ತುಪ್ಪದ್ ಮಾತನಾಡಿ ರೈತರ ಹಾಗೂ ಕೂಲಿಕಾರರ ಇರಿನ ಸ್ಥಿತಿಗತಿಗಳನ್ನು ವಿವರಿಸಿದರು. ಅನಂತರ ತಾಲೂಕಿನ ರೈತರ ಹಾಗೂ ಕೂಲಿಕಾರರ ಕೆಲವು ತುರ್ತು ಸಮಸ್ಯೆಗಳನ್ನು ಚರ್ಚಿಸಿ ಪಟ್ಟಿ ಮಾಡಲಾಯಿತು. ಕೊನೆಯಲ್ಲಿ ಬಾಲಂಬೀಡ್ ಗ್ರಾಮದ ತಿರಕಪ್ಪ ಬಾರ್ಕಿ ವಂದಿಸಿದರು. ಸಭೆಯಲ್ಲಿ ಸಿದ್ದಪಡಿಸಿದ ಮನವಿಯನ್ನು ಅನಂತರ ತಾಲೂಕು ತಹಶೀಲ್ದಾರರಿಗೆ ಸಲ್ಲಿಸಲಾಯಿತು.

ಒಂದು ತಿಂಗಳ ಒಳಗಾಗಿ ಆ ಬೇಡಿಕೆಗಳನ್ನು ಈಡೇರಿಸಬೇಕೆಂದು ತಹಶೀಲ್ದಾರರಿಗೆ ಒತ್ತಾಯಿಸಲಾಯಿತಲ್ಲದೆ ರೈತರ ಬೇಡಿಕೆಗಳನ್ನು ಇತ್ಯರ್ಥಗೊಳಿಸುವಲ್ಲಿ ಅಂದು ಅಧಿಕಾರಿಗಳು ಅಸಡ್ಡೆ ತೋರಿದ್ದರಿಂದಾಗಿಯೇ ನರಗುಂದ ನವಲಗುಂದದಲ್ಲಿ ರೈತರ ಆಕ್ರೋಶ ಸ್ಫೋಟಗೊಂಡಿತ್ತು ಎಂದು ಎಚ್ಚರಿಸಲಾಯಿತು.



13ನೇ ಲೋಕಸಭೆಗೆ ಚುನಾವಣೆಯ ಪ್ರಕ್ರಿಯೆ ಆರಂಭವಾಗಿದೆ. ಸರಕಾರದ, ಸಂಸದರ ಕಾರ್ಯಚಟುವಟಿಕೆಗಳ ವಿಮರ್ಶೆ ನಡೆಯಬೇಕಾದ ಸಮಯವಿದು. ಕರ್ನಾಟಕದ ಸಂಸತ್ ಸದಸ್ಯರ ಚಟುವಟಿಕೆಗಳ ವಿಮರ್ಶೆಯನ್ನು ಈ ವಾರದಿಂದ ಈ ಅಂಕಣದಲ್ಲಿ ಆರಂಭಿಸುತ್ತಿದ್ದೇವೆ. ಮೊದಲಿಗೆ ಹುಬ್ಬಳ್ಳಿ-ಧಾರವಾಡವನ್ನು ಎರಡನೇ 'ಅಯೋಧ್ಯೆ'ಯಾಗಿ ಪರಿವರ್ತಿಸಿ, ಮತರಾಜಕೀಯದಿಂದ ತನ್ನ 'ಭದ್ರಕೋಟೆ'ಯಾಗಿಸಿದ ಬಿಜೆಪಿಯ ಕೋಟ್ಯಾಧೀಶ ಎಂ.ಪಿ.ಯ 'ಸಾಧನೆ'ಗಳನ್ನು ಇಲ್ಲಿ ನೋಡಿ.

ಧಾರವಾಡ ಉತ್ತರ ಕ್ಷೇತ್ರ

'ಭದ್ರಕೋಟೆ'ಯಲ್ಲಿ ಕೋಟ್ಯಾಧೀಶ ಅಭ್ಯರ್ಥಿ

ಸಿ.ಆರ್.ಭಟ್

ಧಾರವಾಡ ಉತ್ತರ ಲೋಕಸಭಾ ಕ್ಷೇತ್ರದಿಂದ 1996 ಮತ್ತು 1998 ರಲ್ಲಿ ನಡೆದ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿ ವಿಜಯಸಂಕೇಶ್ವರ ಆಯ್ಕೆ ಆಗಿದ್ದರು. ಇವರ ಮತ ಗಳಿಕೆ 1996 ರಿಂದ 1998 ರಲ್ಲಿ ಶೇ 11.11 ರಷ್ಟು ಹೆಚ್ಚಾಗಿತ್ತು. 1994 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೊದಲ ಬಾರಿಗೆ ಈ ಪ್ರದೇಶದಲ್ಲಿ ಧಾರವಾಡ ನಗರ-ಚಂದ್ರಕಾಂತ ಬೆಲ್ಲದ, ಹುಬ್ಬಳ್ಳಿ ನಗರ-ಅಶೋಕ ಕಾಟವೆ, ಹುಬ್ಬಳ್ಳಿ ಗ್ರಾಮೀಣ-ಜಗದೀಶ ಶೆಟ್ಟರ್ ಹೀಗೆ ಮೂರು ಶಾಸಕರನ್ನು (ಒಟ್ಟು ಎಂಟರಲ್ಲಿ) ತನ್ನ ಮತರಾಜಕೀಯದಿಂದ ಗೆದ್ದುಕೊಂಡಿತ್ತು. ಆದರೆ, 1995 ರಲ್ಲಿ ನಡೆದ ಜಿಲ್ಲಾ ಪಂಚಾಯತ್ ಹಾಗೂ ಹುಬ್ಬಳ್ಳಿ-ಧಾರವಾಡ ಮಹಾನಗರ ಪುರಸಭಾ ಚುನಾವಣೆಗಳಲ್ಲಿ ಬಿಜೆಪಿ ಬಹುಮತಗಳಿಸಲು ವಿಫಲವಾಗಿರುವುದನ್ನು ಗಮನಿಸಬಹುದು. 1998 ರಲ್ಲಿ ಮಹಾನಗರ ಸಭೆಯ ಮಹಾಪೌರರನ್ನು ಆಯ್ಕೆ ಮಾಡುವಾಗ ಬಿಜೆಪಿ, ಜನತಾದಳದ ಕೆಲವು ಪುರಸಭಾ ಸದಸ್ಯರನ್ನು ಅಪಹರಿಸಿ ತಮ್ಮ ಪಕ್ಷದಲ್ಲಿ ಅವರನ್ನು ಶಾಮೀಲು ಮಾಡಿಸಿ ಕುದುರೆ ವ್ಯಾಪಾರದಿಂದ ಹಿತ್ತಲ ಬಾಗಿಲಿನಿಂದ ಬಂದು ಪುರಸಭೆಯಲ್ಲಿ ಅಧಿಕಾರ ಗಿಟ್ಟಿಸುವ ಪ್ರಯತ್ನವೂ ವಿಫಲವಾಗಿ ಮುಖಭಂಗ ಅನುಭವಿಸಿದ ನೆನಪು ನಾಗರೀಕರಲ್ಲಿ ಇನ್ನೂ ಹಸಿರಾಗಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಬಹುಕಾಲದಿಂದ ಕಳ್ಳಬಟ್ಟಿ ಸಾರಾಯಿ, ಬಾರ್, ವೈನ್ ಶಾಪ್ ಹಾಗೂ ಮತ್ತಿತರ ಭೂಗತ ಅವ್ಯವಹಾರಗಳಲ್ಲಿ ತೊಡಗಿರುವ ಒಂದು ಸಮುದಾಯದ ಕೆಲವರ ಮತ್ತು ಆಟೋರಿಕ್ಷಾ ಹಾಗೂ ಇತರ ಸಣ್ಣಪುಟ್ಟ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿರುವ ಹೆಚ್ಚಾಗಿ ಮುಲ್ಲಾಗಳ ವರ್ಚಸ್ಸಿನಲ್ಲಿರುವ ಬಡ ಮುಸಲ್ಮಾನ ಸಮುದಾಯದ ಕೆಲವರ ನಡುವೆ ಆಗಾಗ ಘರ್ಷಣೆಗಳು ನಡೆಯುತ್ತಿರುತ್ತವೆ. ಹೋಳಿ ಹಬ್ಬ, ರಂಜಾನ್ ಹಬ್ಬಗಳ ಸಂದರ್ಭಗಳಲ್ಲಿ ಇಂತಹ ಘರ್ಷಣೆಗಳು ದಿಢೀರನೆ ಕೋಮುಗಲಭೆಗಳ ರೂಪು ತಾಳುತ್ತವೆ. ದೇಶದಲ್ಲಿ ಮತ್ತು ಕರ್ನಾಟಕದಲ್ಲಿ ಈ ಕಾರಣಕ್ಕಾಗಿ ಅವಳಿ ನಗರವನ್ನು ಅತಿಸೂಕ್ಷ್ಮ ಪ್ರದೇಶ ಎಂದು ಕಾನೂನು ಶಿಸ್ತು ಪಾಲನೆಯ ವಿಷಯದಲ್ಲಿ ಗುರುತಿಸಲಾಗಿದೆ. 1980 ರ ದಶಕದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರದವರು ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಇರುವ ಸ್ಥಳದಲ್ಲಿಯೇ ರಾಮಮಂದಿರ ಕಟ್ಟುವ ನೆಪದಿಂದ ರಥಯಾತ್ರೆ, ಇಟ್ಟಿಗೆ ಮೆರವಣಿಗೆ, ಶಿಲಾನ್ಯಾಸ, ಕರಸೇವೆ, ಧರ್ಮಸಂಸತ್ ಮುಂತಾದ ವಿವಿಧ ಕಾರ್ಯಕ್ರಮಗಳ ಮೂಲಕ ಕೋಮು ರಾಜಕಾರಣ ಪ್ರಾರಂಭಿಸಿದರು. ಮೊದಲೇ ಕೋಮುಗಲಭೆಗಳ ವಿಷಯದಲ್ಲಿ ಅತಿಸೂಕ್ಷ್ಮವಾದ ಹುಬ್ಬಳ್ಳಿ-ಧಾರವಾಡ ಮಹಾನಗಳಲ್ಲಿ ಬಿಜೆಪಿ ಸಂಘ ಪರಿವಾರದವರು ಸ್ಥಳೀಯ ಎಟೆಗಾರ ಸಮುದಾಯದವರು ಸೇರಿದಂತೆ ವ್ಯಾಪಾರೋದ್ಯಮಿಗಳ ಭಾರೀ ನೆರವಿನಿಂದ ತಮ್ಮ ಬೇರುಗಳ ಜಾಲ ಹಬ್ಬಿದರು. ವೇದ, ಮನುಸ್ಮೃತಿ, ಜಾತಿಪದ್ಧತಿ ಎಲ್ಲಾ ಮುಖ್ಯವಾಗಿ ದೇವಾಲಯಗಳ ವಿರುದ್ಧ ಬಂಡೆದ್ದ ವೀರಶೈವ ಚಳುವಳಿಯ ಅನುಯಾಯಿಗಳಾದ ಕೆಲವು ಮಠಾಧಿಪತಿಗಳೂ ಇವರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ್ದು ಅವರ ಧರ್ಮಕ್ಕೆ ಮಾಡಿದ ದ್ರೋಹ.

ಎರಡನೇ ಅಯೋಧ್ಯಾಕಾಂಡ

1992 ಡಿಸೆಂಬರ್ 6 ರಂದು ಅಯೋಧ್ಯೆಯ ಐತಿಹಾಸಿಕ ಪ್ರಸಿದ್ಧಿ ಪಡೆದ ಬಾಬ್ರಿ ಮಸೀದಿಯನ್ನು ಹಾಡುಹಗಲಲ್ಲಿಯೇ ಬಿಜೆಪಿ ಮತ್ತು ಸಂಘ ಪರಿವಾರದವರು ಹಾಳುಗೆಡವಿ ದೇಶಾದ್ಯಂತ ಭುಗಿಲೆಬ್ಬಿಸಿದ ಕೋಮು ಜ್ವಾಲೆಯ ಬಿಸಿ ಹುಬ್ಬಳ್ಳಿ-ಧಾರವಾಡಕ್ಕೂ ತಟ್ಟಿತು. ಈ ಮಹಾನಗರವನ್ನು ಬಿಜೆಪಿ -ಸಂಘ ಪರಿವಾರದವರು ದಕ್ಷಿಣ ಭಾರತದಲ್ಲಿ ಎರಡನೇ ಅಯೋಧ್ಯಾ ಕಾಂಡವನ್ನಾಗಿ ಪರಿವರ್ತಿಸಲು ಪಣತೊಟ್ಟರು. ಪರಿಣಾಮವಾಗಿ ಹುಬ್ಬಳ್ಳಿಯ ವಿವಾದಗ್ರಸ್ಥ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಏರಿಸಬೇಕೆಂಬ ಹಿಂಸಾತ್ಮಕವಾದ ಚಳುವಳಿ ಪ್ರಾರಂಭಿಸಿದರು. ಅಟಲ ಬಿಹಾರಿ ವಾಜಪೇಯಿ, ಎಲ್.ಕೆ.ಅಡ್ವಾಣಿ, ಯಡಿಯೂರಪ್ಪ ಮುಂತಾದವರು ದಂಡುದಂಡಾಗಿ ಈ ನಗರಕ್ಕೆ ಬಂದು ಉದ್ರೇಕಕಾರಿ ಭಾಷಣಗಳನ್ನು ಬಿಗಿದು ಜನರ ಐಕ್ಯತೆಯನ್ನು ಭಗ್ನಗೊಳಿಸಲು ಪ್ರಚೋದಿಸಿದರು. ಬಾಬ್ರಿ ಮಸೀದಿ ಧ್ವಂಸಗೊಳಿಸಿದಾಗ ಪ್ರಧಾನಿ ಮೌನಿಬಾಬ ಪಿ.ವಿ.ನರಸಿಂಹರಾವ್ ಸರಕಾರ ಮೂಕಪ್ರೇಕ್ಷಕವಾಗಿದ್ದಂತೆ, ಹುಬ್ಬಳ್ಳಿಯ ಈದ್ಗಾ ಮೈದಾನದ ವಿವಾದದಿಂದ ಕೋಮುಜ್ವಾಲೆ ಭುಗಿಲೇಳುತ್ತಿರುವಾಗ ರಾಜ್ಯದಲ್ಲಿ ಅಧಿಕಾರ ರೂಢವಾದ ವೀರಪ್ಪಮೊಯಿಲಿ ಸರಕಾರ ನಿಷ್ಕ್ರಿಯವಾಗಿತ್ತು. 1994 ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಈ ಪ್ರದೇಶದಲ್ಲಿ ಭಾರಿ ಸೋಲು ಅನುಭವಿಸಿತು. ಜನತಾದಳ ಆಗ ಇನ್ನೂ ಸಾಕಷ್ಟು ಸಂಘಟಿತಗೊಂಡಿರಲಿಲ್ಲ. ಕಾರಣ, ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ತನ್ನ ಕೋಮು ರಾಜಕಾರಣದಿಂದ ಕೊನೆಗೂ ನಾಲ್ಕು ಸ್ಥಾನಗಳಲ್ಲಿ ಮೂರು ಸ್ಥಾನಗಳನ್ನು ಗಿಟ್ಟಿಸಿಕೊಂಡಿತು. ಅಂದಿನಿಂದ ಹುಬ್ಬಳ್ಳಿ-ಧಾರವಾಡ ಮತ್ತು ಸುತ್ತಮುತ್ತಲಿನ ಪ್ರದೇಶ ಬಿಜೆಪಿಯ ಭದ್ರಕೋಟೆ ಆಯಿತು.

ಜನತಾದಳದ ದೌರ್ಬಲ್ಯ

1994 ರ ಚುನಾವಣೆಯಲ್ಲಿ ಜನತಾದಳವು ಕಾಂಗ್ರೆಸ್‌ನ್ನು ದಯನೀಯವಾಗಿ ಸೋಲಿಸಿ ರಾಜ್ಯದಲ್ಲಿ ಎಚ್.ಡಿ.ದೇವೇಗೌಡರ ಮುಖ್ಯಮಂತ್ರಿತ್ವದಲ್ಲಿ ಅಧಿಕಾರಕ್ಕೆ ಬಂದಿತು. ಮುಂದೆ ಕೆಲವೇ ವಾರಗಳಲ್ಲಿ ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಅಂಜುಮಾನ್ ಸಂಸ್ಥೆಯವರು 1995 ರ ಜನವರಿ 26 ರಂದು ಗಣರಾಜ್ಯ ದಿನದಂದು ರಾಷ್ಟ್ರಧ್ವಜ ಹಾರಿಸಲು ಅವಕಾಶ ಮಾಡಿಕೊಡುವ ಮೂಲಕ ಈ ವಿವಾದವನ್ನು ಶಾಂತ ರೀತಿಯಲ್ಲಿ ಜನತಾದಳ ಸರಕಾರ ಪರಿಹರಿಸಿತು. ಗಣರಾಜ್ಯ ದಿನಕ್ಕಿಂತ ಒಂದು ವಾರದ ಮೊದಲು ಬಿಜೆಪಿ-ಸಂಘ ಪರಿವಾರದ ಕೋಮು ರಾಜಕಾರಣವನ್ನು ಪ್ರತಿಭಟಿಸಿ ಧಾರವಾಡ ಜಿಲ್ಲೆಯ ರೈತ-ಕಾರ್ಮಿಕರು ಸಿಪಿಐ(ಎಂ) ನೇತೃತ್ವದಲ್ಲಿ ಹುಬ್ಬಳ್ಳಿನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿರುವುದನ್ನು ಗಾಜಿನ ಮನೆಯಲ್ಲಿ ರ್‍ಯಾಲಿಯನ್ನು ಉದ್ದೇಶಿಸಿ ಸಿಪಿಐ(ಎಂ) ಧುರೀಣೆ ಸುಭಾಷಿಣಿ ಅಲಿ ಭಾಷಣ ಮಾಡಿರುವುದನ್ನು ಮತ್ತು ಅವರು ನಗರದ ಮೂರು ಸಾವಿರ ಮಠದ ಸ್ವಾಮಿಗಳ ಹಾಗೂ ಅಂಜುಮಾನ್ ಸಂಸ್ಥೆಯ ಅಧ್ಯಕ್ಷ ಜೊತೆ ಶಾಂತಿ ಸೌಹಾರ್ದತೆ ಕಾಪಾಡಲು ನಡೆಸಿದ ಮಾತುಕತೆಯನ್ನು ಈ ಸಂದರ್ಭ ನೆನಪಿಸಿಕೊಳ್ಳಬಹುದು. ಈ ಹಿನ್ನೆಯಿಂದಲೇ 1995 ರಲ್ಲಿ ನಡೆದ ಜಿಲ್ಲಾ ಪಂಚಾಯತ್ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರದ ಪುರಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಹಿಮ್ಮೆಟ್ಟಿಸಲು ಸಾಧ್ಯವಾಯಿತು.

ಆದರೆ ಸ್ಥಳೀಯ ಹಾಗೂ ರಾಜ್ಯ ಮಟ್ಟಗಳಲ್ಲಿ ಮೇಲಿಂದ ಮೇಲೆ ಬಹಿರಂಗವಾಗಿ ಜನತಾದಳದೊಳಗೆ ನಡೆಯುತ್ತಿರುವ ಜಗಳಗಳಿಂದಾಗಿ ಮತ್ತು ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವದ ತೀವ್ರ ಅಭಾವದಿಂದಾಗಿ 1996 ಮತ್ತು 1998 ರ ಲೋಕಸಭೆ ಚುನಾವಣೆಗಳಲ್ಲಿ ಜನತಾದಳ ಬಿಜೆಪಿಯನ್ನು ಹಿಮ್ಮೆಟ್ಟಿಸಲು ವಿಫಲಗೊಂಡಿತು. ಈ ಪ್ರದೇಶದಲ್ಲಿ ಕಾಂಗ್ರೆಸ್ ತನ್ನ ನೆಲೆ ಕಳೆದುಕೊಳ್ಳುತ್ತಿರುವುದರ ಪ್ರಯೋಜನ ಜನತಾದಳ ಪಡೆಯಲಾರದಂತಾಯಿತು. ಈ ದುಃಸ್ಥಿತಿ ಇಂದಿಗೂ ಮುಂದುವರಿದಿದೆ.

ಬಿಜೆಪಿಯ ಸಾಧನೆಗಳೇನು?

ಈ ಮಧ್ಯೆ ಬಿಜೆಪಿಯ ಸಂಸತ್ ಸದಸ್ಯರಾದ ವಿಜಯ ಸಂಕೇಶ್ವರರ ಸಾಧನೆಗಳೇನು? ಅವರ ಹಿನ್ನೆಲೆ, ಮುನ್ನಲೆಗಳೇನು? ವಿಜಯಸಂಕೇಶ್ವರ ಇವರು ಗದಗಿನವರು. ಇವರ ಮನೆತನದ ಉದ್ದಿಮೆ ಪ್ರಿಂಟಿಂಗ್ ಪ್ರೆಸ್. 1980 ರ ದಶಕದಲ್ಲಿ ಇವರು 'ವಿಜಯಾನಂದ ರೋಡ್ ಲೈನ್ಸ್ ಲಿಮಿಟೆಡ್ - ವಿ.ಆರ್.ಎಲ್' ಎಂಬ ಸಂಸ್ಥೆ ಸ್ಥಾಪಿಸಿ ಸಾರಿಗೆ ಉದ್ದಿಮೆಗ ಕೈ ಹಾಕಿದರು. ಅಲ್ಲಿಂದ ಇವರು ಲಕ್ಷಾಧೀಶರಾಗಿ, ಮುಂದೆ ಅನತಿ ಕಾಲದಲ್ಲಿಯೇ ಕೋಟ್ಯಾಧೀಶರಾದರು. ಎಂದರೆ ಒಂದು ಕಡೆ ಸಾಮಗ್ರಿಗಳನ್ನು ಸಾಗಾಣಿಕೆಗಾಗಿ ನೀಡಿದ ಉದ್ಯಮಿ, ವ್ಯಾಪಾರಸ್ಥರಿಂದ ಹಾಗೂ ಮತ್ತೊಂದು ಕಡೆ ಕಾರ್ಮಿಕರಿಂದ ಎಷ್ಟು ಸುಲಿದಿರಬಹುದು ಎಂಬುದನ್ನು ಊಹಿಸಬಹುದು. ಕರ್ನಾಟಕವೂ ಸೇರಿದಂತೆ ಭಾರತದ ಎಲ್ಲಾ ರಾಜ್ಯಗಳ ಮುಖ್ಯ ಕೇಂದ್ರಗಳಲ್ಲಿ ಇವರ ಸಾರಿಗೆ ಸಂಸ್ಥೆಯ ಶಾಖೆಗಳ ಹಾಗೂ ಏಜೆಂಟರ ವಿಶಾಲ ಜಾಲವಿದೆ. ಹುಬ್ಬಳ್ಳಿಯ ಕೇಶವಾಪುರದಲ್ಲಿ ಇವರ ಸಂಸ್ಥೆಯ ಕೇಂದ್ರ ಕಾರ್ಯಾಲಯವಿದೆ. ಅದರಲ್ಲಿ ಅಂದಾಜು 200 ಜನ ನೌಕರರು ಸೇವೆ ಸಲ್ಲಿಸುತ್ತಿದ್ದಾರೆ. ಇವರು ತಮ್ಮ ನೌಕರರ ಕುರಿತು ಬಹಳ ಕಾಳಜಿವಹಿಸುತ್ತಿದ್ದಾರಂತೆ. ಕೆಲಸದ ವೇಳೆಯಲ್ಲಿ ಅವರಿಗೆ ಕೆಲಸದ ಸ್ಥಳದಲ್ಲಿಯೇ ಚಹಾ ಒದಗಿಸುತ್ತಿದ್ದಾರಂತೆ. ಚಾರ್ಲಿಚಾಪ್ಲಿನ್ ಅವರ 'ಮಾಡ್ರನ್ ಟೈಮ್ಸ್' ಸಿನಿಮಾದಲ್ಲಿ ದಯಾಳು ಕೈಗಾರಿಕಾ ಮಾಲೀಕರು ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ಊಟದ ವಿರಾಮ ಕೊಡದೆ, ಅವರ ಕೆಲಸದ ಸ್ಥಳದಲ್ಲಿಯೇ ಅವರ ಬಾಯಿಗೇ ನೇರವಾಗಿ ಆಹಾರ ಬೀಳುವಂತೆ ಅತ್ಯಾಧುನಿಕ ಯಂತ್ರಗಳನ್ನು ಅಳವಡಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 1996 ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಕೋಟ್ಯಾಧೀಶ ವಿಜಯ ಸಂಕೇಶ್ವರ ಸರಿಯಾದ ಅಭ್ಯರ್ಥಿ ಸಿಕ್ಕಿದರು.

ವಿಜಯ ಸಂಕೇಶ್ವರ ಇವರಿಗೆ ರಾಜಕೀಯದಲ್ಲಿ ಆ... ಇರಲಿಲ್ಲ ಎನ್ನುತ್ತಾರೆ ಜನರು. ಇವರು ನೂರಕ್ಕೆ ನೂ... ಉದ್ಯಮಿ. ತನ್ನ ಉದ್ಯಮದ ಸಾಮ್ರಾಜ್ಯ ವಿಸ್ತರಿಸುವುದು... ಲಾಭ-ಅತಿಲಾಭಗಳಿಸುವುದು, ಇಷ್ಟೇ ಅವರ ಜೀವನ... ಗುರಿಯಾಗಿತ್ತು. ಆದರೆ, ರಾಜಕೀಯದಲ್ಲಿ ಸೇರಿಕೊಂಡು ಚುನಾವಣೆಗಾಗಿ ಸ್ವಲ್ಪ ಬಂಡವಾಳ ಹೂಡಿದರೆ ತನ್ನ ಸಾರಿ... ಉದ್ಯಮ ಸಾಮ್ರಾಜ್ಯವನ್ನು ಇನ್ನಷ್ಟು ಬೆಳೆಸಬಹುದು ಎಂ... ದೂರಾಲೋಚನೆ ಇವರಿಗೆ ಇತ್ತು ಎನ್ನುವುದರ... ಸಂಶಯವಿಲ್ಲ. 1996 ರಿಂದ ಇಂದಿನವರೆಗೆ ಇವರ ಸಾರಿ... ಉದ್ಯಮ ಸಾಮ್ರಾಜ್ಯ ಬೃಹತ್ ಪ್ರಮಾಣದಲ್ಲಿ ಬೆಳೆದಿ... ರಾಜ್ಯದ ಹಾಗೂ ನೆರೆಹೊರೆ ರಾಜ್ಯಗಳ ಪ್ರಮು... ನಗರಗಳಿಗೆ ಇವರ ಸಂಸ್ಥೆಯ ಕೊರಿಯ... ಸರ್ವಿಸ್(ಖಾಸಗಿ ಶೀಘ್ರ ರವಾನೆಯ ಅಂಚೆ ಸೇವೆ) ಮ... ಪ್ರಯಾಣಿಕರನ್ನು ಸಾಗಿಸುವ ದುಬಾರಿ ದರಗಳ ಲಕ್ಷು... ಬಸ್‌ಗಳ ಜಾಲ ಬೃಹದಾಕಾರವಾಗಿ ಕಳೆದ ಕೆಲ... ವರ್ಷಗಳಲ್ಲಿ ಹರಡಿದೆ. 1996 ಮತ್ತು 1998 ಲೋಕಸಭಾ ಚುನಾವಣೆಗಳಲ್ಲಿ ಅವರ ಪ್ರತಿಸ್ಪರ್ಧಿಯಾ... ಜನತಾದಳದ ಶಂಕರಣ್ಣ ಮುನವಳ್ಳಿ ತನ್ನ ಸಂಬಂಧಿಯ... ಆದುದರಿಂದ ತನ್ನ ಜಾತಿಯವರ ಓಟುಗಳನ್ನು ಒಡೆ... ಇವರೇ ಹೆಚಾಗಿ ಗಿಟ್ಟಿಸಿಕೊಂಡು ಗೆದ್ದರು.

ಧಾರವಾಡ ಉತ್ತರ ಕ್ಷೇತ್ರವನ್ನು ಬಿಜೆಪಿ ತನ್ನ ಭದ್ರಕೋಟೆಯನ್ನಾಗಿಸಿದೆ.ಆದಕ್ಕಾಗಿಯೇ ಆದರ ಮೊದಲ ಸುತ್ತಿನ ಚುನಾವಣಾ ಪ್ರಚಾರ-ಸಂಕಲ್ಪಯಾತ್ರೆಯ ಮುಕ್ತಾಯ ಸಮಾರಂಭವನ್ನು ಕೋಟಿಗಟ್ಟಲೆ ರೂ. ವೆಚ್ಚದಲ್ಲಿ ಹುಬ್ಬಳ್ಳಿಯಲ್ಲಿಯೇ ಏರ್ಪಡಿಸಲಾಯಿತು. ನಾಲ್ಕು ಲಕ್ಷ ಜನರಿಗೆ ನಗರಕ್ಕೆ ಪ್ರವೇಶಿಸುವ ಎಲ್ಲಾ ಕಡೆಗಳಲ್ಲಿ ಭರ್ಜರಿ ಊಟ, ಕೈತುಂಬಾ ಕಾಸು ಕೊಟ್ಟು ಖುಷಿ ಪಡಿಸಲಾಯಿತು.

ಕಾಂಗ್ರೆಸ್ ಮೇಲಿನ ಅತೃಪ್ತಿ

ವಿಜಯ ಸಂಕೇಶ್ವರರ ಹಿಂದಿನ ಲೋಕಸ... ಸದಸ್ಯರಾದ ಕಾಂಗ್ರೆಸ್‌ನ ವಯೋವೃದ್ಧ ಹಾಗೂ ಹಿಂದು... ಜಾತಿಗೆ ಸೇರಿದ ಡಿ.ಕೆ.ನಾಯ್ಕರ್ ಕಳೆದ ನಾಲ್ಕು ಬಾ... ಚುನಾವಣೆಗಳಲ್ಲಿ ಇಂದಿರಾಗಾಂಧಿ-ರಾಜೀವ್ ಗಾಂ... ಗಾಳಿಯಿಂದ ಹದಿನಾರು ವರ್ಷಗಳ ಅವಧಿಯಲ್ಲಿ ಕ್ಷೇತ್ರಕ್ಕೆ ಹೇಳಿಕೊಳ್ಳುವಂತಹ ಯಾವುದೇ ಉಪಯ... ಸೇವೆ ಮಾಡಲಿಲ್ಲ. ತನ್ನ ಹೆಚ್ಚಿನ ಸಮಯವ... ಬೆಂಗಳೂರು, ದೆಹಲಿಯಲ್ಲಿಯೇ ಕಳೆಯುತ್ತಿದ್ದರು. ಇ... ಮೇಲಿನ ಕಾಂಗ್ರೆಸ್ ನೀತಿಗಳ ಮೇಲಿನ ಅಪ... ಅತೃಪ್ತಿಯೂ ಬಿಜೆಪಿ ಅಭ್ಯರ್ಥಿಯ ಗೆಲುವಿ... ಸಹಾಯವಾಯಿತು. ಆದರೆ ವಿಜಯಸಂಕೇಶ್ವರ ಕ... ಮೂರು ವರ್ಷಗಳಲ್ಲಿ ಸಂಸತ್ ಸದಸ್ಯರಿಗೆ ತಮ್ಮ ಕ್ಷೇತ್ರ... ಅಭಿವೃದ್ಧಿಗಾಗಿ ವರ್ಷಕ್ಕೆ ರೂ. 1 ಕೋಟಿ (... ವರ್ಷದಿಂದ 2 ಕೋಟಿ) ಕೇಂದ್ರ ಸರ್ಕಾರದಿಂದ ಬಿಡು... ಮಾಡಿದ ಹಣವನ್ನು ಸ್ಥಳೀಯ ದಕ್ಷ ಜಿಲ್ಲಾಧಿಕಾರಿ... ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ನಿರ್ವಾ... ಅಧಿಕಾರಿಗಳ ಉಸ್ತುವಾರಿಯಲ್ಲಿ ಸಣ್ಣ ಕಾಮಗಾರಿಗ... ಆದ್ಯತೆ ಕೊಟ್ಟು ಹಲವಾರು ಕೆಲಸಕಾರ್ಯಗಳ... ನಡೆಸಿದ್ದಾರೆ. ಉದಾ: ಗ್ರಾಮೀಣ ರಸ್ತೆ ನಿರ್ಮಾಣ, ದು... ಕೆರೆ ಹೂಳು ತೆಗೆಯುವುದು, ಬಸ್ ತಂಗುದಾ... ನಿರ್ಮಾಣ-ದುರಸ್ತಿ, ಸಮುದಾಯ ಭವನ, ಶಾ... ಕೊಠಡಿ, ಸಣ್ಣ ಸೇತುವೆಗಳು-ದುರಸ್ತಿ, ಕೊಳವೆಬಾ...

ಪುಟ 11 ನೋಡಿ

ಧಾರಾವಾಡ ಉತ್ತರ ಲೋಕಸಭಾ ಕ್ಷೇತ್ರ

	1994	ಶೇಕಡಾಂಶ	1998	ಶೇಕಡಾಂಶ	ಶೇಕಡಾಂಶ ನಿವ್ವಳ ಹೆಚ್ಚು/ಕಡಿಮೆ
ಒಟ್ಟು ಮತಹಾಕಿದವರು	5,98,156	55.53	6,94,185	64.00	+ 8.17
ಬಿಜೆಪಿ: ವಿಜಯಸಂಕೇಶ್ವರ	2,28,572	39.04	3.39,660	50.15	+ 11.11
ಕಾಂಗ್ರೆಸ್(ಐ): ಡಿ.ಕೆ.ನಾಯ್ಕರ್	1,49,768	25.64	2,10,459	31.09	+ 5.43
ಜನತಾದಳ: ಶಂಕರಣ್ಣಮುನವಳ್ಳಿ	1,88,221	82.23	1,13,763	16.80	- 15.43

ಬಾಗೇಪಲ್ಲಿಯಲ್ಲಿ ಜನಪರ ಅಭಿವೃದ್ಧಿ

ಕೋಲಾರ ಜಿಲ್ಲೆಯ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಸಲದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡ ಕಾಂ. ಜಿ.ವಿ. ಶ್ರೀರಾಮರೆಡ್ಡಿ ಆಯ್ಕೆಯಾಗಿದ್ದರು. ಕಳೆದ ನಾಲ್ಕು ಮುಕ್ಕಾಲು ವರ್ಷಗಳಲ್ಲಿ ಬಾಗೇಪಲ್ಲಿ ಶಾಸಕ ತನ್ನ ಕ್ಷೇತ್ರದ ಅಭಿವೃದ್ಧಿ ಸಲುವಾಗಿ ಅವಿಶ್ರಾಂತವಾಗಿ ಶ್ರಮಿಸಿದ್ದಾರೆ. ಶೈಕ್ಷಣಿಕವಾಗಿ ಹಿಂದುಳಿದ ಕ್ಷೇತ್ರದಲ್ಲಿ ಶಾಲಾ ಕಾಲೇಜು ಆರಂಭಿಸಲು, ಸಂಪರ್ಕಕ್ಕಾಗಿ ರಸ್ತೆಗಳು- ಸೇತುವೆಗಳು, ಭೂಹೀನರಿಗೆ ಜಮೀನು ಒದಗಿಸಲು ಶಾಸಕ ಕಾಂ. ಶ್ರೀರಾಮರೆಡ್ಡಿ ಪ್ರಯತ್ನಿಸಿ ಸಫಲರೂ ಆಗಿದ್ದಾರೆ. ಸಾಧನೆಯ ವಿವರ ಇಲ್ಲಿದೆ.

ಬಾಗೇಪಲ್ಲಿ ಕ್ಷೇತ್ರದಲ್ಲಿ ಸರ್ವಾಂಗೀಣ ಅಭಿವೃದ್ಧಿಯನ್ನು ಸಿಪಿಐ(ಎಂ) ಸಾದಿಸುತ್ತದೆ ಎಂದು ಎಲ್ಲೂ ಹೇಳಲಿಲ್ಲ ಏಕೆಂದರೆ ಕೊಳೆತು ನಾರುತ್ತಿರುವ ಈ ವ್ಯವಸ್ಥೆಯಲ್ಲಿಯೇ ಇರುವ ಒಂದು ಅತಿ ಚಿಕ್ಕ ಭಾಗವಷ್ಟೇ ಬಾಗೇಪಲ್ಲಿ ಕೂಡಾ. ಆದ್ದರಿಂದ ಶಾಸಕರೊಬ್ಬರು ಗೆದ್ದು ಬಂದರೆ, ಎಲ್ಲವೂ ಸರಿಮಾಡಲಿಕ್ಕೆ ಸಾಧ್ಯವಿಲ್ಲ. ತನ್ನ ಮಿತಿಗಳೊಳಗೆ ಎಷ್ಟು ಕೆಲಸ ಕ್ಷೇತ್ರಕ್ಕೆ ಆಗಬೇಕೋ ಅಷ್ಟೆಲ್ಲಾ ಮಾಡಿಸುವುದಕ್ಕೆ ಪ್ರಯತ್ನ ಪಡುತ್ತೇನೆಂದು ಮಾತ್ರ ಭರವಸೆ ಕೊಟ್ಟಿದ್ದು ಚುನಾವಣೆಗೆ ಮೊದಲು ಶಾಸಕರೆಂದರೆ ಜನರಿಗೆ ಸಿಗುವ ಪದವಲ್ಲ ಎಂಬತಿದ್ದದ್ದು ಚುನಾವಣೆಯ ನಂತರ ಗೊತ್ತಾಗಿದೆ, ಜನರಿಗಾಗಿ ಶಾಸಕರು ಎನ್ನುವುದು.

ಮಾನವ ಅಭಿವೃದ್ಧಿಗೆ ಮೊದಲ ಆದ್ಯತೆ

ಬಾಗೇಪಲ್ಲಿ ನದಿ ನಾಲೆಗಳಿಲ್ಲದ ಕ್ಷೇತ್ರ. ಆದ್ದರಿಂದ ಅಣೆಕಟ್ಟುಗಳು, ಕೈಗಾರಿಕೆಗಳು ಸ್ಥಾಪಿಸುವುದಕ್ಕೆ ಸಾಧ್ಯವಿಲ್ಲ. ಹಾಗಿರುವಾಗ ಬಾಗೇಪಲ್ಲಿ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯಾಗಬೇಕು ಎನ್ನುವದೇ ಪಕ್ಷದ ಆಕಾಂಕ್ಷೆ. ಆದರ ಮೊದಲು ಮೆಟ್ಟಿಲು ಶಿಕ್ಷಣಕ್ಕಾಗಿ ಹೆಚ್ಚು ಶ್ರಮವಹಿಸಿ ಕೆಲಸ ಮಾಡಿದ್ದು. ಬಾಗೇಪಲ್ಲಿಯಲ್ಲಿ ಒಂದು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ಸ್ಥಾಪನೆ ಮಾಡಿದ್ದು ಅತ್ಯಂತ ಉನ್ನತ ಸಾಧನೆ ಎಂಬುದು ಜನರ ಮಾತು. ಇದು ತುಂಬಾ ಸುಲಭವಾಗಿ ಆದಂತದ್ದಲ್ಲ. ಅದಕ್ಕೊಂದು ನಿವೇಶನ ಇಲ್ಲ ಬಾಗೇಪಲ್ಲಿಯಲ್ಲಿ. ರೇಷ್ಮೆ ಇಲಾಖೆಯ ಕೈಯಲ್ಲಿ ಏನೂ ಕೆಲಸಕ್ಕೆ ಬಾರದ ಜಮೀನು ಇತ್ತು. ಅದನ್ನು ಉಪಯೋಗಿಸಿಕೊಳ್ಳಲು ಹಲವು ಪಟ್ಟಭದ್ರರು ಅಡ್ಡಿಮಾಡಿದರು. ಕಡೆಗೆ ಆ ಜಾಗದಲ್ಲಿ ಪ್ರಾರಂಭೋತ್ಸವ ಸಭೆ ಕೂಡಾ ಮಾಡಿಸಲು ಬಿಡಲಿಲ್ಲ. ಆದರೂ ಅದನ್ನು ಬಿಡದೇ ರೇಷ್ಮೆ ಸಚಿವರನ್ನು ಕರೆದುಕೊಂಡು ಬಂದು ಆ ಜಾಗವನ್ನು ಪರಿಶೀಲಿಸಿ ನೋಡಿ ಕಡೆಗೆ 51/2 ಎಕರೆ ಜಮೀನನ್ನು ಕಾಲೇಜಿಗೆ ಕೊಟ್ಟರು. ಆ ಸದ್ಯಕ್ಕೆ ತರಗತಿಗಳು ನಡೆಯಲು ಜಾಗವಿಲ್ಲದೇ ಪರದಾಡಬೇಕಾಯಿತು. ಅದನ್ನು ಕೂಡಾ ಶಾಸಕರು ತುಂಬಾ ಮುತವರ್ಜಿವಹಿಸಿ ಶ್ರೀ ವೆಂಕಟೇಶ್ವರ ಶಿಕ್ಷಣ ದತ್ತಿಯ ವೆಂಕಟರಾಮಯ್ಯ ಶೆಟ್ಟಿಯವರ ಖಾಲಿ ಕಟ್ಟಡಗಳನ್ನು ಗುರ್ತಿಸಿ ಕೇಳಲಾಗಿ ಅವರು ಅನುಮತಿ ಕೊಟ್ಟರು. ಇಂದು 4 ವಿಭಾಗಗಳಾದ Electronics, Computer Seicence, Automobiles Mechanical ಗಳಿಂದ 240 ವಿದ್ಯಾರ್ಥಿಗಳು ಓದುವ ಸರ್ಕಾರಿ ಕಾಲೇಜಾಗಿ ಕಡು ಬಡವರು, ಪ್ರತಿಭಾವಂತ ವಿದ್ಯಾರ್ಥಿಗಳು ಓದಬಹುದಾದ ಕಾಲೇಜಾಗಿರುವುದು ಬಾಗೇಪಲ್ಲಿಗೆ ಒಂದು ವರದಾನವಾಗಿದೆ. ಇಂದು 50 ಲಕ್ಷ ರೂಪಾಯಿಗಳ ಕಟ್ಟಡದ ಶಂಕುಸ್ಥಾಪನೆಯಾಗಿ ಕಟ್ಟಡದ ಕಾಮಗಾರಿ ತೀವ್ರಗತಿಯಲ್ಲಿ ಸಾಗುತ್ತಿದೆ.

ಗುಡಿಬಂಡೆಯಲ್ಲಿ ಮೊದಲದರ್ಜೆ ಕಾಲೇಜು, ಗುಡಿಬಂಡೆ ತಾಲ್ಲೂಕಿನ ಚೆಂಡೂರಿನಲ್ಲಿ ಸರ್ಕಾರಿ ಹೈಸ್ಕೂಲ್, ಬಾಗೇಪಲ್ಲಿ ತಾಲ್ಲೂಕಿನ ಆಚೆಪಲ್ಲಿ ಕ್ರಾಸ್‌ನಲ್ಲಿ ಮತ್ತು ತಿಮ್ಮಂಪಲ್ಲಿಯಲ್ಲಿ ಸರ್ಕಾರಿ ಪ್ರೌಢಶಾಲೆಗಳು ಬಿಳ್ಳೂರು ಮತ್ತು ಮಾರಗಾನಕುಂಟೆಯಲ್ಲಿ ವಿದ್ಯಾರ್ಥಿ ನಿಲಯಗಳು, 30 ಜನ ಮಕ್ಕಳಿರುವ ಎಲ್ಲಾ ಕಡೆ ಪ್ರಾಥಮಿಕ ಶಾಲೆಗಳು ಮತ್ತು ಶಾಲಾಕಟ್ಟಡಗಳ ನಿರ್ಮಾಣ ಹೀಗೆ ಶಿಕ್ಷಣ ಕೇತ್ರಕ್ಕೆ ತನ್ನ ಇತಿಮಿತಿಯಲ್ಲಿ ಕಾಂಗ್ರೆಸ್‌ನ 45 ವರ್ಷಗಳ ಅಭಿವೃದ್ಧಿಗಿಂತ 5 ವರ್ಷಗಳ ಅಭಿವೃದ್ಧಿ ಜನರ ಮನಸ್ಸಿಗೆ ನಾಟುವಂತೆ ಮಾಡಿದ ಯಶಸ್ಸು ಸಿಪಿಐ(ಎಂ) ಪಕ್ಷಕ್ಕೆ ಸಲ್ಲುತ್ತಿದೆ.

ಕುಡಿಯುವ ನೀರು

ಕ್ಷೇತ್ರದಲ್ಲಿ ತಕ್ಷಣದ ಪರಿಹಾರಯೋಗ್ಯವಾಗಿ ಸಮಸ್ಯೆ ಎಂದರೆ, ಕುಡಿಯುವ ನೀರಿನ ಸಮಸ್ಯೆ. ಕುಡಿಯುವ ನೀರಿಗಾಗಿ ಹಲವಾರು ಹಳ್ಳಿಗಳ ಜನರು ಸುಮಾರು ಒಂದು ಕಿ.ಮೀ ದೂರ ಹೋಗಿ ತರಬೇಕಾದಂತಹ ಪರಿಸ್ಥಿತಿ ಇತ್ತು. ಇಂತಹ ಪರಿಸ್ಥಿತಿಯಲ್ಲಿ ಕ್ಷೇತ್ರದ ಸುಮಾರು 95 ಭಾಗದ ಹಳ್ಳಿಗಳಿಗೆ ಕಿರುನೀರು ಸರಬಾರಾಜು ಯೋಜನೆಗಳನ್ನು ಮಂಜೂರು ಮಾಡಿಸಿದ್ದು ಸಿಪಿಐ(ಎಂ) ಮಾತ್ರ . ಇಂದು ಕೇವಲ 10-12 ಹಳ್ಳಿಗಳು ಮಾತ್ರ ಕಿರು ನೀರಿ ಸರಬರಾಜು ಆಗದೆ ಇರುವ ಹಳ್ಳಿಗಳು. ಅದರಲ್ಲೂ ಕೆಲವು ಹಳ್ಳಿಗಳಿಗೆ ಮಂಜೂರು ಆಗಿ ಕೆಲಸ ಆಗುತ್ತಿರುವ ಹಂತದಲ್ಲಿದೆ. ಧೈರ್ಯವಾಗಿ ಯಾವುದೇ ಹಳ್ಳಿಗೆ ಹೋಗಿ ಮತ ಕೇಳುವ ಹಕ್ಕು ಸಿಪಿಐ(ಎಂ) ಕಾರ್ಯಕರ್ತರಿಗೆ ಲಭ್ಯವಾಗಿದೆ. ಬಾಗೇಪಲ್ಲಿ ಟೌನ್‌ಗಾಗಿ ರಾಮಸ್ವಾಮಿಪಲ್ಲಿಯ ರೆಡ್ಡಿಕೆರೆಯನ್ನು ಕೊಳವೆ ಬಾವಿ ಹಾಕಿಸಿ ನೀರು ಶೇಖರಿಸುವ ಟ್ಯಾಂಕ್ ನಿರ್ಮಾಣ ಮಾಡಿ ಆದರಿಂದ over head town ಗೆ ನೀರೊಡೆದು ಪಟ್ಟಣಕ್ಕೆ ಹೆಚ್ಚಿನ ನೀರನ್ನು ಒದಗಿಸಿದ್ದಾರೆ. ಅದಲ್ಲದೆ ಚುನಾವಣೆಯಲ್ಲಿ ಗೆದ್ದ ಪಕ್ಷವೇ ಪಟ್ಟಣದ ಎಲ್ಲಾ ಕಡೆ ಪಾದಯಾತ್ರೆ ಮಾಡಿ ಸ್ಥಳೀಯವಾಗಿ ಇದ್ದಂತಹ ಹಲವಾರು ಸಮಸ್ಯೆಗಳನ್ನು ಖುದ್ದಾಗಿ ಜನರಿಂದ ಕೇಳಿ ತಕ್ಷಣ 2000 ಮೀಟರ್ ಉದ್ದದ ಪೈಪ್‌ಲೈನ್ ಹಾಕಿಸಿ ಸಾಧ್ಯವಾದಷ್ಟು ಕಡೆಗಳಲ್ಲಿ ಸಾರ್ವಜನಿಕ ಟ್ಯಾಪುಗಳನ್ನು ಹಾಕಿಸಲಾಯಿತು. ಇಡೀ ಕ್ಷೇತ್ರದಲ್ಲಿ ಕುಡಿಯುವ ನೀರಿನ ಹಾಹಾಕಾರವನ್ನು ಇಂದು 90ಃ ಭಾಗ ಶಮನಗೊಳಿಸಿರುವುದು ಸುಲಭದ ಮಾತಲ್ಲ. 45 ವರ್ಷಗಳ ಸಮಸ್ಯೆಯನ್ನು 5 ವರ್ಷದಲ್ಲೇ ಪರಿಹರಿಸುವುದಕ್ಕೆ ನಿರಂತರ ಕ್ರಿಯೆ ಅವಶ್ಯ. ಆ ಕ್ರಿಯಾತ್ಮಕವಾದದಂತಹ, ಚಲನಶೀಲವಾದ ನಡುವಳಿಕೆಯನ್ನು ಮೈಗೂಡಿಸಿಕೊಂಡಿರುವುದಿಂದ ಸಿಪಿ(ಎಂ) ಪಕ್ಷ ಈ ಹಲವಾರು ಸಮಸ್ಯೆಗಳನ್ನು 5 ವರ್ಷದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಪರಿಹರಿಸಲು ಸಾಧ್ಯವಾಗಿದೆ.

ರಸ್ತೆಗಳು

ಬಾಗೇಪಲ್ಲಿ ಕ್ಷೇತ್ರದಲ್ಲಿ ರಸ್ತೆಗಳ ದುಸ್ಥಿತಿ ಚುನಾವಣ ಪೂರ್ವದಲ್ಲಿ ಹೇಳತೀರದಾಗಿತ್ತು. ಹಿಂದೆ ಕಾಂಗ್ರೆಸ್‌ನವರು ಶಾಸಕರಾಗಿದ್ದಾಗ ಹಣ ಕ್ಷೇತ್ರಕ್ಕೆ ಬರುತ್ತಿರಲಿಲ್ಲವಾ ? ಖಂಡಿತಾ ಬರುತಿತ್ತು. ಆದರೆ ಏನಾಗುತ್ತಿತ್ತು? ಖರ್ಚಾಗುತ್ತಿತ್ತು. ಆದರೆ ಹೇಗೆ ಖರ್ಚಾಗುತ್ತಿತ್ತು ಎನ್ನುವುದು ಬಹಳ ಮುಖ್ಯ. ಬಹಳ ಮುಖ್ಯವಾದ ರಸ್ತೆಗಳನ್ನು ಪಕ್ಕಾ ಮಾಡಿದ ಚರಿತ್ರೆ ಕಾಂಗ್ರೆಸ್ಸಿಗಿಲ್ಲ. ಸಾಧ್ಯವಾದಷ್ಟು ಮಣ್ಣು ಹಾಕಿ ಬಿಲ್ಲು ಪಡೆಯುವುದು. 10 ಲೋಡು ಗಾವೆಲ್ ಹೊಡೆದು 10,000 ರೂ ಬಿಲ್ಲು ಪಡೆಯುವುದು. ಇದರಿಂದ ಹೊಡೆದ ಮಣ್ಣು ಮಳೆ ಜೋರಾಗಿ ಬಂದರೆ, ಅಥವಾ ಜಡಿಮಳೆ ಬಂದರೆ ಮತ್ತೆ ಮಾಮೂಲಿಗೆ ಬರುತ್ತದೆ. ನಂತರ ಅದಕ್ಕೆ ಮಣ್ಣು ಹಾಕುವುದು ಬಿಲ್ಲು ಪಡೆಯುವುದು. ಇದರಿಂದ ಬಂದ ಹಣ ಮಂಜಿನಂತೆ ಕರಗಿ ಗುತ್ತಿಗೆದಾರರ ಜೇಬು ಸೇರಿಕೊಂಡಿತ್ತು. ಆದರೆ ರಸ್ತೆ ಮಾತ್ರ ಪಕ್ಕ ಆಗಲಿಲ್ಲ. ಇದನ್ನರಿತ ಶಾಸಕರು ಯಾವುದೇ ರಸ್ತೆಗೆ 10 ಅಥವಾ 20 ಸಾವಿರ ರೂ. ಹಾಕುವುದಿಲ್ಲ. ಅದರ ಬದಲು ಯಾವುದೇ ರಸ್ತೆಗೆ ಒಂದು ಕಿ.ಮೀ ಗೆ 80,000 ರೂ ಮೇಲೆ ಹಾಕಿ ಅದಕ್ಕೆ ಜಲ್ಲಿ ಹೊಡೆದು ಪಕ್ಕಾ ಮಾಡಿದರೆ, ರಸ್ತೆ ಕೆಡದಿರುವುದಕ್ಕೆ ಸಾಧ್ಯವಾಗುತ್ತದೆ ಎಂದು ಯಾವುದೇ ರಸ್ತೆಯನ್ನು ಜಲ್ಲಿ ಮತ್ತು ಅದಕ್ಕೆ ಅವಶ್ಯವಿರುವ ಕಡೆ ಮೋರಿ ಹಾಕದೆ ಕೆಲಸ ಮಾಡುವುದಿಲ್ಲ. 45 ವರ್ಷದಿಂದ ಕೆಟ್ಟು ಹೋದ ರಸ್ತೆಗಳನ್ನು 5 ವರ್ಷದಲ್ಲಿ ಮಾಡಿ ಮುಗಿಸುವುದಕ್ಕೆ ಸಾಧ್ಯವಿಲ್ಲ. ಆದರೂ ಹಲವಾರು ಯೋಜನೆಗಳನ್ನು ಸರ್ಕಾರದ ಸಹಕಾರವನ್ನು ಉಪಯೋಗಿಸಿಕೊಂಡು 80 ಭಾಗ ರಸ್ತೆಗಳನ್ನು ಸರಿಮಾಡುವುದಕ್ಕೆ ಸಾಧ್ಯವಾಗಿದೆ.

ಒಂದು ಅಂದಾಜಿನಂತೆ, ನಬಾರ್ಡ್ ಯೋಜನೆಯೊಂದರಲ್ಲೇ ಬಾಗೇಪಲ್ಲಿಯ ಎಚ್.ಎನ್. ವೃತ್ತದಿಂದ ಗುಳ್ಳೂರು, ಬಿಳ್ಳೂರು ಮಾರ್ಗವಾಗಿ ನಗುರ್ಲುವರೆಗೂ ಸುಮಾರು 32 ಕಿ.ಮೀ ಡಾಂಬರು ಹಾಕಲಿಕ್ಕೆ 70 ಲಕ್ಷ ರೂಗಳು ಮಂಜೂರು ಮಾಡಿಸಿ ಕೆಲಸ ಮುಗಿಸಲಾಗಿದೆ. ನಗರ್ಲು ಕ್ರಾಸ್‌ನಿಂದ ಪ್ರವಾಸಿ ಕೇಂದ್ರವಾದ ಗುಮ್ಮನಾಯಕನ ಪಾಳ್ಯದವರೆಗೂ ಜಲ್ಲಿ ಡಾಂಬರು ಹಾಕಲಿಕ್ಕೆ 30 ಲಕ್ಷ ರೂ ಕೆಲಸ ನಡೆಯುತ್ತಿದೆ. ದೇವಿಕಾಟಿ ಎಂಬ ಹಳ್ಳಿ ಏಳು ಕಿ.ಮೀ ನಷ್ಟು ದೂರದಲ್ಲಿ ಯಾರಿಗ್ಗೂ ಸಿಗದಂತಹ ಸ್ಥಳದಲ್ಲಿತ್ತು. ರಸ್ತೆ ನೋಡಿದ ಜನ ಅವರಲ್ಲ. ಹಿಂದಿನ ಕಾಂಗ್ರೆಸ್ ಆಡಳಿತದಲ್ಲಿ ದೇವಿಕುಂಟ ಗ್ರಾಮಕ್ಕೆ ನಬಾರ್ಡ್ ಯೋಜನೆಯಲ್ಲಿ 7 ಲಕ್ಷ ರೂ.ಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿತ್ತು. ಆದರೆ, ಕಾಂಗ್ರೆಸ್ ಮಾಜಿ ಜಿಲ್ಲಾ ಪಂಚಾಯ್ತಿ ಸದಸ್ಯೆಯೊಬ್ಬರ ಸ್ವಯಂಸೇವಾ ಸಂಸ್ಥೆಗೆ ಆ ಗುತ್ತಿಗೆ ವಹಿಸಿ ಇಡೀ ಹಣ ನುಂಗಿ ನೀರು ಕುಡಿದಿದ್ದಲ್ಲದೇ ರಸ್ತೆ ಮಾತ್ರ ದೇವಿಕುಂಟೆ ಜನ ಕಾಣಲಿಲ್ಲ. ಸಿಪಿಐ(ಎಂ) ಶಾಸಕರು ಆಯ್ಕೆಯಾದ ಕೂಡಲೇ ಜಿಲ್ಲಾಧಿಕಾರಿಗಳಾಗಿದ್ದ ರೇಣುಕಾದಂಬರಂರವರನ್ನು ಸ್ಥಳಕ್ಕೆ ಕರೆದುಕೊಂಡು ಬಂದು ಸುಮಾರು 3 ಕಿ.ಮೀ ನಡೆದುಕೊಂಡು ಹೋಗಿ ಊರಿನ ಜನರ ಸಮಸ್ಯೆಯನ್ನು ಖುದ್ದಾಗಿ ಆಲಿಸಿ ತಕ್ಷಣ 4 ಲಕ್ಷ ರೂ.ಗಳನ್ನು ಮಂಜೂರು ಮಾಡಿ ದೇವಿಕುಂಟೆಗೆ ಅಡ್ಡಲಾಗಿದ್ದ ಗುಡ್ಡವೊಂದನ್ನು ಅಗೆಸಿ ರಸ್ತೆ ಮಾಡಲಾಯಿತು. ಮತ್ತೆ ಅದೇ ರಸ್ತೆಗೆ ಮಾರಗಾನಕುಂಟೆಯಿಂದ ದೇವಿಕುಂಟೆಗೆ 20 ಲಕ್ಷ ರೂಗಳನ್ನು ಮಂಜೂರು ಮಾಡಲಾಗಿದೆ ಹಾಗೂ ಕೆಲಸ ಪ್ರಗತಿಯಲ್ಲಿದೆ. ಪಾತಪಾಳ್ಯದಿಂದ 7.ಕಿ.ಮೀ ದೂರದಲ್ಲಿ 7 ಕಿ.ಮೀ ದೂರದಲ್ಲಿ ಸಿಂಗಪ್ಪಗಾರಿಪಲ್ಲಿ ಎನ್ನುವ ಕುಗ್ರಾಮ ಸ್ವಾತಂತ್ರ್ಯಾ ನಂತರದ 50 ವರ್ಷಗಳ ಇತಿಹಾಸದಲ್ಲಿ ರಸ್ತೆ ಕಾಣಲಿಲ್ಲ. ಆದರೆ ಇಂದು ಆ ಕುಗ್ರಾಮಕ್ಕೆ ರಸ್ತೆ ಸೌಲಭ್ಯಕ್ಕಾಗಿ 32 ಲಕ್ಷಗಳು ಮಂಜೂರಾಗಿವೆ. ತಾಲ್ಲೂಕಿನ 100 ವರ್ಷಗಳ ಹಿಂದೆ ತಾಲ್ಲೂಕು ಕೇಂದ್ರವಾದ ಗುಮ್ಮನಾಯಕನಪಾಳ್ಯಕ್ಕೆ ರಸ್ತೆ ಸೌಲಭ್ಯವಿಲ್ಲದೆ, ಅಲ್ಲಿರುವ ಎರಡು ಹಳ್ಳಿಗಳಾದ ಪಾಳ್ಯ ಮತ್ತು ತುಂಗೆಟಿ ದಿನ್ನೆ ಎಂಬ ಹಳ್ಳಿಯ ಜನರು ಎರಡು ಶಾಲೆ ಮತ್ತಿತರ ಸೌಲಭ್ಯಗಳಾಗಿ ಪಾತಪಾಳ್ಯವನ್ನು ಅವಲಂಭಿಸಬೇಕಾದ ಅನಿವಾರ್ಯತೆ ಇತ್ತು. ಆದರೆ ಇಂದು ರಸ್ತೆಗಾಗಿ ನಬಾರ್ಡ್ ಯೋಜನೆಯಡಿಯಲ್ಲಿ 28 ಲಕ್ಷ ರೂಪಾಯಿಗಳು ಮಂಜೂರಾಗಿ ಕೆಲಸ ಪ್ರಗತಿಯಲ್ಲಿದೆ. ಇನ್ನೂ ಬೇರೆ ಬೇರೆ ಯೋಜನೆಗಳಿಲ್ಲಾ ಬಾಗೇಪಲ್ಲಿಯಿಂದ ಬೆಳ್ಳೂರು ರಸ್ತೆ, ಮಿತಿಮೀರಿ ಮೇಲೆ ಹಾದು ಹೋಗಿಗುವ ಚಿಂತಾಮಣಿ ರಸ್ತೆ ಅಭಿವೃದ್ಧಿ ಮಾಡಲಾಗಿದೆ.

ಗುಡಿಬಂಡೆ ತಾಲ್ಲೂಕಿನ ಕಡೆಹಳ್ಳಿಯ ಹತ್ತಿರ ಮುಖ್ಯ ರಸ್ತೆಗೆ ಸೇತುವೆ ನಿರ್ಮಾಣಕ್ಕಾಗಿ 50 ಲಕ್ಷ ರೂ.ಗಳು ಮಂಜೂರಾಗಿದ್ದ ಕೆಲಸ ಪ್ರಗತಿಯಲ್ಲಿದೆ. ಗುಡಿಬಂಡೆ ರಾಮಪಲ್ಲಿ ರಸ್ತೆಗೆ 20 ಲಕ್ಷರೂಗಳು ಮಂಜೂರಾಗಿದೆ. ಎಲ್ಲೋಡುದಿಂದ ಗುಡಿಬಂಡೆ ರಸ್ತೆಗೆ 30 ಲಕ್ಷ ರೂ.ಗಳು ಮಂಜೂರಾಗಿ ಕೆಲಸ ಪ್ರಗತಿಯಲ್ಲಿದೆ. ರಸ್ತೆ ಸೌಕರ್ಯವಿಲ್ಲದ ಹಲವಾರು ಹಳ್ಳಿಗಳಿಗೆ ಇಂದು ಪಕ್ಕಾ ರಸ್ತೆಯ ಸೌಲಬ್ಯ ಒದಗಿಸಲಾಗಿದೆ. ಸಂಪರ್ಕ ಬಹಳ ಅವಶ್ಯವಾದುದು ತುಂಬಾ ಮುಖ್ಯವಾದದ್ದು ಕೂಡಾ ಅದ್ದರಿಂದಲೇ ಅದಕ್ಕೆ ಹೆಚ್ಚು ಒತ್ತು.ಕೊಟ್ಟು ಎಲ್ಲಾ ಹಳ್ಳಿಗಳಿಗೂ ಸಾಧ್ಯವಾದಷ್ಟು ಮಟ್ಟಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ.

ಬಹಳ ಮುಖ್ಯವಾಗಿ ರೈತರಿಗೆ ತುಂಬಾ ಅಗತ್ಯವಾಗಿದ್ದ ವಿದ್ಯುತ್ ಕ್ಷೇತ್ರದಲ್ಲಿ ಭಾಗೇಪಲ್ಲಿ ರೈತರು ತುಂಬಾ ನೋವು ಅನುಭವಿಸುತ್ತಿದ್ದರು. ಸುಮಾರು 25 ವರ್ಷಗಳ ಹಿಂದಿನ ಅಗತ್ಯತೆಗೆ ತಕ್ಕಂತೆ ತಂತಿಗಳ ಮತ್ತು ಟ್ರಾನ್ಸ್‌ಫಾರ್ಮ್‌ರ್‌ಗಳನ್ನು ಅಳವಡಿಸಲಾಗಿತ್ತು. 25 ವರ್ಷಗಳ ಹಿಂದೆ ಪಂಪುಸೆಟ್ಟುಗಳು ಕೆಲಸ ಮಾಡುತ್ತಿದ್ದವು. ಇದರಿಂದ ಲೋ ಓಲ್ಟೇಜ್ ಬರುವುದು ಆಗಿಂದಾಗೆ ಮೋಟಾರ್‌ಗಳು ಕೆಟ್ಟುಹೋಗುವದು. ಟ್ರಾನ್ಸ್ಫಾರ್ಮರ್‌ಗಳು ಸುಟ್ಟುಹೋಗುವುದು ಕಡಿಮೆ ಓಲ್ಟೇಜ್ ನಿಂದ ಪಂಪುಸೆಟ್ಟುಗಳು ನಡೆಯದೇ ಇಟ್ಟ ಬೆಳೆ ಕೈಗೆ ಬರದೇ ಅತ್ಯಂತ ದುರ್ಬಲ ಸ್ಥಿತಿಯಲ್ಲಿ ರೈತರು ಬದುಕುತ್ತಿದ್ದರು. ಆದ್ದರಿಂದ ಹಲವಾರು ಕಷ್ಟ ಕಾರ್ಪಣ್ಯಗಳನ್ನು ಎದುರಿಸುತ್ತಿದ್ದರು. ಇಂದಿನ ಅವಶ್ಯಕತೆಗೆ ತಕ್ಕಂತೆ ಗೌರಿಬಿದನೂರಿನಿಂದ ಬರುವ ವಿಧ್ಯುತ್ ಲೈನ್‌ಗಳನ್ನು ಬದಲಿಸಬೇಕಿತ್ತು. ಇಡೀ ತಾಲೂಕು 2ನೇ ಕೇದ್ರಗಳಿಂದ ವಿಧ್ಯುತ್ ಸರಬರಾಜು ಆಗಬೇಕಿತ್ತು. ಇದರಿಂದ ಶಾಸಕರು ಸರ್ಕಾರದ ಸಹಕಾರದಿಂದ ಅತ್ಯಂತ ಯಶಸ್ವಿಯಾಗಿ ವಿಧ್ಯುತ್ ಕ್ಷೇತ್ರದಲ್ಲಿ ಇಂದು ಪ್ರಗತಿಯನ್ನು ಕಂಡಿದ್ದಾರೆ. ಗೌರಿಬಿದನೂರಿನಿಂದ ಹೊಸ ಲೈನು ಅಡವಳಿಕೆಯನ್ನು 6 1ಯ2 ಕೋಟಿ ವೆಚ್ಚದಲ್ಲಿ ಮಾಡಲಾಗಿದೆ. ತಿಮ್ಮಪ್ಪಲ್ಲಿ ಹತ್ತಿರ ವಿಧ್ಯುತ್ ಸ್ಟೇಷನ್ ಐದುವರೆಕೋಟಿ ರೂ.ಗಳ ವೆಚ್ಚದಲ್ಲಿ ಮುಖ್ಯಮಂತ್ರಿಯವರಿಂದಲೇ ಉಧ್ಘಾಟನೆಗೊಂಡಿದೆ. ಬಾಗೇಪಲ್ಲಿ ಮತ್ತು ಸೋಮನಾಥಪುರ ಸ್ಟೇಷನ್‌ಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಬಾಗೇಪಲ್ಲಿ ಯಿಂದ ಗೂಳೂರಿಗೆ ಎಕ್ಸ್‌ಪ್ರೆಸ್ ಲೈನ್ ಅಡವಳಿಸಲಾಗಿದೆ. ಅದಲ್ಲದೆ ಇಡೀ ಕ್ಷೇತ್ರಕ್ಕೆ ಯಾವುದೇ ಕ್ಷೇತ್ರಕ್ಕಿಂತ ಹೆಚ್ಚು ಟ್ರಾನ್ಸ್‌ಫಾರಂಗಳು ಬಂದಿವೆ. ಸುಮಾರು 20 ಕೋಟಿ ರೂಗಳೂ ಒಂದು ಅಂದಾಜಿನಂತೆ (ಇನ್ನೂ ಹೆಚ್ಚಿರಬಹುದು) ಖರ್ಚಾಗಿದೆ. ಇಂದು ತಾಲೋಕಿನಾದ್ಯಂತ ವಿಧ್ಯುತ್ ಸಮಸ್ಯೆಯಿರಬಹುದು. ಆದರೆ ರಾಜ್ಯ ವಿಧ್ಯುತ್ ಗಾರದಿಂದಲೇ ಬರುತ್ತಿರುವ ವಿಧ್ಯುತ್ ಸಾಲದೇಬರುತ್ತಿದೆ. ಬರುವ ವಿಧ್ಯುತ್‌ನಲ್ಲಿ ಹೆಚ್ಚು ಏರುಪೇರಾಗದೆ ಕಡಿಮೆ ಓಲ್ಟೇಜ್ ಬರದೇಇರುವುದರಿಂದ ರೈತರ ಪಂಪ್‌ಸೆಂಟ್‌ಗಳು ಕೆಡದೆ ಉಸಿರಾಡುವಂತೆ ಆಗಿರುವುದು ಸತ್ಯವಾಗಿದೆ. ಅತ್ಯಂತ ಪ್ರಮುಖ ವಿಷಯವಾದ ಬಗರ್ ಹುಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿಗಳ ವಿತರಣೆ. ಉಳುವವರಿಗೆ ಭೂಮಿ ಬೇಕು ಎಂಬುದು ಸಿ.ಪಿ.ಐ.(ಎಂ)ನ ಘೋಷಣೆ. ಆ ಘೋಷಣೆ ಸಫಲಗೊಳಿಸುವುದಕ್ಕೆ ಪಕ್ಷ ನಿರಂತರವಾಗಿ ಹೋರಾಟಗಳನ್ನು ಮಾಡಿದೆ. ಧರಣಿ ಸತ್ಯಾಗ್ರಹ, ಪಿಕೆಟಿಂಗ್, ತಾಲ್ಲೂಕು ಕಛೇರಿ ಮುತ್ತಿಗೆಯಂತಹ ಹಲವಾರು ಪ್ರತಿಭಟನಾ ಮೆರವಣಿಗೆಗಳನ್ನು ಮಾಡಿದ ಫಲವಾಗಿ 1991ರಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವವರು ಅರ್ಜಿ ಹಾಕಿಕೊಳ್ಳಲು ಸರ್ಕಾರ ಆದೇಶವನ್ನು ಹೊರಡಿಸಿ ಅದರಂತೆ ಬಾಗೇಪಲ್ಲಿಯಲ್ಲಿ ಮತ್ತು ಗುಡಿಬಂಡೆಯಲ್ಲಿ ಸಾವಿರಾರು ಜನ ಅಕ್ರಮ ಸಾಗುವಳಿದಾರರು ಅರ್ಜಿ ಹಾಕಿಕೊಂಡರು. ಆದರೆ 1991ರಲ್ಲಿ ಬಗರ್ ಹುಕುಂ ಜಮೀನು ವಿತರಣಾ ಸಮಿತಿ ಜಮೀನಿನ ಬಗೆಹರಿಯದ ಜನಸಮಿತಿಯಲ್ಲಿದ್ದರು. ಆದರೆ ಹಣ ಕೊಟ್ಟವರಿಗೆ ಜಮೀನು, ಮುಲಾಜಿಗೆ ಜಮೀನು ಪಡೆದಂತಹ ಹಲವು ಉದಾಹರಣೆಗಳು ನಡೆದುಹೋದವು. ಆದರೆ 8000 ಅರ್ಜಿಗಳು ವಿಲೇವಾರಿ ಮಾಡದೇ ಉಳಿದುಹೋದವು. ಸಮರ್ಥವಾಗಿ ಕೆಲಸ ನಿರ್ವಹಿಸದೆ ಸಾವಿರಾರು ಜನರಿಗೆ ಜಮೀನು ಹಂಚದೆ ಉಳಿದುಹೋದವು. ಆದರೆ 1995ರಲ್ಲಿ ಅಸ್ತಿತ್ವಕ್ಕೆ ಬಂದ ಸಮಿತಿಯಲ್ಲಿ ಭೂಮಿಗಾಗಿ ಹೋರಾಟ ನಡೆಸಿದ ಕಾಂ|| ಸಿ.ಡಿ. ಗಂಗುಲಪ್ಪ, ಕಾಂ. ವಿ. ವೆಂಕಟಸ್ವಾಮಿ ರೆಡ್ಡಿ, ಮಹಮದ್ ಅಕ್ರಮ್ ಮತ್ತು ಬೆಳ್ಳೂರಿನ ರಾದಮ್ಮ ಇವರುಗಳು ರೈತ ಕೃಷಿಕೂಲಿಕಾರರ ಸಾಧಕ ಭಾದಕಗಳ ಬಗ್ಗೆ ಅರಿವಿರುವ ನಾಯಕರುಗಳು. ಅವರ ಜತೆಯಲ್ಲೇ ನಿರಂತರವಾಗಿ ದುಡಿದ ದುರೀಣರು ಬಹಳ ಮುಖ್ಯವಾಗಿ ಬೆಂಗಳೂರಿನವರೆಗೂ ಕೂಲಿಕಾರರ ಜಮೀನಿಲ್ಲದ ದುಡಿಯುವ ಜನತೆಯ ಜೊತೆಗೆ ಕಾಲ್ನಡಿಗೆ ಜಾಥ ಮಾಡಿದ ಯುವ ನಾಯಕ ಕಾಂ। ಜಿ.ವಿ ಶ್ರೀರಾಮರೆಡ್ಡಿಯವರು ಅದಕ್ಕೆ ಅಧ್ಯಕ್ಷರಾಗಿ ಯಾವ ಭೂಮಿಗಾಗಿ ಹೋರಾಟ ಮಾಡಿದರೋ, ಯಾರಿಗಾಗಿ ಹೋರಾಟ ಮಾಡಿದರೋ ಅವರಿಗೆ ಭೂಮಿ ಹಂಚುವ ಕೆಲಸ ಇವರೆಲ್ಲರ ಕೈಗೆ ಬಂದದ್ದು ಸ್ವಾಗತಾರ್ಹವಾದದ್ದು. ಆದ್ದರಿಂದ ಅದರ ಸಾಧಕ ಭಾದಕಗಳು ಗೊತ್ತಿರುವ ಜನ ಇವರಾದ್ದರಿಂದ ಒಂದು ಪೈಸೆ ಖರ್ಚಾಗದೇ ಕೂಲಿಗಾರನಿಗೆ ಜಮೀನು ಸಿಕ್ಕಿತು. ಇಡೀ ಜಿಲ್ಲೆಯಲ್ಲಿ ಯಾವುದೇ ತಾಲ್ಲೂಕಿನಲ್ಲಿ ಹಂಚದಷ್ಟು ಬಾಗೇಪಲ್ಲಿ ಗುಡಿಬಂಡೆಯಲ್ಲಿ ಹಂಚಲಾಗಿದೆ. ಅಷ್ಟೇ ಏಕೆ ಯಾವುದೇ ತಾಲ್ಲೂಕಿನಲ್ಲಿ ವಿಲೇವಾರಿಯಾಗದೆ ಇರುವಂತರ ಅರ್ಜಿಗಳು ಇಲ್ಲಿ ಆಗಿವೆ.ಆದರೆ ಜಮೀನು ಕೊಡದೆ ತಿರಸ್ಕರಿಸಿದಂತಹ ಅರ್ಜಿಗಳನ್ನೂ ಸಹ ವಿಲೇವಾರಿಯಂದಾಗುತ್ತದೆ. ಅವೆಲ್ಲವನ್ನು ಸೇರಿಸಿ ವಿಲೇವಾರಿಯೆಂದು ಗುರುತಿಸಲಾಗಿದೆ. ಆದರೆ ಬಾಗೇಪಲ್ಲಿ ಮತ್ತು ಗುಡಿಬಂಡೆಗಳಲ್ಲಿ ಆ ರೀತಿಯಲ್ಲಿ ಆಗಿಲ್ಲ. ಕೆರೆಯ ಅಂಗಳ, ಗುಂಡು ತೋಪುಗಳಂತಹ ಭೂಮಿ ಬಿಟ್ಟರೆ ಮಿಕ್ಕೆಲ್ಲ ಜಮೀನುಗಳನ್ನು ಅರ್ಜಿ ಹಾಕಿದ ಎಲ್ಲರಿಗೂ ಜಮೀನು ಹಂಚಲಾಗಿದೆ. ಅರ್ಜಿ ಹಾಕಿದ ನ್ಯಾಯಬದ್ಧ ಅರ್ಜಿದಾರರಿಗೆ ಜಮೀನು ಹಂಚುವುದು ಹಾಗೂ ಅತಿ ಹೆಚ್ಚಿನ ಅರ್ಜಿಗಳು ವಿಲೇವಾರಿಯಾಗುವುದರ ವಿವರಗಳು ಸಾಗುವಳಿ ಚೀಟಿಗಳ ವಿತರಣಾ ಸಮಾರಂಭದಲ್ಲಿ ತಾಲ್ಲೂಕು ತಹಸಿಲ್ದಾರ್ ರವರು ತಿಳಿಸಿದ್ದಾರೆ. ಅಷ್ಟೇ ಮುಖ್ಯವಾಗಿ ಸಂಬಂದಪಟ್ಟ ಅಧಿಕಾರಿಗಳು ಸಮರ್ಥವಾಗಿ ಅತಿ ಜರೂರಾಗಿ ಕಡತಗಳನ್ನು ಪರಿಶೀಲಿಸಿ ವಿಲೇವಾರಿ ಮಾಡಿರುವುದು ಅಭಿನಂದನಾರ್ಹ.

(ಮುಂದುವರಿಯುವುದು)

ರಾಜಕಾರಣಿಗಳ ಚುನಾವಣಾ ವಲಸೆ ಆರಂಭ

13ನೇ ಲೋಕಸಭೆಗೆ ಚುನಾವಣೆಗಳ ಘೋಷಣೆಯಾಗುತ್ತಿದ್ದಂತೆ ಮತ್ತೆ ಒಂದು ಪಕ್ಷದಿಂದ ಇನ್ನೊಂದಕ್ಕೆ ಹಾರುವ ಬೂರ್ಜ್ವಾ, ಭೂಮಾಲಕ ರಾಜಕಾರಣಿಗಳ ಚುನಾವಣಾ ತಿರುಗಾಟ ಆರಂಭವಾಗಿದೆ. ಕರ್ನಾಟಕದ ಬಿಜೆಪಿ ಮುಖಂಡರ ಪ್ರಕಾರ ದೇಶಾದ್ಯಂತ ಬೇರೆ-ಬೇರೆ ಪಕ್ಷಗಳ ರಾಜಕಾರಣಿಗಳೆಲ್ಲಾ ಬಿಜೆಪಿಯತ್ತವೇ ಧಾವಿಸುತ್ತಿದ್ದಾರಂತೆ. 1996 ರಲ್ಲಿ ಹೀಗೆ 'ಧಾವಿಸಿ' ಬಂದವರಲ್ಲಿ ಎಷ್ಟು ಮಂದಿ ಈಗಲೂ ಬಿಜೆಪಿಯಲ್ಲಿ ಉಳಿದಿದ್ದಾರೆ ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಆದರೆ ಬೂರ್ಜ್ವಾ-ಭೂಮಾಲಕ ರಾಜಕಾರಣಿಗಳ ಈ ಚುನಾವಣಾ ತಿರುಗಾಟ ಬಿಜೆಪಿಯತ್ತವೇ ಮಾತ್ರವಲ್ಲ, ಬಿಜೆಪಿಯಿಂದ ಬೇರೆ ಪಕ್ಷಗಳತ್ತಲೂ ಇದೆ ಎಂದು ಕಳೆದ ಒಂದು ವಾರದ ಪತ್ರಿಕೆಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಕೆಲವು ಉದಾಹರಣೆಗಳನ್ನು ನೋಡಿ-

ಬಿಜೆಪಿಯ ಭದ್ರಕೋಟೆಯೆನಿಸಿದ ಉತ್ತರ ಪ್ರದೇಶದಲ್ಲಿ ರಾಮ್ ಬರೇಲಿಯ ಹಾಲಿ ಎಂ.ಪಿ. ಅಶೋಕ್ ಸಿಂಗ್ (ಅಲ್ಲಿಂದ ಎರಡು ಬಾರಿ ಗೆದ್ದ ವ್ಯಕ್ತಿ) ಕಾಂಗ್ರೆಸ್(ಐ) ಸೇರಿದ್ದಾರೆ. ಕಾರ್ಗಿಲ್ ಮತ್ತು ಆರ್.ಎಸ್.ಎಸ್. ತನ್ನ ನಿರ್ಧಾರಕ್ಕೆ ಕಾರಣ ಎಂದು ಅವರು ಹೇಳಿದ್ದಾರೆ. ನಂತರ ಬಿಜೆಪಿಯ ಒಬ್ಬ ಎಂ.ಎಲ್.ಎ.(ಈಕೆ ಮಾಜಿ ಮಂತ್ರಿಯೂ ಕೂಡಾ) ಶ್ರೀಮತಿ ರಾಜ್ ರಾಯ್ ಸಿಂಗ್ ಹಾಗೂ ಕಲ್ಯಾಣ್ ಸಿಂಗ್ ಮಂತ್ರಿಮಂಡಳದ ಇನ್ನೊಬ್ಬ ಮಾಜಿ ಮಂತ್ರಿ ಹಾಗೂ ಬಿ.ಎಸ್.ಪಿ.ಯಿಂದ ಒಡೆದು ಹೋಗಿ ಬಿಜೆಪಿಗೆ ಬೆಂಬಲ ನೀಡಿದ ಬಣದ ಎಂ.ಎಲ್.ಎ. ಶಿವನಗೇರ್ ಲೋಧಿ ಕಾಂಗ್ರೆಸ್ ಸೇರಿದ್ದಾರೆಂದು ವರದಿಯಾಗಿದೆ.

ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನೆಯ ಮಂತ್ರಿಮಂಡಲದ ಕನಿಷ್ಠ ನಾಲ್ಕು ಪಕ್ಷೇತರ ಮಂತ್ರಿಗಳು ಆ ಕೂಟವನ್ನು ಬಿಟ್ಟು ಶರದ್ ಪವಾರ್‌ರವರ ಪಕ್ಷಕ್ಕೆ ಸೇರುವ ಸೂಚನೆಯಿದೆಯಂತೆ. ಅನಿಲ್ ದೇಶ್‌ಮುಖ್ (ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ), ತುಕಾರಾಂ ಧಿಘೋಳೆ(ವಿದ್ಯುತ್ ಇಲಾಖೆ), ಶಿವಾಜಿರಾವ್ ನಾಯಕ್ (ಸಾರ್ವಜನಿಕ ಕಾಮಗಾರಿ ಇಲಾಖೆ) ಮತ್ತು ವಿಜಯಕುಮಾರ್ ಗವಿತ್(ವೈದ್ಯಕೀಯ ಶಿಕ್ಷಣ) ಇವರೇ ಈ ನಾಲ್ವರು ಮಂತ್ರಿಗಳು. ಜತೆಗೆ ಮೂವರು ಹಿರಿಯ ಬಿಜೆಪಿ ಮುಖಂಡರು-ಮಾಜಿ ಸಂಸತ್ ಸದಸ್ಯ ರಾಜಭಾವ ಠಾಕ್ರೆ, ಶಾಸಕರಾದ ಎ.ಟಿ.ಪವಾರ್ ಮತ್ತು ಗೋವಿಂದ ರಾಜ್ ಚೌಧುರಿ ಕೂಡಾ ಕಾಂಗ್ರೆಸ್(ಐ) ಸೇರಲಿದ್ದಾರೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ. ಶಿವಸೇನೆಗೆ ಸೇರಿದ್ದ ಪ್ರಸಾದ್ ಹೀರೇ ಕೂಡಾ ಕಾಂಗ್ರೆಸ್(ಐ) ಸೇರುತ್ತಾರಂತೆ.

ಇನ್ನು ಅವರ 'ಮಿತ್ರ'ರಿರುವ ರಾಜ್ಯಗಳಲ್ಲಿನ ಸ್ಥಿತಿ ಏನು? ಆಂಧ್ರಪ್ರದೇಶದಲ್ಲಿ ಕನಿಷ್ಟ 15 ಸ್ಥಾನಗಳು ತನಗೆ ಬೇಕೆಂದು ಬಿಜೆಪಿ ಚಂದ್ರಬಾಬು ನಾಯ್ಡುರವರನ್ನು ಕೇಳಿದೆಯಂತೆ. ಆದರೆ ಅವರು 8 ಕ್ಕಿಂತ ಹೆಚ್ಚು ಸ್ಥಾನ ಬಿಟ್ಟುಕೊಡಲು ಸಿದ್ಧರಿದ್ದಂತಿಲ್ಲ. ಬಿಜೆಪಿ ಜುಲೈ 19 ರ ರೊಳಗೆ ಸೀಟು ಹೊಂದಾಣಿಕೆ ಬಗ್ಗೆ ತಿಳಿಸಬೇಕು, ಇಲ್ಲವಾದರೆ ತಾವು ಸ್ವತಂತ್ರವಾಗಿ ಸ್ಪರ್ಧಿಸುತ್ತೇವೆ ಎಂಬ ಸಮಯಮಿತಿಯ ಬೆದರಿಕೆ ಇದುವರೆಗೆ ನಡೆದಿಲ್ಲ. ಬಿಜೆಪಿಯ ಎನ್.ಡಿ.ಎ. ಸೇರುವ ಬಗ್ಗೆಯೂ ನಾಯ್ಡು ಇನ್ನೂ ಏನೂ ಹೇಳಲಾರದ ಸ್ಥಿತಿಯಲ್ಲಿದ್ದಂತಿದೆ. ಈ ಸನ್ನಿವೇಶದಲ್ಲಿ ಬಿಜೆಪಿ ಮುಖಂಡರು ತಮ್ಮ 'ಬೆದರಿಕೆ'ಯ ಮಾತುಗಳನ್ನು ತಾವೇ ನುಂಗಿಕೊಳ್ಳುವಂತಾಗಿದೆ.

ಅತ್ತ ಪಶ್ಚಿಮ ಬಂಗಾಳದ ಅವರ ಮಿತ್ರರಿಂದಲೂ ಇಂತಹುದೇ ನಿಲುವನ್ನು ಬಿಜೆಪಿ ಎದುರಿಸಬೇಕಾಗಿ ಬಂದಿದೆ. ಬಾಂಕುರಾ ಮತ್ತು ಮಿಡ್ನಾಪುರ ಸೀಟ್‌ಗಳು ಬಿಜೆಪಿಗೆ ಬೇಕಂತೆ. ತೃಣಮೂಲ ಕಾಂಗ್ರೆಸ್ ಅದನ್ನು ಬಿಟ್ಟುಕೊಡಲು ಸಿದ್ಧವಿಲ್ಲ.

ಕಾರ್ಗಿಲ್ ವೀರರ ಬಗ್ಗೆ ಬಿಜೆಪಿಯದ್ದು ಮೊಸಳೆ ಕಣ್ಣೀರು
ಉತ್ತರ ಪ್ರದೇಶದಿಂದ ಒಂದು ಉದಾಹರಣೆ

'ಬಿಜೆಪಿ ಚುನಾವಣಾ ಪ್ರಚಾರದ ಬಸ್ಸನ್ನು ಕಾರ್ಗಿಲ್ ವಿಜಯದ ಡೀಸೆಲ್‌ನಿಂದ ನಡೆಸಲಿದೆ' ಇದು ಬಿಜೆಪಿ ಪರ ಪತ್ರಿಕೆಯೊಂದರ ಶಿರೋನಾಮೆ. ಆದರೆ ಉತ್ತರ ಪ್ರದೇಶದಲ್ಲಿ ಈ ಡೀಸೆಲ್ ಬದಲಿಸಿ ಕೋಮುವಾದದ ಶುದ್ಧ ಸೀಮೆಎಣ್ಣೆಯಿಂದಲೇ ಇದು ನಡೆಯಬೇಕೋ ಏನೋ. ಏಕೆಂದರೆ ಅಲ್ಲಿ ಕಲ್ಯಾಣ್‌ಸಿಂಗ್ ಮಂತ್ರಿಮಂಡಳದ ಒಬ್ಬ ಮಂತ್ರಿ ಸೇನಾಧಿಕಾರಿಯೊಬ್ಬರ ಮನೆಯ ಮೇಲೆಯೆ ಕಬ್ಜಾ ನಡೆಸಿ ಆ ಅಧಿಕಾರಿಯ ಕುಟುಂಬದ ಬದುಕನ್ನು ಸಂಕಷ್ಟಮಯಗೊಳಿಸಿದ್ದಾರೆ.

ಕ್ಯಾಪ್ಟನ್ ಟಂಡನ್‌ರ ಕುಟುಂಬ ಲಕ್ನೌನಲ್ಲಿ ವಾಸವಾಗಿದೆ. ಅವರ ನಿವಾಸದ ಕುರಿತು ವಾಜ್ಯವಿದ್ದು ಅದಕ್ಕೀಗ ತಡೆಯಾಜ್ಞೆಯಿತ್ತು. ಆದರೆ ಈ ತಡೆಯಾಜ್ಞೆಯನ್ನು ಉಲ್ಲಂಘಿಸಿ ಕಲ್ಯಾಣ್ ಸಿಂಗ್‌ರ ಸಹದ್ಯೋಗಿ ಕೃಷಿ ಶಿಕ್ಷಣ ರಾಜ್ಯ ಮಂತ್ರಿ ಖಿಗ್ವಾನ್ ಸಿಂಗ್ ಶಕ್ಯ ಎಂಬಾತನ ಸಂಬಂಧಿ ಜಿತೇಂದ್ರ ಗುಪ್ತ ಮಂತ್ರಿಗಳ ಕಾರಿನಲ್ಲೇ ಬಂದು ಕಾನೂನುಬಾಹಿರವಾಗಿ ಕ್ಯಾಪ್ಟನ್ ಟಂಡನ್‌ರ ಕುಟುಂಬ ವಾಸವಾಗಿರುವ ಮನೆಯ ಒಂದು ಭಾಗವನ್ನು ಆಕ್ರಮಿಸಿ ಕಿರುಕುಳ ಕೊಡುತ್ತಿದ್ದಾರೆ. ಬೇಸತ್ತ ಕ್ಯಾಪ್ಟನ್ ಟಂಡನ್‌ರ ಪತ್ನಿ ಸೇನೆಯ ಸೆಂಟ್ರಲ್ ಕಮಾಂಡಿನ ಮುಖ್ಯಸ್ಥರಿಗೆ, ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ, ಪೋಲೀಸ್ ಮಹಾ ನಿರ್ದೇಶಕರಿಗೆ, ಲಕ್ನೌ ನಗರದ ಪೋಲೀಸ್ ಸೂಪರಿಂಟೆಂಡೆಂಟ್‌ರಿಗೆ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ತನ್ನ ಅಹವಾಲು ಕಳಿಸಿದ್ದಾರೆ.

ರಕ್ಷಣಾಮಂತ್ರಿಗಳನ್ನು ಸಂದರ್ಶವೊಂದರಲ್ಲಿ ಈ ಬಗ್ಗೆ ಕೇಳಿದಾಗ ಅಸಹಾಯಕರಾದಂತೆ ಉತ್ತರ ಕೊಟ್ಟರು. ನಮ್ಮ ವೀರಸೈನಿಕರು ಗಳಿಸಿದ ಕಾರ್ಗಿಲ್ ವಿಜಯವನ್ನು ತಮ್ಮದಾಗಿಸಿಕೊಳ್ಳಲು ಬಿಜೆಪಿ ಮಂದಿಗೆ ಯಾವ ನೈತಿಕ ಹಕ್ಕೂ ಇಲ್ಲ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆಯಲ್ಲವೇ?

'ಗಣಶಕ್ತಿ'ಯ ಟೆಲಿಮ್ಯಾಗಝಿನ್ ಆರಂಭ

ಪಶ್ಚಿಮ ಬಂಗಾಳದ ದುಡಿಯುವ ಜನರ ದಿನಪತ್ರಿಕೆ 'ಗಣಶಕ್ತಿ' ಟೆಲಿವಿಶನ್ ಕಾರ್ಯಕ್ರಮವೊಂದನ್ನು ಜುಲೈ 24 ರಿಂದ ಆರಂಭಿಸುತ್ತಿದೆ. ಇದರ ಹೆಸರು 'ಐ ಸಮಯ್'. ಎ.ಟಿ.ಎನ್. ಬಾಂಗ್ಲಾ ಚಾನೆಲ್‌ನ್ನು ಪ್ರತಿ ಮಂಗಳವಾರ 6 ರಿಂದ ಹಾಗೂ ಪ್ರತಿ ಶನಿವಾರ ಮಧ್ಯಾಹ್ನ 2 ಗಂಟೆಯಿಂದ ಈ ಕಾರ್ಯಕ್ರಮವಿರುತ್ತದೆ. ಅಲ್ಲದೆ ಇನ್ನೊಂದು ಚಾನೆಲ್ ಸಿ.ಟಿ.ವಿ.ಎನ್.ನಲ್ಲಿ ಪ್ರತಿ ಗುರುವಾರ ರಾತ್ರಿ 10 ಗಂಟೆಯಿಂದ ಹಾಗೂ ಪ್ರತಿ ಶನಿವಾರ ರಾತ್ರಿ 10.30 ಕ್ಕೆ ಅರ್ಧ ಗಂಟೆಯ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತದೆ.

ಪಶ್ಚಿಮ ಬಂಗಾಳದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನಗಳ ಬದುಕು; ಪ್ರಸಕ್ತ ವಿದ್ಯಮಾನಗಳು, ರಾಜಕಾರಣಿಗಳು, ಆರ್ಥಿಕತಜ್ಞರು, ಸಮಾಜಶಾಸ್ತ್ರಜ್ಞರು ಇತ್ಯಾದಿಯವರೊಂದಿಗೆ ಸಂದರ್ಶನ, ಪರಿಣತರ ಚರ್ಚೆ ಇತ್ಯಾದಿಗಳು ಈ ಕಾರ್ಯಕ್ರಮದಲ್ಲಿರುತ್ತವೆ.

ಸ್ಥಳೀಯ ಟಿ.ವಿ. ಧಾರವಾಹಿಗಳಲ್ಲಿ ಜನಪ್ರಿಯ ಕಲಾವಿದ ಸವ್ಯಸಾಚಿ ಚಕ್ರವರ್ತಿ ಈ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ನಿವೃತ್ತ ಸೇನಾಧಿಪತಿ ಶಂಕರ್ ರಾಯ್ ಚೌಧುರಿ, ಪ್ರಖ್ಯಾತ ಕಾದಂಬರಿಕಾರ ಸುನಿಲ್ ಗಂಗೋಪಾಧ್ಯಾಯ, ಕೈಗಾರಿಕೋದ್ಯಮಿ ಹರ್ಷ್ ನೇವಟಿಯ, ಚಿತ್ರ ನಿರ್ದೇಶಕ ಗೌತಮ್ ಘೋಷ, ಚಿತ್ರನಟಿ ಇಂದ್ರಾಣಿ ಹಲ್ದರ್, ಶಿಕ್ಷಣ ತಜ್ಞ ಪಬಿತ್ರ ಸರ್ಕಾರ್ ಮುಂತಾದವರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

(ಗಣಶಕ್ತಿ ಆನ್‌ಲೈನ್)

13ನೇ ಲೋಕಸಭಾ ಚುನಾವಣೆಗಳಲ್ಲಿ ಮಹಿಳೆಯರ ಪ್ರಶ್ನೆಗಳು

ಎಲ್ಲಾ ರಾಜಕೀಯ ಪಕ್ಷಗಳಿಗೆ ಮಹಿಳಾ ಸಂಘಟನೆಗಳ ಜಂಟಿ ಮನವಿ

ಜೂನ್ 29 ರಂದು ಮಹಿಳಾ ಸಂಘಟನೆಗಳ ನಿಯೋಗವೊಂದು ಬಿಜೆಪಿ, ಕಾಂಗ್ರೆಸ್, ಸಿಪಿಐ, ಸಿಪಿಐ(ಎಂ), ಜನತಾದಳ ಮತ್ತು ಇತರ ಪಕ್ಷಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ ಮುಂಬರುವ ಚುನಾವಣೆಗಳಲ್ಲಿ ಮಹಿಳೆಯರನ್ನು ಬಾಧಿಸುವ ಪ್ರಶ್ನೆಗಳು, ಆತಂಕಗಳ ಬಗ್ಗೆ ಒಂದು ಮನವಿ ಪತ್ರವನ್ನು ಸಲ್ಲಿಸಿತು. ಈ ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳಲ್ಲಿ ಈ ಪ್ರಶ್ನೆಗಳು ಬಿಂಬಿತಗೊಳ್ಳಲಿ, ಜವಾಬುದಾರಿಕೆಯ ಪ್ರಕ್ರಿಯೆ ಬಲಗೊಳ್ಳಲಿ ಎಂಬುದು ಇದರ ಉದ್ದೇಶ ಎಂದು ಮಹಿಳಾ ಸಂಘಟನೆಗಳು ತಿಳಿಸಿವೆ.

ಕಳೆದ ಚುನಾವಣೆಗಳಲ್ಲಿ ಮಹಿಳಾ ಮೀಸಲಾತಿ ಬಗ್ಗೆ ರಾಜಕೀಯ ಪಕ್ಷಗಳು ನೀಡಿದ ಭರವಸೆಗಳು ಹುಸಿಯಾದ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ಗಂಭೀರವಾಗಿ ತಗೊಳ್ಳುತ್ತವೆ ಎಂಬ ಬಗ್ಗೆ ಮಹಿಳೆಯರಲ್ಲಿದ್ದ ವಿಶ್ವಾಸ ಕುಂಠಿತಗೊಂಡಿದೆ ಎಂದು ಹೇಳಿರುವ ಈ ಮನವಿ ಪತ್ರ 'ನಾಗರೀಕರಾಗಿ ನಮಗೆ ವ್ಯಾಪಕವಾದ ಆತಂಕಗಳಿವೆ, ಅವು ನಿಮ್ಮ ಪ್ರಣಾಳಿಕೆಗಳಲ್ಲಿ ಬಿಂಬಿತಗೊಳ್ಳಬೇಕು' ಎಂದಿವೆ.

ಪ್ರಣಾಳಿಕೆಗಳಲ್ಲಿ ಕೇವಲ 'ಮಹಿಳೆಯರು' ಎಂಬ ಪ್ರತ್ಯೇಕ ಶಿರೋನಾಮೆ ಕೊಟ್ಟು ಏನೋ ಬರೆದರಷ್ಟೇ ಸಾಲದು "ನೀವು ಜಾರಿಗೆ ತರಬಯಸುವ ಪ್ರತಿ ಧೋರಣೆಯಲ್ಲೂ ಮಹಿಳೆಯರ ಆತಂಕಗಳನ್ನ ಕುರಿತಂತೆ ನಿರ್ದಿಷ್ಟ ಆಶ್ವಾಸನೆಗಳಿರಬೇಕು. ಉದಾಹರಣೆಗೆ, ಆರ್ಥಿಕ ನೀತಿಗಳು, ಶಿಕ್ಷಣ, ಆರೋಗ್ಯ ಮತ್ತಿತರ ಪ್ರಮುಖ ಪ್ರಶ್ನೆಗಳಲ್ಲಿ' ಎಂದು ಮನವಿ ಹೇಳಿದೆ.

ಹೋರಾಟ ನಿರತ ಮಹಿಳಾ ಸಂಘಟನೆಗಳ ಪ್ರಣಾಳಿಕೆಯಂತೆಯೇ ಇರುವ ಈ ಮನವಿ ಪತ್ರ ಜಾತ್ಯಾತೀತತೆಗೆ ಬದ್ಧತೆ, ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ, ಪರಮಾಣು ಶಸ್ತ್ರೀಕರಣ ಮಾಡುವುದಿಲ್ಲ ಎಂಬ ಆಶ್ವಾಸನೆ, ಅಸಮಾನ ಸಂಧಿಗಳಿಗೆ ಸಹಿ ಹಾಕಬೇಕೆಂಬ ಪಾಶ್ಚಿಮಾತ್ಯ ದೇಶಗಳ ಒತ್ತಡಕ್ಕೆ ಪ್ರತಿರೋಧ, ಮಹಿಳೆಯರ ಮೇಲೆ ಭಾರೀ ಪ್ರತಿಕೂಲ ಪರಿಣಾಮ ಬೀರಿರುವ 'ಸಂರಚನಾ ಹೊಂದಾಣಿಕೆ ಕಾರ್ಯಕ್ರಮಗಳ' ರದ್ಧತಿ, ರಾಜ್ಯ ಸರಕಾರಗಳಿಗೆ ಮಾರ್ಗದರ್ಶನ ನೀಡಲು ಒಂದು ಸಮಗ್ರ ಮದ್ಯ-ವಿರೋಧಿ ಧೋರಣೆ, ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರ, ಬಹುರಾಷ್ಟ್ರೀಯ ಕಂಪನಿಗಳು, ವಿಶ್ವ ವ್ಯಾಪಾರ ಸಂಘಟನೆಯ ಶರತ್ತುಗಳಿಂದ ದೇಶದ ಸಾರ್ವಭೌಮತೆಯ ರಕ್ಷಣೆಯ ಆಶ್ವಾಸನೆ, ಅಸ್ಪೃಶ್ಯತೆ, ಜಾತಿ ಪದ್ಧತಿಯ ನಿರ್ಮೂಲನದ ಆಶ್ವಾಸನೆ ಇತ್ಯಾದಿಗಳ ಪ್ರಸ್ತಾಪ ಮಾಡಿದೆ. ಮಹಿಳೆಯರಿಗೆ ಈ ಚುನಾವಣೆಗಳಲ್ಲಿ ಹೆಚ್ಚು ಸ್ಥಾನಗಳನ್ನು ನೀಡಿ ಇದುವರೆಗೆ ಆಗಿರುವ ಅನ್ಯಾಯಗಳನ್ನು ಪರಿಗಣಿಸಬೇಕು ಎಂದು ಮನವಿ ಪತ್ರ ರಾಜಕೀಯ ಪಕ್ಷಗಳನ್ನು ಕೇಳಿದೆ.

ಜನವಾದಿ ಮಹಿಳಾ ಸಂಘಟನೆಯ ಬೃಂದಾ ಕಾರಟ್, ಎ.ಐ.ಡಬ್ಲ್ಯು.ಸಿ.ನ ಗೋಮತಿ ನಾಯರ್ ಮತ್ತಿತರ ಒಟ್ಟು 7 ಮಹಿಳಾ ಸಂಘಟನೆಗಳ ಮುಖಂಡರು ಈ ಮನವಿ ಪತ್ರಕ್ಕೆ ಸಹಿ ಮಾಡಿದ್ದಾರೆ.

ಇದಕ್ಕೆ ಮೊದಲು ಈ ನಿಯೋಗ ಜೂನ್ 22 ರಂದು ಮುಖ್ಯ ಚುನಾವಣಾ ಆಯುಕ್ತ ಡಾ. ಎಂ.ಎಸ್ ಗಿಲ್‌ರನ್ನು ಭೇಟಿಯಾಗಿತ್ತು. ಅವರು ಮುಂಬರುವ ಚುನಾವಣೆಗಳಲ್ಲಿ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುವ ನೀತಿ ಸಂಹಿತೆ ರೂಪಿಸುವುದಾಗಿ ಭರವಸೆ ನೀಡಿದರು.

ಮಹಿಳಾ ಸಂಘಟನೆಗಳು ನೀಡಿದ ಒಂದು ಸೂಚನೆಯೆಂದರೆ ಚುನಾವಣಾ ಪ್ರಚಾರದ ಸಮಯದಲ್ಲಿ ಸಾರ್ವಜನಿಕ ಸ್ಥಳಗಳನ್ನು ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳ ಬಳಕೆಗೆ ಮಾತ್ರ ಕೊಡಬೇಕು. ಧಾರ್ಮಿಕ ಸಂಘಟನೆಗಳಿಗೆ ಕೊಡಬಾರದು, ಮಹಿಳೆಯರ ಘನತೆಗೆ ಕುಂದು ತರುವ ಮಾತುಗಳನ್ನು ಚುನಾವಣಾ ಪ್ರಚಾರದಲ್ಲಿ ಬಳಸುವವರನ್ನು ಚುನಾವಣೆಯಲ್ಲಿ ಭಾಗವಹಿಸುವುದರಿಂದ ಅನರ್ಹಗೊಳಿಸಬೇಕು, ಮಹಿಳೆಯರ ಮೇಲೆ ಅಪರಾಧ ಎಸಗಿದವರು, ಅಥವಾ ಅದಕ್ಕೆ ಪ್ರೋತ್ಸಾಹ ನೀಡಿದವರು ಚುನಾವಣೆಗೆ ಸ್ಪರ್ಧಿಸದಂತೆ ಮಾಡಬೇಕು ಇತ್ಯಾದಿ ಸೂಚನೆಗಳನ್ನು ನಿಯೋಗ ಚುನಾವಣಾ ಆಯೋಗದ ಮುಂದಿಟ್ಟಿತು.

ಪಶ್ಚಿಮ ಬಂಗಾಳದಿಂದ ರಾಜ್ಯಸಭೆಗೆ ಮಾಜಿ ಸೇನಾಧಿಪತಿ ಆಯ್ಕೆ-ಎಡರಂಗದ ಬೆಂಬಲ

ಜುಲೈ 17 ರಂದು ಪಶ್ಚಿಮ ಬಂಗಾಳದಿಂದ ರಾಜ್ಯ ಸಭೆಗೆ ಆರಿಸಿಬಂದಿರುವ 6 ಮಂದಿಯಲ್ಲಿ 4 ಎಡರಂಗದ ಅಭ್ಯರ್ಥಿಗಳು, ಒಬ್ಬರು ಎಡರಂಗ ಬೆಂಬಲಿತ ಅಭ್ಯರ್ಥಿ ಹಾಗೂ ಇನ್ನೊಬ್ಬರು ಕಾಂಗ್ರೆಸ್(ಐ) ನವರು.

ಸಿಪಿಐ(ಎಂ) ನ ಸರಳಾ ಮಹೇಶ್ವರಿ, ಚಂದ್ರಕಲಾ ಪಾಂಡೆ ಹಾಗೂ ಜೀಬನ್ ರಾಯ್ ಮತ್ತು ಆರ್.ಎಸ್.ಪಿ. ಯ ಅಬನಿ ರಾಯ್ ಇನ್ನೊಂದು ಸ್ಥಾನಕ್ಕೆ ಭಾರತೀಯ ಸಶಸ್ತ್ರ ಪಡೆಗಳ ಸೇನಾಧಿಪತಿಯಾಗಿದ್ದ ಜನರಲ್ ಶಂಕರ್‌ರಾಯ್ ಚೌಧುರಿಯವರನ್ನು ಬೆಂಬಲಿಸಿತ್ತು. ಆರಂಭದಲ್ಲಿ ಮೀನ-ಮೇಷ ಎಣಿಸಿದ ಕಾಂಗ್ರೆಸ್ ಕೂಡಾ ನಂತರ ಅವರನ್ನು ಬೆಂಬಲಿಸಬೇಕಾಯಿತು. ಕಾಂಗ್ರೆಸ್‌ನಿಂದ ಆಯ್ಕೆಯಾದರವರೆಂದರೆ ಮಾಜಿ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ.



ಜಾತ್ಯಾತೀತತೆಗೆ ಆದ್ಯತೆ ಎನ್ನುತ್ತಾರೆ ಜನರಲ್ ರಾಯ್ ಚೌಧುರಿ

ಭಾರತೀಯ ಸಶಸ್ತ್ರ ಪಡೆಗಳ ಮುಖ್ಯಸ್ಥರಾಗಿದ್ದ ಜನರಲ್ ರಾಯ್ ಚೌಧುರಿ ಈಗ ರಾಜ್ಯಸಭಾ ಸದಸ್ಯರಾಗಿದ್ದಾರೆ. ಎಡರಂಗ ಅವರಿಗೆ ಬೆಂಬಲ ನೀಡಿತ್ತು. ನಂತರ ಕಾಂಗ್ರೆಸ್ ಕೂಡಾ ಬೆಂಬಲ ನೀಡಿತು. ರಾಜ್ಯ ಸಭೆಯಲ್ಲಿ ಅವರು ಮಿಲಿಟರಿ ವ್ಯವಹಾರಗಳ ಬಗ್ಗೆಯಂತೂ ಮಾತನಾಡುತ್ತಾರೆ. ಜಾತ್ಯಾತೀತತೆ, ಉದಾರೀಕರಣ ಇತ್ಯಾದಿಗಳ ಬಗ್ಗೆ ಅವರ ನಿಲುವೇನು? ಇದು ಒಬ್ಬ ಮಾಜಿ ಸೇನಾದಿಪತಿಯ ಸಂದರ್ಭದಲ್ಲಿ ಎಲ್ಲರಿಗೂ ಇರುವ ಜಿಜ್ಞಾಸೆ.

ಭಾರತದ ರಾಜಕೀಯ ವ್ಯವಸ್ಥೆಯ ಬಹುಭಾಷಾ, ಬಹುಜನಾಂಗೀಯ , ಬಹುಧರ್ಮೀಯ ಸ್ವರೂಪವನ್ನು ಉಳಿಸಿಕೊಳ್ಳಲು ಏನೇ ಬೆಲೆ ತೆತ್ತರೂ ಕಮ್ಮಿಯೇ - ಇದು ಅವರ ಸ್ಪಷ್ಟ ನಿಲುವು. ಇತ್ತೀಚೆಗೆ ಕಾರ್ಗಿಲ್ ಮತ್ತಿತರ ಕಡೆಗಳಲ್ಲಿ ಭಾರತ-ಪಾಕಿಸ್ತಾನ ಘರ್ಷಣೆಯ ವೇಳೆಗೆ ರಾಷ್ಟ್ರೀಯ ಐಕ್ಯತೆ ಸ್ಪಷ್ಟವಾಗಿ ಕಂಡುಬಂದಿದೆ. ಭಾರತದ ಈ ವಿಶಿಷ್ಟ ಐಕ್ಯತೆಯನ್ನು ಯುದ್ಧ ಪರಿಸ್ಥಿತಿಗಳಲ್ಲಿ ಯುದ್ಧದಂತಹ ಪರಿಸ್ಥಿತಿಗಳಲ್ಲಿ ಮಾತ್ರವಲ್ಲ ಶಾಂತಿಸಮಯದಲ್ಲೂ ಉಳಿಸಿಕೊಳ್ಳಬೇಕು ಎಂದಿದ್ದಾರೆ ಜನರಲ್ ರಾಯ್ ಚೌಧುರಿ. 'ಗಣಶಕ್ತಿ'ಯ ಪ್ರತಿನಿಧಿಯೊಂದಿಗೆ ಮಾತನಾಡುತ್ತಾ ಅವರು ಈ ವಿಷಯ ತಿಳಿಸಿದರು.

ಹೌದು, ವಿವಿಧ ವಿಭಾಗಗಳ ನಡುವೆ ತಿಕ್ಕಾಟಗಳು ಗಲಭೆಗಳು ನಡೆಯುತ್ತಿವೆ. ಇದಕ್ಕೆ ಒಂದು ಪರಿಹಾರವೆಂದರೆ ರಾಜಕೀಯ ಪಕ್ಷಗಳು ಕೋಮುಸೌಹಾರ್ದದ ಪ್ರಚಾರ ನಡೆಸುವುದು. ಧರ್ಮ ಎಂಬುದು ಮನುಷ್ಯನ ವೈಯಕ್ತಿಕ ಜೀವನದಲ್ಲಿ ಒಂದು ಮುಖ್ಯ ಅಂಶವಿರಬಹುದು. ಆದರೆ ಅದನ್ನು ರಾಜಕೀಯದಲ್ಲಿ, ಆಡಳಿತದಲ್ಲಿ ಬೆರಸಲಾಗದು. ಬಾಬ್ರಿ ಮಸೀದಿ ಧ್ವಂಸ ಮಾಡಿದ್ದು ಒಂದು 'ಮೂರ್ಖಕೃತ್ಯ' ಎಂದು ಅವರು ಆರ್.ಎಸ್.ಎಸ್. ಈ ಧ್ವಂಸ ಕಾರ್ಯ ನಡೆಸಿತು ಎಂದು ಹೇಳಲು ಹಿಂಜರಿಯಲಿಲ್ಲ. ವಾಜಪೇಯಿ ಮತ್ತು ಜಸ್ವಂತ್ ಸಿಂಗ್ ಕೋಮುವಾದಿಗಳಲ್ಲ ಎಂದು ಅವರು ಅಭಿಪ್ರಾಯಪಟ್ಟಿರುವುದಾಗಿ ಕೆಲವು ಪತ್ರಿಕೆಗಳು ಸುದ್ದಿ ಪ್ರಕಟಿಸಿವೆ. ಇದನ್ನು ಕುರಿತಂತೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಮತ್ತು ಕೇಂದ್ರ ಗೃಹಮಂತ್ರಿ ಅಡ್ವಾಣಿಯವರ ಬಗ್ಗೆ ಅಭಿಪ್ರಾಯವೇನು, ಅವರ ಮೇಲೆ ಬಾಬ್ರಿ ಮಸೀದಿ ಧ್ವಂಸದ ಚಾರ್ಜ್‌ಶೀಟ್ ಆಗಿದೆಯಲ್ಲ ಎಂದು ಕೇಳಿದಾಗ ಜನರಲ್ ರಾಯ್ ಚೌಧುರಿ ತಾನು

ಪುಟ 11 ನೋಡಿ

ಮುಜಾಹಿದ್ದೀನ್: ಸಿಐಎ-ಐಎಸ್‌ಐಗಳ ಕೂಸು

'ಮುಜಾಹಿದೀನ್' ಈ ಹೆಸರನ್ನು ಕಾರ್ಗಿಲ್ ಘರ್ಷಣೆಗಳ ಸಂದರ್ಭದಲ್ಲಿ ಬಹಳಷ್ಟು ಕೇಳಿದ್ದೀರಿ. ಯಾರು ಈ ಮುಜಾಹಿದೀನ್‌ಗಳು? ಅವರಿಗೆ ಕಾಶ್ಮೀರದಲ್ಲೇನು ಕೆಲಸ, ಪಾಕಿಸ್ತಾನದ ಮತ್ತು ಅಮೆರಿಕದ ಆಳರಸರಿಗೂ ಅವರಿಗೂ ಏನು ಸಂಬಂಧ?..... ಈ ಲೇಖನ ಓದಿ.

ಕಾರ್ಗಿಲ್ ಬಿಕ್ಕಟ್ಟಿನಲ್ಲಿ ಕ್ಲಿಂಟನ್ 'ಸಂಭಾವಿತ ...ಧ್ಯಸ್ಥಿಕೆ' ಪಾತ್ರ ವಹಿಸುವುದಕ್ಕಿಂತ ದೊಡ್ಡ ಜೋಕ್ ...ನ್ನೊಂದು ಇರಲಿಕ್ಕಿಲ್ಲ. ಯಾಕೆಂದರೆ ಕ್ಲಿಂಟನ್ ಅಥವಾ ...ರಿಕನ್ ಸರ್ಕಾರವೇ ಕಾರ್ಗಿಲ್ ಕಾರ್ಯಾಚರಣೆಯ ...ವಾರಿ. ಕ್ಲಿಂಟನ್ ನವಾಜ್ ಷರೀಫರ ಮೇಲೆ ...ರ್ಗಿಲ್‌ನಿಂದ ಹಿಂತೆಗೆಯಲು ಒತ್ತಡ ಹಾಕುವುದೂ ...ಷ್ಟೇ ದೊಡ್ಡ ಜೋಕ್. ಏಕೆಂದರೆ ಕಾರ್ಗಿಲ್ ...ಮೆರಿಕ-ಪಾಕಿಸ್ತಾನಗಳ ಮಿಲಿಟರಿ ಗೂಢಚರ್ಯೆ ...ಸ್ಥೆಗಳ ಜಂಟಿ ಕಾರ್ಯಾಚರಣೆ. ಅದರಲ್ಲೂ ಪಾಕಿಸ್ತಾನ ...ನಿಯರ್ ಪಾರ್ಟ್‌ನರ್. ಅಮೆರಿಕ ಯೋಜಿಸಿದ್ದನ್ನು ...ರ್ಯಗತ ಮಾಡುವುದಷ್ಟೇ ಪಾಕಿಸ್ತಾನದ ಕೆಲಸ. ಇದು ...ಬಿಜೆಪಿ ಸರ್ಕಾರಕ್ಕೂ ಗೊತ್ತಿದೆ. ಪಾಕಿಸ್ತಾನದ ಮೇಲೆ ...ದು ಹಾಯುವ ಬಿಜೆಪಿ ಸರ್ಕಾರ ಸಿಐಎ ದ ಪಾತ್ರದ ...ಚಕಾರವೆತ್ತುತ್ತಿಲ್ಲ.

...ಜಾಹಿದಿನ್ ಕಾಶ್ಮೀರಿಗಳಲ್ಲ
...ಘಾನಿ ಬಾಡಿಗೆ ಬಂಟರು

ಅಲ್ಲದೆ ಮುಜಾಹಿದಿನ್(ಧಾರ್ಮಿಕ ...ಹೋರಾಟಗಾರರು)ಗೂ ಕಾಶ್ಮೀರಿ ಉಗ್ರಗಾಮಿಗಳಿಗೂ ...ಬಂಧವಿಲ್ಲ. ಮುಜಾಹಿದಿನ್ ಕಾಶ್ಮೀರಿಗಳೇ ಅಲ್ಲ. ...ರು ಅಮೆರಿಕ-ಪಾಕಿಸ್ತಾನದ ಕುಕೃತ್ಯಗಳನ್ನು ಕಾರ್ಯಗತ ...ಡುತ್ತಿರುವ ಬಾಡಿಗೆ ಬಂಟರು.

ಮುಜಾಹಿದಿನ್ ಒಂದು ಸಾಮಾಜಿಕ-ರಾಜಕೀಯ ...ಳುವಳಿಯಾಗಿ ಹುಟ್ಟಿ ಬಂದದ್ದೂ ಅಲ್ಲ. ಅದು ...ಅಮೆರಿಕದ ಗೂಢಚರ್ಯೆ ಸಂಸ್ಥೆ ಸಿಐಎ ಮತ್ತು ...ಕಿಸ್ತಾನದ ಗೂಢಚರ್ಯೆ ಸಂಸ್ಥೆ ಐಎಸ್‌ಐಗಳ ಅನೈತಿಕ ...ಬಂಧದಲ್ಲಿ ಹುಟ್ಟಿದ ಕೂಸು. ಸಿಐಎ ಅದರ ಅಪ್ಪ, ...ಎಸ್‌ಐ ಅದರ ಅಮ್ಮ.

ಭಾರತ ಅಫಘಾನಿಸ್ತಾನವೂ ಅಲ್ಲ, ಯುಗೋಸ್ಲಾವಿಯವೂ ಅಲ್ಲ. ಆದರೆ ಬಿಜೆಪಿ ಸರ್ಕಾರ ಪುನರಾಯ್ಕೆಯಾದರೆ ಅಮೆರಿಕದ ಕೆಲಸ ಸುಲಭವಾದೀತು. ಕಾರ್ಗಿಲ್‌ನ ನೆಪದಲ್ಲಿ ಅಮೆರಿಕ ಮೂಗು ತೂರಿಸಲು ಬರದಿರುವುದು, ಕಾಶ್ಮೀರ ಸಮಸ್ಯೆಗೆ ಸರಿಯಾದ ಪರಿಹಾರ ಆಂತರಿಕವಾಗಿ ಹುಡುಕುವುದು ಅಮೆರಿಕದ ಈ ಸವಾಲಿಗೆ ತಕ್ಕ ಉತ್ತರವಾಗಬಲ್ಲುದು. ಇವೆಲ್ಲದಕ್ಕೂ ಬಿಜೆಪಿಯನ್ನು ಸರ್ಕಾರದಿಂದ ಹೊರಗಿಡುವುದು ಅತ್ಯವಶ್ಯ.

ಮುಜಾಹಿದಿನ್‌ನ್ನು ಹುಟ್ಟಿಹಾಕಿದ್ದು 80 ರ ದಶಕದಲ್ಲಿ. ...ಫಘಾನಿಸ್ತಾನದ ಪ್ರಗತಿಪರ ಸೋವಿಯತ್-ಪರ ...ರ್ಕಾರ ಉರುಳಿಸಲು. ಆ ಮೂಲಕ ಇಡೀ ಪ್ರದೇಶದಲ್ಲಿ ...ಸ್ಥಿರತೆ ಉಂಟು ಮಾಡಿ ಅಮೆರಿಕಕ್ಕೆ ಮೂಗು ...ತೂರಿಸಲು ಅವಕಾಶ ಮಾಡಿಕೊಡುವುದು ಉದ್ದೇಶ ...ವಾಗಿತ್ತು. ಕಾಶ್ಮೀರದ ಪ್ರತ್ಯೇಕತವಾದಿ ಗುಂಪುಗಳಿಗೆ ...ಸಿಐಎ-ಐಎಸ್‌ಐಗಳು ಹಿಂದಿನಿಂದಲೂ ಸಹಾಯ, ...ಸಂಪನ್ಮೂಲ, ತರಬೇತಿ ಒದಗಿಸುತ್ತಾ ಬಂದಿದೆ. ಆದರೆ ...ಮುಜಾಹಿದಿನ್ ಬೇರೆ. ಅವರು ಸಿಐಎ-ಐಎಸ್‌ಐಗಳ ...ಕುಕೃತ್ಯ ಎಸಗುವ ಬಾಡಿಗೆ ಬಂಟರು.

...ಕಾರ್ಗಿಲ್ ಬಿಕ್ಕಟ್ಟು ಅಮೆರಿಕದ ಸೃಷ್ಟಿ

ಇದನ್ನು ಭಾರತ-ಪಾಕಿಸ್ತಾನ-ಅಫಘಾನಿಸ್ತಾನಗಳ ...ತರಿಂದ ಮುಚ್ಚಿಡಲೆಂದೇ ಕ್ಲಿಂಟನ್‌ರ 'ಸಂಭಾವಿತ ...ಮಧ್ಯಸ್ಥಿಕೆ' ಸೋಗು ಹಾಕುತ್ತಿರುವುದು. 'ಕಾಶ್ಮೀರ ಸಮಸ್ಯೆ'ಯ ಕವರ್ ಬಳಸಿ ಇಡೀ ಪ್ರದೇಶದಲ್ಲಿ ಅಮೆರಿಕ ಮಧ್ಯಪ್ರವೇಶಿಸಿ ದೊಡ್ಡ ಪಾತ್ರ ವಹಿಸಲು, ಕಾರ್ಗಿಲ್ ಕದನವನ್ನು ಹುಟ್ಟಿ ಹಾಕಿದ್ದು ಇವರು ಜಂಟಿಯಾಗಿ. ಅಫಘಾನಿಸ್ತಾನದಲ್ಲಿ ಪ್ರಗತಿಪರ ಸರ್ಕಾರವನ್ನು ಉರುಳಿಸಲು ಬಳಸಿದ ತಂತ್ರವನ್ನು ಇಲ್ಲಿ ಪುನರಾವರ್ತಿಸಲಾಗುತ್ತಿದೆ. ಅಲ್ಲಿ ಅಫಘಾನಿಸ್ತಾನದ ಇಸ್ಲಾಮಿಕ್ ಮೂಲಭೂತವಾದಿ ಗುಂಪುಗಳಿಗೆ ಒಂದು ಕಡೆ ತರಬೇತಿ, ಬೆಂಬಲ, ಸಂಪನ್ಮೂಲ ಒದಗಿಸಿತು. ಆದರೆ ಅವರಿಗೆ ಅಫಘಾನಿಸ್ತಾನವನ್ನು ಆಳಲು ಆಗಲಿಲ್ಲ. ಆಗ ಇಡೀ ದೇಶವನ್ನು ತಾಲಿಬಾನ್ ಆಕ್ರಮಿಸಿಕೊಂಡಿತು. ತಾಲಿಬಾನ್ ಪಾಕಿಸ್ತಾನದಲ್ಲಿ ಅಫಘಾನಿ ನಿರಾಶ್ರಿತರ ಕ್ಯಾಂಪುಗಳಲ್ಲಿ ಧಾರ್ಮಿಕ ಸ್ಕೂಲುಗಳಲ್ಲಿ ತರಬೇತಿ ಪಡೆದ ಯುವಕರ ತಂಡ. ತಾಲಿಬಾನ್ ಮತ್ತು ಪಾಕಿಸ್ತಾನಿ ಸೈನ್ಯದ ಸೈನಿಕರ ಜಂಟಿ ಗುಂಪುಗಳು ಇಡೀ ಅಫಘಾನಿಸ್ತಾನವನ್ನು ಕೆಲವೇ ತಿಂಗಳುಗಳಲ್ಲಿ ಆಕ್ರಮಿಸಿಕೊಂಡವು. ಇದು ಸಿಐಎ-ಐಎಸ್‌ಐಗಳು ಜಂಟಿಯಾಗಿ ಯೋಜಿಸಿ, ಕಾರ್ಯಗತಗೊಳಿಸಿದ್ದು, ಇಲ್ಲದಿದ್ದರೆ ತಾಲಿಬಾನ್‌ನಿಂದ ಇದು ಸಾಧ್ಯವೇ ಆಗುತ್ತಿರಲಿಲ್ಲ.

ಜಗತ್ತಿಗೆ ತೋರಿಸಲು ಮುಜಾಹಿದಿನ್ ಇದೇ ತಂತ್ರವನ್ನು ಕಾಶ್ಮೀರದ ಕಾರ್ಗಿಲ್‌ನಲ್ಲಿ ಬಳಸುತ್ತಿದೆ. ಆದರೆ ನಿಜವಾದ ಪಾತ್ರ ವಹಿಸುತ್ತಿರುವುದು ಪಾಕಿಸ್ತಾನದ ಸೈನ್ಯ. ಹಿಂದಿರುವುದು ಸಿಐಎ-ಐಎಸ್‌ಐ ಕೂಟ. ಅಮೆರಿಕದ, ಪಾಕಿಸ್ತಾನದ ಸರ್ಕಾರಗಳ ಪೂರ್ಣ ಆಶೀರ್ವಾದದ ಜತೆ. ಬಿಜೆಪಿಯ ಸರ್ಕಾರದ ಅಣ್ವಸ್ತ್ರ ನೀತಿ (ಪೋಖ್ರಾನ್-II ಪರೀಕ್ಷೆ) ಕಾಶ್ಮೀರವನ್ನು ಅಂತರ್‍ರಾಷ್ಟ್ರೀಯಗೊಳಿಸಲು ಅನುಕೂಲಕರ ವಾತಾವರಣ ಸೃಷ್ಟಿಸಿದೆ. ಕಾಶ್ಮೀರದಲ್ಲಿ ಪ್ರತ್ಯೇಕತವಾದಿ ಮುಜಾಹಿದಿನ್ ಸೈನಿಕರು ಹೋರಾಡುತ್ತಿದ್ದಾರೆ. ಅವರಿಗೆ ಪಾಕಿಸ್ತಾನ 'ನೈತಿಕ' ಬೆಂಬಲ ಕೊಡುತ್ತಿದೆ. ಮುಜಾಹಿದಿನ್ ಮೇಲೆ ದಾಳಿ ಮಾಡುತ್ತಾ ಭಾರತ ಸೈನ್ಯ ಗಡಿದಾಟಿ ಪಾಕಿಸ್ತಾನದ ಮೇಲೆ ದಾಳಿ ಮಾಡಬಹುದು. ಆಗ ಭಾರತ-ಪಾಕಿಸ್ತಾನ ಪೂರ್ಣ ಪ್ರಮಾಣದ ಯುದ್ಧ ಆರಂಭವಾಗಬಹುದು. ಇಬ್ಬರ ಬಳಿಯೂ ಅಣ್ವಸ್ತ್ರಗಳಿರುವುದರಿಂದ ಅಣ್ವಸ್ತ್ರ ಯುದ್ಧವಾಗಬಹುದು. ಅದನ್ನು ತಪ್ಪಿಸಲು ಅಂತರ್‍ರಾಷ್ಟ್ರೀಯ ಮಧ್ಯಪ್ರವೇಶ ಬೇಕು. ಕಾಶ್ಮೀರ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಬೇಕು. ಇದು ಪಾಕಿಸ್ತಾನ-ಅಮೆರಿಕಗಳು ಇಡೀ ಜಗತ್ತಿಗೆ ಹೇಳ ಬಯಸುವುದು. ಆದರೆ ನಿಜವಾಗಿಯೂ ಕಾರ್ಗಿಲ್ ಮುಜಾಹಿದಿನ್-ಪಾಕಿಸ್ತಾನಿ ಸೈನ್ಯದ ಜಂಟಿ ಕಾರ್ಯಾಚರಣೆಗೆ ಇಂತಹ ಪರಿಸ್ಥಿತಿ ಉಂಟುಮಾಡಲು ಒಂದು ಉಪಕರಣ.

ಸಿಐಎ-ಐಎಸ್‌ಐ ಕೂಸು ಎನ್ನುವುದಕ್ಕೆ ಪುರಾವೆ

ಅಫಘಾನ್ ಮುಜಾಹಿದಿನ್‌ಗೆ ಸಿಐಎ ಬೆಂಬಲ ಇದೆ ಎಂದು ಎಲ್ಲಿದೆ ಪುರಾವೆ ಎಂದಿರಾ? ಆ ಬಗ್ಗೆ ಒಂದು ದಶಕದಿಂದಲೂ ಪುರಾವೆ ಸಾರ್ವಜನಿಕವಾಗಿ ಲಭ್ಯವಿದೆ. 1987 ಪ್ರಸಿದ್ಧ ಪತ್ರಕರ್ತ ಜ್ಯಾಕ್ ಆಂಡರ್‌ಸನ್ ವಾಶಿಂಗ್‌ಟನ್ ಪೋಸ್ಟ್‌ನಲ್ಲಿ ಸಿಐಎ ಮುಜಾಹಿದ್ದೀನ್ ಹುಟ್ಟುಹಾಕಿದ, ತರಬೇತಿ, ಸಂಪನ್ಮೂಲ, ಬೆಂಬಲ ನೀಡಿದ್ದರ ಬಗ್ಗೆ ವಿವರವಾಗಿ ವರದಿ ಮಾಡಿದ್ದಾರೆ. ಸಿಐಎ ಪಾತ್ರ ಶಸ್ತ್ರಾಸ್ತ್ರ, ಹಣ, ಆಹಾರ, ಎಲ್ಲಾ ಸಲಕರಣೆಗಳನ್ನು ಒದಗಿಸುವುದು. ಇದನ್ನು ಸಿಐಎ ಪಾಕಿಸ್ತಾನದ ಐಎಸ್‌ಐಗೆ ಕಳಿಸುತ್ತದೆ. ಅಫಘಾನ್ ಮುಜಾಹಿದಿನ್ ಗ್ಯಾಂಗ್‌ಗಳನ್ನು ಸಂಘಟಿಸಲು ಅವರಿಗೆ ಈ ಸಂಪನ್ಮೂಲಗಳನ್ನು ಸರಬರಾಜು ಮಾಡುವುದು. ಅವರಿಗೆ ತರಬೇತಿ ನೀಡುವುದು, ಅವರ ಕಾರ್ಯಾಚರಣೆಗಳನ್ನು ನಿರ್ದೇಶಿಸುವುದು ಐಎಸ್‌ಐ ಕೆಲಸ. ಐಎಸ್‌ಐ ಪಾಕಿಸ್ತಾನಿ ಸರ್ಕಾರ, ಪಾಕಿಸ್ತಾನದ ಸೈನ್ಯವನ್ನು ಬೇಕಾದಲ್ಲಿ ಬಳಸಿಕೊಳ್ಳುತ್ತದೆ. ಆದರೆ ಅದು ಸಿಐಎ ನೇರ ಮೇಲ್ವಿಚಾರಣೆಯಲ್ಲಿ ಹೆಚ್ಚು ಕಡಿಮೆ ಸ್ವತಂತ್ರವಾಗಿ ಕೆಲಸ ಮಾಡುತ್ತದೆ.

ಪತ್ರಕರ್ತರು ಮಾತ್ರವಲ್ಲ, ಐಎಸ್‌ಐ ನ ಕೆಲವು ಜನರಲ್‌ಗಳು ನೇರವಾಗಿ ಬರೆದ ಪುಸ್ತಕದಲ್ಲಿ ಸಿಐಎನ ಪಾತ್ರದ ಬಗ್ಗೆ ವಿವರಗಳು ಇವೆ. ಐಎಸ್‌ಐನ ಅಫಘಾನ್ ಬ್ಯೂರೋದ ಮುಖ್ಯಸ್ಥನಾಗಿದ್ದ ಬ್ರಿಗೇಡಿಯರ್ ಮಹಮ್ಮದ್ ಉಸುಫ್ ಬರೆದ 'ಕರಡಿ ಖೆಡ್ಡಾ'(Bear Trap) ಎಂಬ ಪುಸ್ತಕದಲ್ಲಿ ಮುಲಾಜಿಲ್ಲದೆ ವಿವರಗಳನ್ನು ನೀಡಿದ್ದಾರೆ. ಹೀಗೆ ಮುಜಾಹಿದ್ದೀನ್ ಸಿಐಎ-ಐಎಸ್‌ಐಗಳ ಅನೈತಿಕ ಕೂಸು ಎಂಬುದು ಬಹಿರಂಗ ಗುಟ್ಟು. ಪಾಕಿಸ್ತಾನದಲ್ಲಿ ಐಎಸ್‌ಐ ರಹಸ್ಯ ಅಕೌಂಟ್‌ಗೆ ಸಿಐಎ ಹಣ ರವಾನಿಸುತ್ತಿತ್ತು ಎಂದು ಬ್ರಿಗೇಡಿಯರ್ ಉಸುಫ್ ತಮ್ಮ ಪುಸ್ತಕದಲ್ಲಿ ಹೇಳಿದ್ದಾರೆ. 1983 ರಲ್ಲಿ ಹತ್ತು ಸಾವಿರ ಟನ್ ಆಹಾರ ಸಾಮಗ್ರಿಗಳನ್ನು ಸಿಐಎ ಕಳಿಸಿತ್ತು. 1987 ರ ಹೊತ್ತಿಗೆ ಮುಜಾಹಿದಿನ್ ಕಾರ್ಯಾಚರಣೆ ಎಷ್ಟು ವ್ಯಾಪಕವಾಗಿತ್ತೆಂದರೆ ಆಹಾರ ಸಾಮಗ್ರಿಗಳ ಸರಬರಾಜು 65 ಸಾವಿರ ಟನ್‌ಗೆ ಏರಿತ್ತು. 1987 ರ ಕೊನೆಗೆ ಮೂರೂವರೆ ಕೋಟಿ ರೂ. ಬರಿಯ ಆಹಾರ ಸಾಮಗ್ರಿಗಳಿಗೆ ಸಿಐಎ ಖರ್ಚು ಮಾಡಿತು. ಅಫಘಾನಿಸ್ತಾನದ ಪರ್ವತ ಪ್ರದೇಶಗಳ ಯುವಕರನ್ನು ಮುಜಾಹಿದಿನ್‌ಗೆ ಸೇರಿಸಿಕೊಂಡದ್ದರಿಂದ ಅವರಿಗೆ ಪರ್ವತ ಪ್ರದೇಶಗಳಲ್ಲಿ ಗೆರಿಲ್ಲಾ ಕಾರ್ಯಾಚರಣೆ ತರಬೇತಿ ನೀಡುವುದು ಸುಲಭವಾಗಿತ್ತು. ಅಲ್ಲದೆ ಪರ್ವತ ಪ್ರದೇಶಕ್ಕೂ ಈ ಅಫಘಾನರು ಸ್ವಭಾವತಃ ಕಟ್ಟುಮಸ್ತಾದ ಆಳುಗಳು. ಅವರಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಲಾಯಿತು. ವಿಮಾನಗಳಿಗೆ ದಾಳಿ ಮಾಡಲು ಬಳಸುವ ರಾಕೆಟ್ ಲಾಂಚರ್‌ಗಳು, ಉಷ್ಣ ಹುಡುಕಿಕೊಂಡು ಹಾರುವ ಸ್ಟಿಂಗರ್ ಕ್ಷಿಪಣಿಗಳನ್ನು ಅವರಿಗೆ ಒದಗಿಸಲಾಯಿತು. ಇದು ಅತ್ಯಂತ ಆಧುನಿಕ ಶಸ್ತ್ರಗಳು. ಹಲವು ದೇಶಗಳ ಸೈನ್ಯದಲ್ಲೂ ಇಂತಹ ಶಸ್ತ್ರಗಳು ಇರಲಿಲ್ಲ. **ಬ್ರಿಗೇಡಿಯರ್ ಉಸುಫ್ 1983 ರಿಂದ 1987 ರವರೆಗೆ ಸಿಐಎ-ಐಎಸ್‌ಐ 80 ಸಾವಿರ ಮುಜಾಹಿದ್ದಿನ್‌ಗಳಿಗೆ ತರಬೇತಿ ನೀಡಿತು ಎಂದು ಅವರು ತಮ್ಮ ಪುಸ್ತಕದಲ್ಲಿ ಬರೆಯುತ್ತಾರೆ.**

ಅಮೆರಿಕದ 'ಯುಗೋಸ್ಲಾವ್'
ತರದ ಕಾರ್ಯತಂತ್ರ

ಸಾಮ್ರಾಜ್ಯಶಾಹಿ ಸಿಐಎ-ಐಎಸ್‌ಐ ಮೂಲಕ ತನ್ನ ಆಟ ಆಡುತ್ತಿದೆ. ಕಾಶ್ಮೀರದಲ್ಲಿ ಮೂಗು ತೂರಿಸುವ ಮೂಲಕ ಭಾರತವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದೆ. ಇದಕ್ಕೆ ಅಫಘಾನಿಸ್ತಾನದಲ್ಲಿ, ಇತ್ತೀಚೆಗೆ ಯುಗೋಸ್ಲಾವಿಯದಲ್ಲಿ ಬಳಸಿದ ತಂತ್ರಗಳನ್ನು ಬಳಸುತ್ತಿದೆ. ಅಫಘಾನಿಸ್ತಾನದಲ್ಲಿ ಬಳಸಿದ ಮಿಲಿಟರಿ ತಂತ್ರಗಳನ್ನು ಬಳಸಿದೆ. ಯುಗೋಸ್ಲಾವಿಯದಲ್ಲಿ ಬಳಸಿದ ಸಾಮಾಜಿಕ-ರಾಜಕೀಯ ತಂತ್ರಗಳನ್ನು ಬಳಸುವ ಯೋಜನೆ ಹೊಂದಿದೆ. ಕಾಶ್ಮೀರ ಸಮಸ್ಯೆಯನ್ನು ಅಂತರ್‍ರಾಷ್ಟ್ರೀಯಗೊಳಿಸಿ **ಯುಗೋಸ್ಲಾವಿಯದಲ್ಲಿದ್ದಂತೆ 'ಜನಾಂಗೀಯ-ಧಾರ್ಮಿಕ' ವಿಭಾಗಗಳನ್ನು ಮಾಡಿ ಅದನ್ನು ಅಂತರ್‍ರಾಷ್ಟ್ರೀಯ ಮೇಲ್ವಿಚಾರಣೆಗೆ ಒಳಪಡಿಸುವ ಯೋಜನೆ ಆಗಿದೆಯಂತೆ. ಹಿಂದು, ಮುಸ್ಲಿಂ, ಬೌದ್ಧ ಮತ್ತು ಇತರ ಜನಾಂಗೀಯ ವೈವಿಧ್ಯತೆ ಇರುವ ಕಾಶ್ಮೀರ ಸಾಮ್ರಾಜ್ಯಶಾಹಿಗಳ ಆಟಕ್ಕೆ ಅನುಕೂಲಕರ ಎಂದು ಅವರ ಭಾವನೆ.** ಇದಕ್ಕೆ ಬಿಜೆಪಿ ಸರ್ಕಾರ, ಶೇಕ್ ಅಬ್ದುಲ್ಲಾರ ಒಪ್ಪಿಗೆ ಪಡೆಯಲು ಒತ್ತಾಯ, ಒತ್ತಾಸೆಗಳು ಆರಂಭವಾಗಿದೆಯಂತೆ ಅದನ್ನು ವಿಶ್ವಸಂಸ್ಥೆ ಮೂಲಕ ಹೊರಿಸುವ ಯೋಜನೆಯೂ ಇದೆ. ಇದನ್ನು ಸಾಧಿಸಲು ಕಾರ್ಗಿಲ್ ಬಿಕ್ಕಟ್ಟು ಅಮೆರಿಕ ಸೃಷ್ಟಿಸಿದ ಬಿಕ್ಕಟ್ಟು. ಅದನ್ನು ಪರಿಹರಿಸುವ ನೆಪದಲ್ಲಿ ತನ್ನ ಯೋಜನೆಯನ್ನು ಕಾರ್ಯಗತಗೊಳಿಸುವುದು ಅಮೆರಿಕದ ತಂತ್ರ. ಅಲ್ಲದೆ ಈ ಪ್ರದೇಶದಲ್ಲಿ ಅಣ್ವಸ್ತ್ರ ಪೈಪೋಟಿ, ಕಾಶ್ಮೀರದ ಮೇಲೆ ಕದನದ ಸಾಧ್ಯತೆ ಬಳಸಿ ಸಿಟಿಬಿಟಿ, ಎನ್‌ಪಿಟಿಗೆ ಸಹಿ ಹಾಕಲು ಭಾರತದ ಮೇಲೆ ಒತ್ತಡ ಹಾಕುವುದೂ ಅದರ ಕಾರ್ಯತಂತ್ರದ ಭಾಗ. ಬಿಜೆಪಿ ಸರ್ಕಾರ ಇನ್ನಾವುದೇ ಸರ್ಕಾರಕ್ಕಿಂತ ಈ ಒತ್ತಡಕ್ಕೆ ಮಣಿದಿದೆ. ಮುಂದೆಯೂ ಅದು ಅಧಿಕಾರಕ್ಕೆ ಬಂದರೆ ಅದನ್ನು ಮಣಿಸಲು ಸಾಧ್ಯ ಎಂಬುದು ಅಮೆರಿಕದ ಹವಣಿಕೆ.

ಭಾರತ ಅಫಘಾನಿಸ್ತಾನವೂ ಅಲ್ಲ, ಯುಗೋಸ್ಲಾವಿಯವೂ ಅಲ್ಲ. ಆದರೆ ಬಿಜೆಪಿ ಸರ್ಕಾರ ಪುನರಾಯ್ಕೆಯಾದರೆ ಅಮೆರಿಕದ ಕೆಲಸ ಸುಲಭವಾದೀತು. ಕಾರ್ಗಿಲ್‌ನ ನೆಪದಲ್ಲಿ ಅಮೆರಿಕ ಮೂಗು ತೂರಿಸಲು ಬರದಿರುವುದು, ಕಾಶ್ಮೀರ ಸಮಸ್ಯೆಗೆ ಸರಿಯಾದ ಪರಿಹಾರ ಅಂತರಿಕವಾಗಿ ಹುಡುಕುವುದು ಅಮೆರಿಕದ ಈ ಸವಾಲಿಗೆ ತಕ್ಕ ಉತ್ತರವಾಗಬಲ್ಲುದು. ಇವೆಲ್ಲದಕ್ಕೂ ಬಿಜೆಪಿಯನ್ನು ಸರ್ಕಾರದಿಂದ ಹೊರಗಿಡುವುದು ಅತ್ಯವಶ್ಯ.

........ಮಾಜಿ ಸೇನಾಧಿಪತಿ ಆಯ್ಕೆ

...ಟ 10 ರಿಂದ

...ರ ಹೆಸರನ್ನೂ ತಗೊಳ್ಳುವುದಿಲ್ಲ, ಆದರೆ ನ್ಯಾಯಾಲಯ ...ರನ್ನಾದರೂ ತಪ್ಪಿತಸ್ಥರು ಎಂದು ತೀರ್ಪಿತ್ತರೆ ಸುಪ್ರೀಂ ...ಕೋರ್ಟ್ ಈ ಪ್ರಶ್ನೆಯ ಮೇಲೆ ತನ್ನ ಅಂತಿಮ ತೀರ್ಪು ...ಡಬೇಕು ಎಂದು ಅವರು ಹೇಳಿದರು.

ಉದಾರೀಕರಣ, ಖಾಸಗೀಕರಣ ಇತ್ಯಾದಿಗಳ ಬಗ್ಗೆ ...ನರಲ್ ರಾಯ್ ಚೌಧುರಿಯವರ ನಿಲುವೇನು? ಈ ...ಗ್ಗೆ "ನನ್ನ ಕಣ್ಣೋಟ ಸ್ಪಷ್ಟವಾಗಿದೆ" ಎಂದು ಅವರು ...ತ್ತಿ ಹೇಳಿದರು. ಆರ್ಥಿಕ ಉದಾರೀಕರಣ ಎಲ್ಲಾ ...ರಿಗೂ ಸಮೃದ್ಧಿ, ದೇಶಕ್ಕೆ ಅಭಿವೃದ್ಧಿ ತಂದಿದ್ದರೆ ಅದಕ್ಕೆ ...ಕ್ಷೇಪವಿರಲು ಸಾಧ್ಯವಿಲ್ಲ. ಆದರೆ ಅದಕ್ಕೆ ಭಾರೀ ...ಸಾಮಾಜಿಕ ಬೆಲೆ ತೆರಬೇಕಾಗಿ ಬಂದರೆ ಅದು ಬೇಕಿಲ್ಲ. ...ರ್ವ ಯುರೋಪಿನ ದೇಶಗಳಲ್ಲಿ ಎಂತಹ ಭಯಾನಕ ...ಸ್ಥಿತಿಯಿದೆ ಎಂದು ನಾವು ನೋಡುತ್ತಿಲ್ಲವೇ ಎಂದು ...ಮಾಜಿ ಸೇನಾಧಿಪತಿಗಳು ಆತಂಕದಿಂದ ಕೇಳಿದರು. ...ಭಾರತೀಯ ಆರ್ಥಿಕದ ಜಾಗತೀಕರಣಕ್ಕೆ ನಿರ್ದೇಶನ ...ಡುವವರಾರು? ಎಂದು ತಾನೇ ಕೇಳಿಕೊಂಡ ಪ್ರಶ್ನೆಗೆ ಉತ್ತರಿಸುತ್ತಾ ಅವರು ನಮ್ಮ ದೇಶ ಬೇರೆ ದೇಶಗಳ ಸರಕುಗಳನ್ನು ಆಮದು ಮಾಡಿಕೊಳ್ಳಲು ನಿರ್ಬಂಧವಿಲ್ಲ, ಆದರೆ ಅಷ್ಟೇ ಮುಕ್ತವಾಗಿ ನಮ್ಮ ರಫ್ತುಗಳಿಗೆ ಅವಕಾಶವಿಲ್ಲವಲ್ಲಾ ಎಂದರು. ಉದಾರೀಕರಣ ಕೇವಲ ಒಂದು ಪಕ್ಷದ ಹಿತಾಸಕ್ತಿಗಳನ್ನಷ್ಟೇ ಏಕೆ ಕಾಪಾಡಬೇಕು, ನಮ್ಮ ದೇಶದ ಹಿತಾಸಕ್ತಿಗಳನ್ನು ಕಾಪಾಡುವುದು ಕೂಡಾ ಅಷ್ಟೇ ಮುಖ್ಯವಲ್ಲವೇ ಎಂದು ಜನರಲ್ ರಾಯ್ ಚೌಧುರಿ ಪ್ರಶ್ನಿಸಿದರು.

ಸ್ವಾವಲಂಬನೆಯ ಗುರಿ ಸಾಧನೆ ಅಗತ್ಯ ಎಂದೂ ಅವರು ಒತ್ತಿ ಹೇಳಿದರು. ಭಾರತದ ಅಭಿವೃದ್ಧಿಯ ಸಾಧ್ಯತೆಗಳು ವಿಫಲವಾಗಿವೆ. ನಮ್ಮ ಸಂಶೋಧನಾ ಸಂಸ್ಥೆಗಳ ಉಪಯೋಗವನ್ನು ಚೆನ್ನಾಗಿ ಪಡೆಯಬೇಕು ಎಂದ ಅವರು ವಿದೇಶಗಳ ಗುತ್ತೇದಾರಿ ಕಂಪನಿಗಳನ್ನು ಟೀಕಿಸದಿರಲಿಲ್ಲ. ಅವರು ಕೇವಲ ಬಾಂಬುಗಳನ್ನು ರಾಕೆಟ್‌ಗಳನ್ನು ಮಾತ್ರ ಉತ್ಪಾದಿಸುತ್ತಾರೆ ಎಂದರು ವ್ಯಂಗ್ಯವಾಗಿ.

ಕರ್ನಾಟಕದ ಎಂ.ಪಿ.ಗಳು

ಪುಟ 8 ರಿಂದ

ನೀರಿನ ಟ್ಯಾಂಕು, ಶೌಚಾಲಯ, ಗ್ರಂಥಾಲಯ, ವ್ಯಾಯಾಮಶಾಲೆ, ಪಶು ಚಿಕಿತ್ಸಾಲಯ, ಅಂಬೇಡ್ಕರ ಭವನ, ಇತ್ಯಾದಿಗಳನ್ನು ಉದಾಹರಿಸಲಾಗಿದೆ. ಈ ಕಾಮಗಾರಿ ಕೆಲಸ ಕಾರ್ಯಗಳನ್ನು ಪ್ರತ್ಯಕ್ಷವಾಗಿ ಪರಿಶೀಲಿಸಿದರೆ ಅವುಗಳ ಗುಣಮಟ್ಟ, ಪ್ರಾಮಾಣಿಕತೆ, ರಾಜಕೀಯ ತಿಳಿದಾವು.

ತಾನು ಮುಂದೆ ಲೋಕಸಭಾ ಸದಸ್ಯನಾಗಿ ಮುಂದುವರಿಯ ಬೇಕೆ ಅಥವಾ ಇತ್ತೀಚೆಗೆ ಕಾಂಗ್ರೆಸ್‌ಗೆ ಜಿಗಿದ ತನ್ನ ಸಂಬಂಧಿ ಶಂಕರಣ್ಣ ಮುನವಳ್ಳಿ ಅವರಿಗೆ ಅವ್ಯಕ್ತವಾಗಿ ಬೆಂಬಲಿಸಬೇಕೆ. ಅಥವಾ ಬಿಜೆಪಿಗೆ ತನ್ನ ಪ್ರತಿನಿಧಿಯಾಗಿ ಇನ್ನೊಬ್ಬ ವ್ಯಕ್ತಿಯನ್ನು ಬಿಟ್ಟುಕೊಟ್ಟು ತಾನು ಸಾರಿಗೆ ಉದ್ಯಮದ ಸಾಮ್ರಾಜ್ಯ ವಿಸ್ತರಣೆಗೆ ಗಮನ ಕೊಡಬೇಕೆ ಎನ್ನುವುದೇ ವಿಜಯ ಸಂಕೇಶ್ವರರ ಮುಂದೆ ಇರುವ ಪ್ರಶ್ನೆಗಳು. ರಾಜಕೀಯದಿಂದ ನಿವೃತ್ತನಾಗ ಬೇಕಾದರೆ ತನ್ನ ಘನತೆ ಗೌರವಗಳನ್ನು ಹೆಚ್ಚಿಸುವ ಯಾವುದಾದರೊಂದು ಒಳ್ಳೆಯ ಕಾರಣ ಬೇಕಷ್ಟೆ. ನೈರುತ್ಯ ವಲಯ ಹುಬ್ಬಳ್ಳಿಯಲ್ಲಿ ಸ್ಥಾಪಿಸದಿದ್ದರೆ ತಾನು ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದಾಗಿ ಇವರು ಸುದ್ದಿ ಮಾಡಿದ್ದರು. ವಿಜಯ ಸಂಕೇಶ್ವರರನ್ನು ಬಿಟ್ಟರೆ ಬಿಜೆಪಿಗೆ ಇನ್ನೊಬ್ಬ ಕೋಟ್ಯಾಧೀಶ ಸಿಗುವುದು ಕಷ್ಟ. ಧಾರವಾಡ ಉತ್ತರ ಕ್ಷೇತ್ರವನ್ನು ಬಿಜೆಪಿ ತನ್ನ ಭದ್ರಕೋಟೆಯನ್ನಾಗಿಸಿದೆ.ಅದಕ್ಕಾಗಿಯೇ ಅದರ ಮೊದಲ ಸುತ್ತಿನ ಚುನಾವಣಾ ಪ್ರಚಾರ-ಸಂಕಲ್ಪಯಾತ್ರೆಯ ಮುಕ್ತಾಯ ಸಮಾರಂಭವನ್ನು ಕೋಟಿಗಟ್ಟಲೆ ರೂ. ವೆಚ್ಚದಲ್ಲಿ ಹುಬ್ಬಳ್ಳಿಯಲ್ಲಿಯೇ ಏರ್ಪಡಿಸಲಾಯಿತು. ನಾಲ್ಕು ಲಕ್ಷ ಜನರಿಗೆ ನಗರಕ್ಕೆ ಪ್ರವೇಶಿಸುವ ಎಲ್ಲಾ ಕಡೆಗಳಲ್ಲಿ ಭರ್ಜರಿ ಊಟ, ಕೈತುಂಬಾ ಕಾಸು ಕೊಟ್ಟು ಖುಷಿ ಪಡಿಸಲಾಯಿತು.

ಬದುಕಿನ ಮೌಲ್ಯಗಳನ್ನು ಪ್ರತಿಪಾದಿಸುವ ಚಿತ್ರ

'ಇದು ಎಂಥಾ ಪ್ರೇಮವಯ್ಯಾ'

ತುಂಬಾ ಆತ್ಮವಿಶ್ವಾಸದಿಂದ ಕೋಡ್ಲು ರಾಮಕೃಷ್ಣ ನಿರ್ದೇಶಿಸಿರುವ ಚಿತ್ರ 'ಇದು ಎಂಥಾ ಪ್ರೇಮವಯ್ಯಾ' ಒಂದು ಕಮರ್ಷಿಯಲ್ ಚಿತ್ರ ಆದರೆ ಇತರ ಕಮರ್ಷಿಯಲ್ ಚಿತ್ರಗಳ ಜಾಡಿಗೆ ಬೀಳದ ಭಿನ್ನವಾದ ಚಿತ್ರ. ಕನ್ನಡದಲ್ಲಿ ಬೇಕಾದಷ್ಟು ಸಿನಿಮಾಗಳು ಕಮರ್ಷಿಯಲ್ ಫಾರ್ಮುಲಾಗಳ ಅಡಿಯಲ್ಲೇ ಹಿಂಸೆ, ಫೈಟಿಂಗ್, ವಿಲ್ಲನ್‌ಗಳ ಮಾರಾಮರಿಗಳ, ಅರೆಬೆತ್ತಲೆ, ಅಶ್ಲೀಲತೆಗಳು ಈ ಚಿತ್ರದಲ್ಲಿ ಇಲ್ಲದಿರುವುದು ಪ್ರಮುಖವಾದ ಅಂಶವಾಗಿದೆ. ಬೇರೆ ಚಿತ್ರಗಳ ರೀತಿ ಕೀಳು ಅಭಿರುಚಿ, ಕಾಮನೆಗಳನ್ನು ಬೆಳೆಸುವ ಬದಲು ಜೀವನದ ಮೌಲ್ಯಗಳಲ್ಲಿ ಕೆಲವನ್ನು ಸಾಧ್ಯವಾದಷ್ಟು ಬಿಂಬಿಸಲು ಈ ಸಿನಿಮಾದಲ್ಲಿ ಯತ್ನಿಸಲಾಗಿದೆ. ಆದರೂ ವಾಸ್ತವ ಜೀವನದ ಪರಿಸ್ಥಿತಿ, ಘರ್ಷಣೆಗಳನ್ನು ದೂರವಿಟ್ಟು ಕಲ್ಪನಾ ಲೋಕದ ಸಿನಿಮೀಯ ಚಿತ್ರವೇ ಎನ್ನುವುದರಲ್ಲಿ ಅನುಮಾನವಿಲ್ಲ. ಕಥೆಯನ್ನು ಒಳ್ಳೆಯ ಉದ್ದೇಶದಿಂದ ಹೆಣೆದಿದ್ದರೂ ಸಿನಿಮೀಯತೆಯಿಂದ ದೂರವಿರಲು ಸಾಧ್ಯವಾಗಿಲ್ಲ. ಭ್ರಮೆಗಳಲ್ಲಿ ಜನತೆಯನ್ನು ಮುಳುಗಿಸುವುದೇ ಪ್ರಧಾನ ಉದ್ದೇಶವಾಗಿರುವ ಚಲನ ಚಿತ್ರ ಪರಿಸರ ಹಾಗೆ ವಾಸ್ತವದ ನೆಲೆಯಲ್ಲಿ ಚಿತ್ರದ ಕಥೆಯನ್ನು ಅರಳಿಸಲು ಅವಕಾಶ ಕೊಡುತ್ತಿಲ್ಲ.

ಇವತ್ತಿನ ಅಧುನಿಕ ಪ್ರಪಂಚದಲ್ಲಿ ಮೋಜಿನ, ಐಶಾರಾಮದ ಜೀವನ ನಡೆಸಲು ಸುತ್ತಮುತ್ತಲಿನ ವಾತಾವರಣ ಹೆಚ್ಚು ಉತ್ತೇಜನ ನೀಡುತ್ತಿರುವ ಸಂದರ್ಭದಲ್ಲಿ ಯಾರಾದೋ ದುಡ್ಡು ಎಲ್ಲಮ್ಮನ ಜಾತ್ರೆ ಎನ್ನುವ (Take it easy, Don't worry, Be happy) ಮನೋಭಾವನೆಯನ್ನು ಯುವಜನರಲ್ಲಿ ಉದ್ರೇಕಿಸುತ್ತಿರುವ ಪರಿಸರದಲ್ಲಿ ಕಷ್ಟಪಡದೆ ಬೇರೆಯವರ ಹಂಗಿನಲ್ಲಿ ಜೀವನ ಸಾಗಿಸುವ ಯುವಕನೊಬ್ಬ ಹೆಂಡತಿಯಿಂದ ಸವಾಲಿಗೊಳಗಾಗಿ ಜೀವನದ ಬಗ್ಗೆ ಅರಿಯಲು ಪ್ರಯತ್ನಿಸುವ ಕಥೆಯೇ ಇದು 'ಎಂಥಾ ಪ್ರೇಮವಯ್ಯಾ'. ಜೀವನಕ್ಕೊಸ್ಕರ ಏನೆಲ್ಲಾ ಕಷ್ಟಪಡಬೇಕು, ಎಂಥಾ ಪರಿಸ್ಥಿತಿಗಳನ್ನು ನಿಭಾಯಿಸಬೇಕು ಎಂಬುದನ್ನು ಆದರ್ಶವಾಗಿ ತೋರಿಸಲು ನಿರ್ದೇಶಕರು ಪ್ರಯತ್ನಿಸಿದ್ದಾರೆ.

ಚಿತ್ರದಲ್ಲಿ ನಾಯಕ ಅರುಣ್(ರಮೇಶ್) ಉಂಡಾಡಿ ಗುಂಡನಾಗಿ, ಕೆಲಸ ದೊರಕಿಸಿಕೊಳ್ಳದೆ ಶ್ರಮಪಡದೆ ಬರೀ ಸುಖವನ್ನು ಬಯಸುತ್ತಿರುತಾನೆ. ತನ್ನ ಸ್ನೇಹಿತನೊಬ್ಬನ ಸಲಹೆಯ ಮೇರೆಗೆ ಶ್ರೀಮಂತನ ಮಗಳನ್ನು ಬುಟ್ಟಿಗೆ ಹಾಕಿಕೊಂಡು ಆಡಂಬರದ ಬದುಕಿಗೆ ಸುಲಭ ಮಾರ್ಗ ಹುಡುಕಲಾರಂಭಿಸುತ್ತಾನೆ. ಶ್ರೀಮಂತ ಮನೆತನದ ಅಪೂರ್ವಳ (ಶಿಲ್ಪಾ) ಪ್ರೀತಿಯನ್ನು ಗಳಿಸಲು ಅನೇಕ ತಂತ್ರಗಳನ್ನು ಹೂಡುತ್ತಾನೆ. ಆದರೆ ಅಪೂರ್ವಳ ಜೀವನದ ಆದರ್ಶಗಳೇ ತುಂಬಾ ಬಿನ್ನವಾಗಿರುತ್ತವೆ. ಅಪೂರ್ವ ಆಗರ್ಭ ಮನೆತನದಲ್ಲಿ ಹುಟ್ಟಿದರೂ ಸರಳತೆ, ಸ್ವಾಭಿಮಾನ, ಸೌಜನ್ಯತೆ, ಸುಸಂಸ್ಕೃತಿ ಇದ್ದು, ಬೇರೆಯವರ ಹಂಗಿನಲ್ಲಿ ಇರಲು ಬಯಸದವಳು. ಶ್ರೀಮಂತ ತಂದೆಯ ಆಸ್ತಿಗಾಗಿ ಆಸೆ ಪಡದೆ ತಾನೇ ದುಡಿದು ತನ್ನ ಜೀವನವನ್ನು ರೂಪಿಸಬೇಕೆಂದು ನಿರ್ಧರಿಸಿರುತ್ತಾಳೆ. ಅರುಣ್ ಇವಳನ್ನು ವಂಚಿಸಿ ಮದುವೆಯಾಗಿ ನಂತರ ಅವಳ ತಂದೆಯಿಂದ ಆಸ್ತಿಯನ್ನು ಪಡೆಯಲು ಒತ್ತಾಯಿಸುತ್ತಾನೆ. ಗಂಡನ ಒತ್ತಾಯಕ್ಕೆ ತಂದೆಯಿಂದ ಆಸ್ತಿ ಪಡೆಯುತ್ತಾಳೆ. ಆದರೆ ಅರುಣನಿಗೆ ಆಸ್ತಿಯನ್ನು ನಿರ್ವಹಿಸಲು ಅದರಲ್ಲಿ ಎದುರಾಗುವ ತೊಡರುಗಳನ್ನು ನಿಭಾಯಿಸಲು ಪ್ರಯತ್ನವನ್ನೇ ಮಾಡದೆ ಮೋಜು, ದುಂದುವೆಚ್ಚಗಳಲ್ಲಿ ಮುಳುಗಿ ಹೋಗುತ್ತಾನೆ. ಇಬ್ಬರ ಜೀವನದ ಶೈಲಿಗಳು, ಧ್ಯೇಯಗಳು ಅವರ ನಡುವೆ ವಿರಸಕ್ಕೆ ಕಾರಣವಾಗುತ್ತದೆ. ಅವರ ವಿಚ್ಛೇದನಕ್ಕೂ ಕಾರಣವಾಗುತ್ತವೆ. ಇದರಿಂದ ಆಘಾತಕ್ಕೊಳಗಾದ ಅರುಣ್ ದುಡಿಮೆಗೆ ಇಳಿದು ಶ್ರೀಮಂತನಾಗುತ್ತಾನೆ. ಅರುಣನ ಈ ಪರಿವರ್ತನೆ ಮತ್ತೆ ದಂಪತಿಗಳನ್ನು ಒಂದು ಗೂಡಿಸುತ್ತದೆ.

ಭಾರತದ ಚಲನ ಚಿತ್ರಗಳಲ್ಲಿ ಸಾಮಾನ್ಯವಾಗಿ ಹೆಣ್ಣು ಗಂಡಿಗೆ ಅಧೀನಳಾಗಿ, ಪತಿಯೇ ಬಾಳಿನ ಸರ್ವಸ್ವ, ತಾಳಿಯೇಭಾಗ್ಯ, ಒಮ್ಮೆ ವಿವಾಹವಾದರೆ ಜೀವನ ಅಂತ್ಯದವರೆಗೂ ಎಷ್ಟೇ ಅನ್ಯಾಯ ದೌರ್ಜನ್ಯ ಎದುರಿಸಿದರೂ ಅದಕ್ಕೆ ಕಟ್ಟು ಬೀಳಬೇಕು ಎನ್ನುವ ಗುಲಾಮೀ ಮೌಲ್ಯಗಳನ್ನೇ ವಿಜೃಂಭಿಸುವಾಗ ಹೆಣ್ಣಿಗೂ ಕೂಡ ತನ್ನದೇ ಚಿಂತನೆ, ವ್ಯಕ್ತಿತ್ವ ಜೀವನದ ಆದರ್ಶ ಮುಖ್ಯ ಎಂದು ಪ್ರತಿಪಾದಿಸಿರುವುದು ಆರೋಗ್ಯಕರವಾಗಿದೆ. ಹಾಗೆಯೇ ಇಂದು ಪ್ರೇಮವೇ ಎಲ್ಲಾ, ಪ್ರೇಮಕ್ಕಾಗಿಯೇ ಜೀವನ ಎಂಬ ಭ್ರಮಾತ್ಮಕ ಮಾತುಗಳಿಗಿಂತ ಜೀವನದ ಆದರ್ಶವೊಂದಕ್ಕಾಗಿ ಜೊತೆಗೂಡಿದ ಬಾಳ್ವೆಯೇ ಪ್ರೇಮದ ಆಧಾರ ಎಂದು ಚಿತ್ರಿಸಿರುವುದು ಶ್ಲಾಘನೀಯವಾಗಿದೆ.

ಒಟ್ಟಿನಲ್ಲಿ ಜೀವನದ ಆದರ್ಶವೊಂದನ್ನು ತೋರಿಸಬೇಕು. ಮನುಷ್ಯನಿಗೆ ಜೀವನದ ಆದರ್ಶ ಮುಖ್ಯ. ಇನ್ನೊಬ್ಬರ ಹಂಗಿನಲ್ಲಿ ಅಡಿಯಾಳಾಗಿ ಬದುಕುವುದಕ್ಕಿಂತ ಸ್ವಾಭಿಮಾನಿಯಾಗಿ ಜೀವನದ ಆದರ್ಶಗಳನ್ನು ಅನುಸರಿಸಿ ಬಾಳುವುದು ಮುಖ್ಯ ಎಂಬುದನ್ನು ತೋರಿಸಿದ್ದಾರೆ. ಸೀದಾ ಸೀದಾ ರಿಮೇಕ್‌ಗಳ ಮಧ್ಯದಲ್ಲೊಂದು ಇಂತಹ ಚಿತ್ರ ಮೂಡಿರುವುದು ಒಳ್ಳೆಯದೆನ್ನಬಹುದು. ಕನ್ನಡದ ಅತ್ಯುತ್ತಮ ನಟ, ನಟಿ ಸಾಲಿಗೆ ಸೇರುವ ರಮೇಶ್,



ಶಿಲ್ಪಾ ರವರ ನಟನೆಯ ಸಾಮರ್ಥ್ಯಕ್ಕೆ ಸವಾಲು
ಪಾತ್ರಗಳು ಅಲ್ಲವಾದರೂ ಇರುವ ಅವಕಾಶದ
ಚೆನ್ನಾಗಿ ನಟಿಸಿದ್ದಾರೆ. ಛಾಯ
ಪರವಾಗಿಲ್ಲವೆನ್ನಬಹುದು. ಹಾಡುಗಳು,
ಹೇಳುವಂತಹದ್ದೇನಿಲ್ಲ. ಕುಟುಂಬ ಪೂರ್ತಿ ಈ
ಯಾವ ಮುಜುಗರ ಇಲ್ಲದೆ ನೋಡುವ ಚಿತ್ರ
ಆದರಲ್ಲೂ ಯುವಕ ಯುವತಿಯರೂ ಈ
ನೋಡಬೇಕಾಗಿದೆ. ಬೇರೆ ಚಿತ್ರಗಳಂತೆ
ಪ್ರಚಾರಗಳಿಲ್ಲದೆ ಇರುವುದರಿಂದ ಇನ್ನೂ ಹ
ಚಿತ್ರವನ್ನು ನೋಡುವ ಅವಕಾಶ ತಪ್ಪಿದೆ.

- ಬಿ.ರಾಜಶೇಖರ

ವೆಂಕಿ, ಕುಂಬ್ಳೆಯ ಈ ದಿಟ್ಟತನ

ರಾಜ್ಯದ ಪ್ರಗತಿಪರರೆಲ್ಲಾ "ಹಾರ್ದಿಕ ಅಭಿನಂದನೆಗಳು - ಪ್ರಸಾದ್, ಕುಂಬ್ಳೆ" ಎನ್ನುತ್ತಿದ್ದಾರೆ. ಏತಕ್ಕೆ? ಭಾರತದ ಕ್ರಿಕೆಟ್ ತಂಡದಲ್ಲಿ ಕರ್ನಾಟಕದ ಹೆಸರು ಮಿಂಚುವಂತೆ ಮಾಡಿದಕ್ಕೆ? ಅಷ್ಟಕ್ಕೇ ಅಲ್ಲ. ಅದಕ್ಕೂ ಹೆಚ್ಚಾಗಿ ಸಾಮಾಜಿಕ ರಂಗದಲ್ಲೂ ಅವರು ತೋರಿದ ದಿಟ್ಟತನಕ್ಕೆ.



ನಿಮಗೆ ಗೊತ್ತಿದೆಯೇ ಮೊನ್ನೆ ಜುಲೈ1 ರಂದು ಅನಿಲ್ ಕುಂಬ್ಳೆ ಮದುವೆಯಾದದ್ದು ಒಂದು ಚಿಕ್ಕ ಮಗುವಿರುವ ಒಬ್ಬ ವಿವಾಹ ವಿಚ್ಛೇದಿತ ಮಹಿಳೆಯನ್ನು ಎಂದು? ನಿಮಗೆ ಗೊತ್ತಿದೆಯೇ - ಕೆಲವು ಸಮಯದ ಹಿಂದೆ ಮದುವೆಯಾದ ವೆಂಕಟೇಶ್ ಪ್ರಸಾದ್ ತನ್ನ ಬಾಳಸಂಗಾತಿಯಾಗಿ ಆರಿಸಿಕೊಂಡಿದ್ದು ಒಬ್ಬ ವಿಧವೆಯನ್ನು ಎಂದು? ಗೊತ್ತಿದ್ದರೆ ನಮ್ಮ ಹಾರ್ದಿಕ ಅಭಿನಂದನೆ ಏಕೆ ಎಂದು ನಿಮಗೆ ಅರ್ಥವಾಗಿರಬೇಕು.


ನಮ್ಮ ಸಮಾಜದಲ್ಲಿ ಈಗಲೂ ವಿಧವೆಯನ್ನು ಮತ್ತು ವಿವಾಹ ವಿಚ್ಛೇದನಗೊಂಡ ಮಹಿಳೆಯರನ್ನು ಎಷ್ಟು ಹೀನಾಯವಾಗಿ ಕಾಣಲಾಗುತ್ತಿದೆ, ತನ್ನದಲ್ಲದ ತಪ್ಪಿಗೆ ಆಕೆ ಎಂತಹ ಘೋರ ನರಕಯಾತನೆ ಅನುಭವಿಸ ಬೇಕಾಗುತ್ತದೆ ಎಂಬುದು ಬಹುಶಃ ಅದನ್ನು ಅನುಭವಿಸಿದ ಆಕೆಗೇ ಗೊತ್ತು. ಪಾಳೆಗಾರಿ ಸಮಾಜ ಧರ್ಮದ ಹೆಸರಿನಲ್ಲಿ, ಸಾಮಾಜಿಕ ಕಟ್ಟಳೆಗಳ ಹೆಸರಲ್ಲಿ ಹಾಕಿದ ಈ ಬೇಲಿಗಳನ್ನು ಮುರಿಯಬೇಕೆಂಬ ಪ್ರಗತಿಪರ ಮಹಿಳಾ ಸಂಘಟನೆಗಳ ನಿರಂತರ ಪ್ರಯತ್ನಗಳು, ದೀರ್ಘ ಹೋರಾಟಗಳು ಈಗ ಅಲ್ಲಲ್ಲಿ ತುಸು ಪ್ರಮಾಣದಲ್ಲಾದರೂ ಫಲ ಕಾಣುತ್ತಿರುವಂತಿದೆ. ಕರ್ನಾಟಕದ ಈ ಇಬ್ಬರು ಯುವ ಕ್ರೀಡಾಪಟುಗಳು ಸಾಮಾಜಿಕ ರಂಗದಲ್ಲಿ ತೋರಿದ ದಿಟ್ಟತನ ಅದಕ್ಕೆ ಉದಾಹರಣೆಗಳು. ಅದೇ ವೇಳೆಗೆ ಚಿತ್ರನಟ-ನಟಿಯರನ್ನು, ಕ್ರಿಕೆಟಿಗರನ್ನು ಹೀರೋಗಳಾಗಿ ಪ್ರದರ್ಶಿಸುವ ಮಾಧ್ಯಮ ಅಂತಹ ಜನರ ಇಂತಹ ದಿಟ್ಟತನವನ್ನು ಮಾತ್ರ ಮೂಲೆಗೆ ತಳ್ಳುವುದನ್ನು ನಾವು ಗಮನಿಸಬೇಕು.



ಬಾಲಿವುಡ್ ಶಿವಸೇನೆಯ ಹಿಡಿತದಲ್ಲಿದೆಯೆ

ಅಮೆರಿಕಾದ ಹಾಲಿವುಡ್ ಪಾಶ್ಚಿಮಾತ್ಯ ಚಲನಚಿತ್ರೋದ್ಯಮದ ಕೇಂದ್ರ. ಅದೇ ರೀತಿ ಭಾರತದ ಚಿತ್ರೋದ್ಯಮದ ಕೇಂದ್ರವಾದ ಮುಂಬೈ ಚಿತ್ರೋದ್ಯಮವನ್ನು ಬಾಲಿವುಡ್ ಎನ್ನುತ್ತಾರೆ ಎಂಬುದು ನಿಮಗೆ ತಿಳಿದಿರಬಹುದು. ಶಿವಸೇನೆಗೇನು ಕೆಲಸ ಎನ್ನುತ್ತೀರಾ? ಇಲ್ಲಿ ಮರಾಠಿ ಇತಿಹಾಸ, ಸಂಸ್ಕೃತಿಯ ರಕ್ಷಣೆಗೆಂದು ಹುಟ್ಟಿರುವ ಬಹಳಷ್ಟು ಫಿಲಂ ಪ್ರೊಡಕ್ಷನ್, ಹಣಕಾಸು, ಫಿಲಂಗಳ ಬಿಡುಗಡೆ, ಹಂಚಿಕೆ ಮತ್ತು ತಮಗೆ ಬೇಡವೆನಿಸಿದ ಫಿಲಂಗಳ ತಡೆ-ಎಲ್ಲದರಲ್ಲೂ ಈಗ ಶಿವಸೇನೆ, ಅದರ ಮುಖಂಡ ಬಾಳಾಠಾಕ್ರೆಯದೇ 'ದಬಾವ್' ಅಂತೆ. ಆದರೆ ಇದರಲ್ಲಿ ಮಹಾರಾಷ್ಟ್ರದ ಹಿತದ ಮರಾಠಿ ಭಾಷೆಯ ಅಭಿವೃದ್ಧಿಯ ಪ್ರಶ್ನೆ ಎಳ್ಳಷ್ಟೂ ಇಲ್ಲ ಎಂಬುದನ್ನು ಗಮನಿಸಬೇಕು.

ದಿಲೀಪ್ ಕುಮಾರ್ 50 ವರ್ಷಗಳ ಕಾಲ ದುಡಿದ ಈ ರಂಗದಲ್ಲಿ ಶಿವಸೇನೆ ಅವರ ಮೇಲೆ ಧಾಳಿ ಮಾಡಿದಾಗ ಸ್ವಲ್ಪವೂ ಬೆಂಬಲ ಸಿಗಲಿಲ್ಲ ಎಂಬುದನ್ನು ಕಳೆದ ವಾರ ಇದೇ ಪುಟದಲ್ಲಿ ಓದಿದ್ದೀರಿ. ಏಕೆ ಹೀಗಾಯಿತು. ಅವರ ಸಮಕಾಲೀನರಾದ ದೇವಾನಂದ್, ಸುನೀಲ್ ದತ್ ತಮ್ಮ ಈ ವೃತ್ತಿ ಗೆಳೆಯನ ಸಹಾಯಕ್ಕೆ ಧಾವಿಸಲಿಲ್ಲ ಅಷ್ಟೇಕೆ ತುಟಿಪಿಟಿಕ್ಕೆನ್ನಲಿಲ್ಲ. ದಿಲೀಪ್‌ಕುಮಾರರ ನಿಜ ಹೆಸರು ಯೂಸುಫ್ ಖಾನ್. ಮುಂಬೈ ಚಿತ್ರರಂಗದಲ್ಲಿ 'ಯೂಸುಫ್ ಭಾಯಿ'(ಯೂಸುಫಣ್ಣ)ಎಂದೇ ಹೆಸರಾಗಿರುವ ಈ ಖಾನ್‌ರ ಬೆಂಬಲಕ್ಕೆ ಈಗಿನ ಮೂರು ಯುವಕ 'ಖಾನ್'ಗಳು - ಶಾರೂಕ್, ಅಮೀರ್ ಹಾಗೂ ಸಲ್ಮಾನ್ - ಕೂಡಾ ಬರಲಿಲ್ಲ ಏಕೆ?



ಏಕೆಂದರೆ "ಮುಂಬೈ ಚಿತ್ರೋದ್ಯಮ ಒಂದು ಸಂಪೂರ್ಣ ಭಿನ್ನವಾದ ಜಾಗ ಈಗ. ಹೊಸ-ಹೊಸ ಹಿರೋ, ಹಿರೋಯಿನ್‌ಗಳು, ಪ್ರೊಡ್ಯೂಸರ್‌ಗಳು ಬಂದಿದ್ದಾರೆ. ಜತೆಗೆ ಹೊಸ ಮೌಲ್ಯಗಳು. ಯಾವುದೇ ವಿಷಯದ ಪರವಾಗಿ, ಯಾವುದೇ ವ್ಯಕ್ತಿಯ ಪರವಾಗಿ ಅವರು ನಿಲ್ಲುತ್ತಾರೆ ಎಂದು ನಾನು ನಿರೀಕ್ಷಿಸಲಾರೆ. ವಿಧೇಯತೆ, ಜತೆಗಾರಿಕೆ ಇವೆಲ್ಲಾ ಹಳೆಯ ಫ್ಯಾಶನ್‌ನ ಮೌಲ್ಯಗಳು ತಾನೆ?" ಎನ್ನುತ್ತಾರೆ ಖೇದದಿಂದ ದಿಲೀಪ್ ಕುಮಾರ್. ಕೋಟಿಗಟ್ಟಲೆ ಹಣ ಮಾಡುವುದಷ್ಟೇ ಏಕೈಕ ಮೌಲ್ಯವಾಗಿ ಬಿಟ್ಟಿದೆ ಇಲ್ಲಿ ಎನ್ನುತ್ತಾರೆ ಒಬ್ಬ ಚಿತ್ರ ವಿಮರ್ಶಕ. ಆದರೆ ದಿಲೀಪ್ ಕುಮಾರರು ಶಿವಸೇನೆಯ ಧಾಳಿ ಎದುರಿಸುವಲ್ಲಿ ಏಕಾಂಗಿಯಾಗಲು ಇದೊಂದೇ ಕಾರಣವೇ?

ಇಲ್ಲ, ಯುವಕ ಖಾನ್‌ಗಳು, ಹಿರಿಯ ಕುಮಾರ್‌ಗಳ ಮೌನ ಆಕಸ್ಮಿಕವಲ್ಲ. ಅದರ ಹಿಂದೆ ಒಂದು ಜ
ಇನ್ನೊಂದು ಕಾರಣವಿದೆ ಎನ್ನುತ್ತಾರೆ ಇನ್ನೊ
ವಿಮರ್ಶಕ. ಅದೆಂದರೆ ಮುಂಬೈ ಚಿತ್ರರಂಗ
ಶಿವಸೇನೆಯ ಹಿಡಿತ. ಯಾವುದೇ ಹಿಂದಿ 'ಫಿ
ನ್ನು ರೂಪಿಸುವ ಅಥವಾ ಮೂಲೆಗುಂಪು
ಶಕ್ತಿ ಈಗ ಬಾಳಾ ಠಾಕ್ರೆಗಿದೆಯಂತೆ. (ಆತನ ಸ
ದೊಡ್ಡ ಹಿಂದಿ ಫಿಲಂಗಳ ಪ್ರೊಡ್ಯೂಸರಂತೆ) ಆ
ಬೆಂಬಲಿಗರ ಮಾತುಗಳಿಗೆ ಸೈ ಎಂದರೆ ಸಂಪೂ
ದಿಲೀಪ್ ಕುಮಾರ್, ಶಬಾನಾ
ಎ.ಕೆ.ಹಾನಗಲ್‌ಗಳಂತೆ ಸ್ವಂತ
ಉಪಯೋಗಿಸಿದವರ ಮೇಲೆ ಶಿವಸೈನಿಕರ ಧಾಳಿ
ಖಾನ್ ಮತ್ತು ಮೂವರು ಹಿರೋಯಿ
ರಾಜಸ್ಥಾನದ ಅರೆ ಮರುಭೂಮಿಯಲ್ಲಿ 'ಚಿಂಕಾರ
ಕರೆಯುವ ಈಗ ಅಪರೂಪವಾಗುತ್ತಿರುವ ಕಡ
ಕಾನೂನುಬಾಹಿರವಾಗಿ ಬೇಟೆಯಾಡಿ
ದೇಶದಲ್ಲೆಲ್ಲಾ ಪ್ರತಿಭಟನೆಯೆದ್ದರೂ ಶಿವಸೇ
ಮುಚ್ಚಿಕೊಂಡಿತ್ತು ನೆನಪಿದೆಯೇ? ಸುನಿಲ್ ದ
ಸಂಜಯದತ್ ಮೇಲೆ ಮುಂಬೈ ಸ್ಫೋ
ಭಯೋತ್ಪಾದಕರೊಂದಿಗೆ ಶಾಮೀಲಾದ
ಬಂದಾಗ, ಆಗಿನ ಕಾಂಗ್ರೆಸ್ ಸರಕಾರ ಸುನಿ
ನೆರವಿಗೆ ಬರದಿದ್ದಾಗ ನೆರವು ನೀ
ಬಾಳಾಠಾಕ್ರೆಯಂತೆ. ಅಮಿತಾಭ್ ಬಚ್ಚನ್ ದ
ಬಿಟ್ಟು ಬರಲೇಬೇಕಾದಾಗ ಕಾಂಗ್ರೆಸ್ಸಿಗನಾದರು
ಬಾಲಿವುಡ್‌ನಲ್ಲಿ ಮತ್ತೆ ನೆಲೆಯೂರಲು ನೆ
ಬಾಳಾಠಾಕ್ರೆಯಂತೆ. ಅಷ್ಟೊಂದು ಪ್ರಭಾವವಂ
ಆದ್ದರಿಂದಲೇ ಸಿನಿಮಾ ತೆರೆಯ ಮೇ
'ದೇಶಪ್ರೇಮಿ'ಗಳು,
ಯಂಗ್‌ಮ್ಯಾನ್‌ಗಳು' ಶಿವಸ
ದಾಂಧಲೆ ವಾ
ಮೌನವಾಗಿರುತ್ತಾರೆ.

ಒಂದೊಮ್ಮೆ ದೇಶದಲ್ಲಿ ಜ
ಮೌಲ್ಯಗಳ ಒಂದು ಪ
ಆಗರವೆನಿಸಿದ ಮುಂಬೈ ಚಿತ್ರ
ಐದು ದಶಕಗಳ ಕಾಲ ದುಡಿದ
ಕುಮಾರ್ 'ನಾವೀಗ ಮೊದಲ
ಚಾರಿತ್ರ್ಯ ಕಳೆದುಕೊಂ
ಎರಡನೆಯದಾಗಿ ಜಾತ
ಹಂದರವನ್ನೇ ಕಳಕೊಂಡಿದ್ದೇ
ಖೇದ ಪಡುವುದು ಸಹಜವೇ
ಪ್ರವೃತ್ತಿ ಸಾಂಸ್ಕೃತಿಕ ರಂಗದಲ್ಲಿ ಎಂತಹ ಆವ
ಎಂಬುದಕ್ಕೆ ಈಗಿನ ಬಾಲಿವುಡ್ ಒಂದು ಉ

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ